

**ವಿಶೇಷ ವರದಿ** | **ವೇತನ, ಭದ್ರತೆ, ಘನತೆ, ಹೋ!**


ಪುಟ - 12-17

» ಸಂಪುಟ 1, ಸಂಚಿಕೆ 7

» ಅಕ್ಟೋಬರ್ 1–15, 2020

ಉಚಿತ ವಿತರಣೆಗಾಗಿ

# ನ್ಯೂ ಇಂಡಿಯಾ ಸಮಾಚಾರ



ವಿಶೇಷ ಸಂಚಿಕೆ : ಕೃಷಿ ಮತ್ತು ಕಾರ್ಮಿಕ ಸುಧಾರಣೆಗಳು

## ಸ್ವಾವಲಂಬಿ ರೈತರು; ಸ್ವಾವಲಂಬಿ ಭಾರತ

ವದಂತಿಗಳು ಮತ್ತು ಪ್ರತಿಭಟನೆಗಳ ವೈಚಿತ್ರ್ಯಗಳನ್ನು ಸರಿದೂಗಿಸುವ ಸರ್ಕಾರದ ಕ್ರಾಂತಿಕಾರಿ ಕ್ರಮಗಳು

ಮಧ್ಯವರ್ತಿಗಳ ಹಿಡಿತದಿಂದ ರೈತರನ್ನು ಮುಕ್ತಗೊಳಿಸಿ ಸ್ವಾತಂತ್ರ್ಯವನ್ನು ಖಚಿತಪಡಿಸುತ್ತದೆ



# ಹೋಗಿ ಬನ್ನಿ ಪ್ರಣವ್ ದಾ...

ಮಾಜಿ ರಾಷ್ಟ್ರಪತಿ, ಭಾರತ ರತ್ನ ಡಾ.ಪ್ರಣಬ್ ಮುಖರ್ಜಿ ಅವರು 2020ನೇ ಆಗಸ್ಟ್ 31 ರಂದು ನಿಧನರಾದರು. ಅವರೊಂದಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಸದಾ ಉತ್ತಮ ಸಂಬಂಧ ಹೊಂದಿದ್ದರು. ಅವರು ಸಾರ್ವಜನಿಕ ಜೀವನದಿಂದ ನಿವೃತ್ತರಾದಾಗ ಪ್ರಧಾನ ಮಂತ್ರಿಯವರು ಬರೆದ ಭಾವನಾತ್ಮಕ ಪತ್ರದಲ್ಲಿ "ನೀವು ಯಾವಾಗಲೂ ನನಗೆ ತಂದೆಯ ಸ್ಥಾನದಲ್ಲಿದ್ದೀರಿ ಮತ್ತು ಮಾರ್ಗದರ್ಶಕರಾಗಿದ್ದೀರಿ. ನಿಮ್ಮ ಬುದ್ಧಿವಂತಿಕೆ, ಮಾರ್ಗದರ್ಶನ ಮತ್ತು ವೈಯಕ್ತಿಕ ಆತ್ಮೀಯತೆ ನನಗೆ ಹೆಚ್ಚಿನ ವಿಶ್ವಾಸ ಮತ್ತು ಶಕ್ತಿಯನ್ನು ನೀಡಿದೆ" ಎಂದು ಹೇಳಿದ್ದರು.

"ಭಾರತರತ್ನ ಶ್ರೀ ಪ್ರಣಬ್ ಮುಖರ್ಜಿ ಅವರ ನಿಧನಕ್ಕೆ ಭಾರತ ದುಃಖತಪ್ತವಾಗಿದೆ. ಅವರು ನಮ್ಮ ರಾಷ್ಟ್ರದ ಅಭಿವೃದ್ಧಿಯ ಪಥದಲ್ಲಿ ಅಳಿಸಲಾಗದ ಗುರುತು ಮೂಡಿಸಿದ್ದಾರೆ. ಶ್ರೇಷ್ಠ ವಿದ್ವಾಂಸರೂ, ಉನ್ನತ ನಾಯಕರೂ ಆದ ಅವರನ್ನು ಎಲ್ಲ ರಾಜಕೀಯ ಪಕ್ಷಗಳು ಮತ್ತು ಸಮಾಜದ ಎಲ್ಲಾ ವರ್ಗದವರೂ ಇಷ್ಟಪಡುತ್ತಿದ್ದರು."

ಪ್ರಧಾನಿ ನರೇಂದ್ರ ಮೋದಿ

ನ್ಯೂ ಇಂಡಿಯಾ
# ಸಮಾಚಾರ

ಸಂಪುಟ 1, ಸಂಚಿಕೆ 7 ಅಕ್ಟೋಬರ್ 1–15, 2020

**ಸಂಪಾದಕ**
ಕುಲದೀಪ್ ಸಿಂಗ್ ಧತ್ವಾಲಿಯಾ
ಪ್ರಧಾನ ಮಹಾನಿರ್ದೇಶಕರು,
ಪಿಐಬಿ, ನವದೆಹಲಿ

**ಸಲಹಾ ಸಂಪಾದಕ**
ವಿನೋದ್ ಕುಮಾರ್

**ಸಹಾಯಕ ಸಲಹಾ ಸಂಪಾದಕ**
ಶರತ್ ಕುಮಾರ್ ಶರ್ಮ

**ವೃತ್ತಿಪರ ವಿನ್ಯಾಸಕ**
ರವೀಂದ್ರ ಕುಮಾರ್ ಶರ್ಮ

**ಮುದ್ರಕರು ಮತ್ತು ಪ್ರಕಾಶಕರು**
ಸತ್ಯೇಂದ್ರ ಪ್ರಕಾಶ್
ಮಹಾನಿರ್ದೇಶಕರು,
ಬ್ಯೂರೋ ಆಫ್ ಔಟ್ ರೀಚ್
ಅಂಡ್ ಕಮ್ಯೂನಿಕೇಷನ್, ಪರವಾಗಿ

**ಮುದ್ರಣಾಲಯ**
ಇನ್‌ಫಿನಿಟಿ ಅಡ್ವರ್ಟೈಸಿಂಗ್
ಸರ್ವಿಸಸ್ ಪ್ರೈ. ಲಿಮಿಟೆಡ್
ಎಫ್‌ಬಿಡಿ–ಒನ್ ಕಾರ್ಪೋರೇಟ್
ಪಾರ್ಕ್, 10ನೇ ಮಹಡಿ,
ನವದೆಹಲಿ–ಫರೀದಾಬಾದ್ ಬಾರ್ಡರ್
ಎನ್‌ಹೆಚ್–1 ಫರೀದಾಬಾದ್–121003

**ಪ್ರಕಾಶಕರು**
ಬ್ಯೂರೋ ಆಫ್ ಔಟ್ ರೀಚ್
ಅಂಡ್ ಕಮ್ಯೂನಿಕೇಷನ್
2ನೇ ಮಹಡಿ, ಸೂಚನಾ ಭವನ,
ನವದೆಹಲಿ–110003

**ನ್ಯೂ ಇಂಡಿಯಾ ಸಮಾಚಾರ**

RNI No. : DELKAN/2020/78828

response-nis@pib.gov.in

## ಒಳಗೆ

| | | |
|---|---|---|
| » 1 | **ಸಂಪಾದಕೀಯ** | » ಪುಟ 02 |
| » 2 | **ಆರೋಗ್ಯ:** ಪೋಷಕಾಂಶ ಮಾಸ | » ಪುಟ 03 |
| » 3 | **ಸುದ್ದಿ ತುಣುಕುಗಳು** | » ಪುಟ 04-05 |
| » 4 | **ಮಹಾತ್ಮ ಗಾಂಧೀಜಿ ಜಯಂತ್ಯುತ್ಸವ** | » ಪುಟ 06-07 |
| » 5 | **ಜವಳಿ ಕ್ಷೇತ್ರ :** ಖಾದಿಯ ಪ್ರಗತಿ | » ಪುಟ 08-9 |
| » 6 | **ರಾಷ್ಟ್ರ :** ಜಾಗತಿಕ ಅನುಶೋಧನಾ ಸೂಚ್ಯಂಕ | » ಪುಟ 10-11 |
| » 7 | **ವಿಶೇಷ ವರದಿ:** ಕಾರ್ಮಿಕ ಸುಧಾರಣೆಗಳು | » ಪುಟ 12-17 |
| » 8 | **ಮುಖಪುಟ ಲೇಖನ:** ಕೃಷಿ ಸುಧಾರಣೆಗಳು | » ಪುಟ 18-25 |
| » 9 | **ಉಪಕ್ರಮ :** ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆ | » ಪುಟ 26-28 |
| » 10 | **ರಾಜ್ಯ:** ಅಭಿವೃದ್ಧಿ ಯೋಜನೆಗಳು | » ಪುಟ 29 |
| » 11 | **ನೆರವಿನ ಹಸ್ತ:** ಪಿಎಂ ಸ್ವನಿಧಿ ಯೋಜನೆ | » ಪುಟ 30-31 |
| » 12 | **ಕರ್ಮಯೋಗಿ ಅಭಿಯಾನ:** ಉತ್ತಮ ಆಡಳಿತದ ಉಪಕ್ರಮ | » ಪುಟ 32-34 |
| » 13 | **ಸ್ವಾವಲಂಬನೆ:** ಹೆಚ್‌ಎಸ್‌ಟಿಡಿವಿ ಉಡಾವಣೆ | » ಪುಟ 35 |
| » 14 | **ಪ್ರಮುಖ ಯೋಜನೆ:** ಸ್ವಚ್ಛ ಭಾರತ ಅಭಿಯಾನ | » ಪುಟ 36-38 |
| » 15 | **ಕೊರೊನಾ ವಿರುದ್ಧ ಸಮರ** | » ಪುಟ 39 |
| » 16 | **ಸಕಾರಾತ್ಮಕ ಕ್ರಮ:** ಬದಲಾಗುತ್ತಿರುವ ಭಾರತ | » ಪುಟ 40 |

# ಸಂಪಾದಕೀಯ

ಎಲ್ಲರಿಗೂ ನಮಸ್ಕಾರ,

ನ್ಯೂ ಇಂಡಿಯಾ ಸಮಾಚಾರದ ಏಳನೇ ಸಂಚಿಕೆ ಈಗ ನಿಮ್ಮ ಕೈಯಲ್ಲಿದೆ. ಈಗ ನೀವು ಪತ್ರಿಕೆಗಾಗಿ ಕುತೂಹಲದಿಂದ ಕಾಯುತ್ತಿರಬೇಕು.

ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ದಕ್ಷ ಸರ್ಕಾರ ಕಾರ್ಯನಿರ್ವಹಿಸುತ್ತಿದೆ.

ಈ ಸರ್ಕಾರವು ದೇಶವನ್ನು ಪ್ರತಿಯೊಂದು ಆಯಾಮದಲ್ಲೂ ಮುಂದೆ ಕೊಂಡೊಯ್ಯಲು ಬದ್ಧವಾಗಿದೆ. ಈ ವಿಶೇಷ ಸಂಚಿಕೆಯುಲ್ಲಿ ಕೃಷಿಕರು ಹಾಗು 50 ಕೋಟಿ ಕಾರ್ಮಿಕರಿಗೆ ಅನುಕೂಲವಾಗುವಂತಹ ಸರ್ಕಾರ ಕೈಗೊಂಡ ನಿರ್ಧಾರಗಳ ಬಗ್ಗೆ ವಿವರವಾದ ಮಾಹಿತಿ ಪಡೆಯುವಿರಿ.

ಸರ್ಕಾರದ ನಿರ್ಧಾರಗಳು, ಕೆಲಸಗಳು ಮತ್ತು ಯೋಜನೆಗಳ ಬಗ್ಗೆ ಓದುಗರು ಎಲ್ಲಾ ಮಾಹಿತಿ ಪಡೆಯುತ್ತಾರೆ.

ಪತ್ರಿಕೆಯು ಸರ್ಕಾರದ ಮುಖವಾಣಿಯಲ್ಲ ಆದರೆ ಸರಿಯಾದ ಮಾಹಿತಿಯನ್ನು ನೀಡುವ ವೇದಿಕೆಯಾಗಿದೆ.

ಈ ಪತ್ರಿಕೆಯು ಗ್ರಾಮ ಪಂಚಾಯಿತಿಗಳು, ಜಿಲ್ಲಾ ಪಂಚಾಯತ್‌ಗಳು, ಪಂಚಾಯತ್ ಸಮಿತಿಗಳು, ಗ್ರಂಥಾಲಯಗಳು, ಶಾಸಕರು, ಸಂಸದರು, ಅಧಿಕಾರಿಗಳು ಮತ್ತು ಪತ್ರಕರ್ತರಿಗೆ ಸಿಗಲಿದೆ.

ಪತ್ರಿಕೆಯ ಇ-ಆವೃತ್ತಿಯು ಈಗ ಸುಮಾರು 5 ಕೋಟಿ ಜನರಿಗೆ ಲಭ್ಯವಿದೆ.

ನಿಮ್ಮ ಪ್ರತಿಕ್ರಿಯೆ ಮತ್ತು ಸಲಹೆಗಳಿಗಾಗಿ ನಾವು ಕುತೂಹಲದಿಂದ ಕಾಯುತ್ತಿದ್ದೇವೆ.

ದಯವಿಟ್ಟು ನಿಮ್ಮ ಪ್ರತಿಕ್ರಿಯೆಯನ್ನು ಇಲ್ಲಿಗೆ ಕಳುಹಿಸಿ:

ವಿಳಾಸ : ಬ್ಯೂರೋ ಆಫ್ ಔಟ್ ರೀಚ್ ಅಂಡ್ ಕಮ್ಯುನಿಕೇಷನ್,
ಎರಡನೇ ಮಹಡಿ, ಸೂಚನಾ ಭವನ, ನವದೆಹಲಿ - 110003

ಇ-ಮೇಲ್ : response-nis@pib.gov.in

ನಿಮ್ಮ ಹಾರೈಕೆಯಿರಲಿ,

(ಕೆ ಎಸ್ ಧತ್ವಾಲಿಯಾ)



# ಪೋಷಣಾ ಮಾಸ: ಒಂದು ಜನಾಂದೋಲನ

ಮಹಿಳೆಯರು, ಮಕ್ಕಳು ಮತ್ತು ವೃದ್ಧರಿಂದ ಗುಣಮಟ್ಟದ ಆಹಾರ ಸೇವನೆಯೊಂದಿಗೆ ಪೌಷ್ಟಿಕ ಮಾಸ ಅಭಿಯಾನವನ್ನು ಆರಂಭಿಸಲಾಯಿತು.

ದೇಶ ಮತ್ತು ಪೋಷಣೆ ಬಹಳ ನಿಕಟವಾದ ಸಂಬಂಧ ಹೊಂದಿವೆ. ಪೌಷ್ಟಿಕಾಂಶದ ಬಗ್ಗೆ ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸಲು ಸರ್ಕಾರವು ಸೆಪ್ಟೆಂಬರ್ ತಿಂಗಳನ್ನು 'ರಾಷ್ಟ್ರೀಯ ಪೋಷಣಾ ಮಾಸ' ಎಂದು ಆಚರಿಸುತ್ತದೆ. ಮಕ್ಕಳು ಮತ್ತು ಮಹಿಳೆಯರಲ್ಲಿ ಅಪೌಷ್ಟಿಕತೆಯ ಸಮಸ್ಯೆಗಳನ್ನು ನಿವಾರಿಸಲು ಮತ್ತು ಎಲ್ಲರಿಗೂ ಆರೋಗ್ಯ ಮತ್ತು ಪೋಷಣೆಯನ್ನು ಖಾತ್ರಿಪಡಿಸಿಕೊಳ್ಳಲು ಜನರ ಭಾಗವಹಿಸುವಿಕೆಯನ್ನು ಉತ್ತೇಜಿಸಿ ಜನಾಂದೋಲನವನ್ನು ರೂಪಿಸುವ ಉದ್ದೇಶವನ್ನು ಪ್ರಧಾನ ಮಂತ್ರಿಯವರ ಸಮಗ್ರ ಪೋಷಣೆ ಯೋಜನೆಯು (ಪೋಷಣ್) ಹೊಂದಿದೆ.

ಪ್ರಧಾನಿ ನರೇಂದ್ರ ಮೋದಿಯವರು ತಮ್ಮ ಇತ್ತೀಚಿನ ಮನದ ಮಾತು ಸಂಚಿಕೆಯಲ್ಲಿ, "ಯಥಾ ಅನ್ನಮ್ ತಥಾ ಮನ್ನಮ್" ಅಂದರೆ, ಮಾನಸಿಕ ಮತ್ತು ಬೌದ್ಧಿಕ ಬೆಳವಣಿಗೆಯು ಗುಣಮಟ್ಟದ ಆಹಾರ ಸೇವನೆಗೆ ನೇರವಾಗಿ ಸಂಬಂಧಿಸಿದೆ ಎಂಬ ಸುಭಾಷಿತವನ್ನು ನೆನಪಿಸಿಕೊಂಡರು,

ಮಕ್ಕಳು ಮತ್ತು ವಿದ್ಯಾರ್ಥಿಗಳು ಅತ್ಯುತ್ತಮ ಸಾಮರ್ಥ್ಯವನ್ನು ಸಾಧಿಸಲು ಸೂಕ್ತ ಪೋಷಣೆಯು ದೊಡ್ಡ ಪಾತ್ರವನ್ನು ವಹಿಸುತ್ತದೆ. ಅಲ್ಲದೆ, ಮಕ್ಕಳು ಉತ್ತಮ ಪೌಷ್ಟಿಕಾಂಶಗಳನ್ನು ಪಡೆಯಬೇಕಾದರೆ ತಾಯಂದಿರು ಸಹ ಸರಿಯಾದ ಪೋಷಣೆಯನ್ನು ಪಡೆಯಬೇಕು.

ಗುಜರಾತ್‌ನ ಸರ್ದಾರ್ ವಲ್ಲಭಭಾಯ್ ಪಟೇಲ್ ಅವರ ಏಕತಾ ಪ್ರತಿಮೆಯ ಬಳಿ ರೂಪಿಸಲಾಗಿರುವ ಪೌಷ್ಟಿಕಾಂಶ ಉದ್ಯಾನದ ಬಗ್ಗೆಯೂ ಪ್ರಧಾನಿ ಮಾತನಾಡಿದರು. "ಅಲ್ಲಿ ಒಂದು ವಿಶಿಷ್ಟ ರೀತಿಯ ಪೌಷ್ಟಿಕಾಂಶ ಉದ್ಯಾನವನ್ನು ಅಭಿವೃದ್ಧಿಪಡಿಸಲಾಗಿದೆ. ನೀವು ವಿನೋದ ಮತ್ತು ಉಲ್ಲಾಸದ ಜೊತೆಗೆ ಪೌಷ್ಟಿಕಾಂಶಕ್ಕೆ ಸಂಬಂಧಿಸಿದ ಮಾಹಿತಿಯನ್ನು ಅಲ್ಲಿ ಪಡೆಯಬಹುದು" ಎಂದು ಅವರು ಹೇಳಿದರು. ■

## ರಾಷ್ಟ್ರೀಯ ಪೌಷ್ಟಿಕ ಅಭಿಯಾನ

- 2017–18 ರಿಂದ ಪ್ರಾರಂಭವಾಗಿ ಮೂರು ವರ್ಷಗಳವರೆಗೆ 9,046.17 ಕೋಟಿ ರೂ.ಗಳ ಬಜೆಟ್‌ನೊಂದಿಗೆ ರಾಷ್ಟ್ರೀಯ ಪೌಷ್ಟಿಕಾಂಶ ಅಭಿಯಾನ (ಎನ್‌ಎನ್‌ಎಂ) ಸ್ಥಾಪಿಸಲು ಕೇಂದ್ರ ಸಚಿವ ಸಂಪುಟವು 2017ರ ಡಿಸೆಂಬರ್‌ನಲ್ಲಿ ಅನುಮೋದನೆ ನೀಡಿತು.
- ಪೋಷಣಾ ಅಭಿಯಾನಕ್ಕೆ ಪ್ರಧಾನಮಂತ್ರಿಯವರು 2018ರ ಮಾರ್ಚ್ 8 ರಂದು ರಾಜಸ್ಥಾನದ ಝುಂಝುನುವಿನಲ್ಲಿ ಅಧಿಕೃತವಾಗಿ ಚಾಲನೆ ನೀಡಿದರು.
- 2022ರ ವೇಳೆಗೆ ಅಪೌಷ್ಟಿಕತೆಯನ್ನು ಶೇಕಡಾ 25ಕ್ಕೆ ಇಳಿಸಲು ಅಭಿಯಾನ ಶ್ರಮಿಸುತ್ತದೆ.
- ಅಪೌಷ್ಟಿಕತೆ, ರಕ್ತಹೀನತೆಯನ್ನು (ಚಿಕ್ಕ ಮಕ್ಕಳು, ಮಹಿಳೆಯರು ಮತ್ತು ಹದಿಹರೆಯದ ಹೆಣ್ಣು ಮಕ್ಕಳಲ್ಲಿ) ಕಡಿಮೆ ಮಾಡುವುದು ಮತ್ತು ಕಡಿಮೆ ತೂಕದ ಜನನ ಪ್ರಕರಣಗಳನ್ನು ತಗ್ಗಿಸುವುದು ಇದರ ಉದ್ದೇಶವಾಗಿದೆ.
- 2021ರ ಮಾರ್ಚ್ 31 ರವರೆಗೆ ವಿಸ್ತರಿಸಿರುವ ಈ ಯೋಜನೆಯಿಂದ 10 ಕೋಟಿಗೂ ಹೆಚ್ಚು ಜನರಿಗೆ ಅನುಕೂಲವಾಗಲಿದೆ.
- ಸಮಗ್ರ ವಿಧಾನವನ್ನು ಖಚಿತಪಡಿಸಿಕೊಳ್ಳಲು, ಎಲ್ಲಾ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ಮತ್ತು ಜಿಲ್ಲೆಗಳನ್ನು ಇದರಲ್ಲಿ ಸೇರಿಸಲಾಗಿದೆ.

## ಪೌಷ್ಟಿಕತೆ ಮೇಲ್ವಿಚಾರಕರು ಮತ್ತು ಕಾರ್ಡ್‌ಗಳು

- ಭಾರತೀಯ ಪೋಷಣಾ ಕೃಷಿ ಕೋಶ ರಚಿಸಲಾಗುತ್ತಿದೆ. ಇದು ಪ್ರತಿ ಜಿಲ್ಲೆಯಲ್ಲಿ ಬೆಳೆಯುತ್ತಿರುವ ಬೆಳೆಗಳು ಮತ್ತು ಅವುಗಳ ಪೌಷ್ಟಿಕಾಂಶದ ಮೌಲ್ಯದ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಹೊಂದಿರುತ್ತದೆ
- ಮಕ್ಕಳಲ್ಲಿ ಪೌಷ್ಟಿಕಾಂಶದ ಅರಿವು ಹೆಚ್ಚಿಸಲು ಅವರಿಗೆ ಸ್ಪರ್ಧೆಗಳನ್ನು ಏರ್ಪಡಿಸುವ ಮೂಲಕ ಶಾಲೆಗಳನ್ನು ಈ ಸಾಮೂಹಿಕ ಆಂದೋಲನಕ್ಕೆ ಸಂಯೋಜಿಸಲಾಗಿದೆ



- ತರಗತಿಗೆ ಒಬ್ಬ ಮಾನಿಟರ್ ಇರುವಂತೆ, ಪ್ರತಿ ತರಗತಿಯಲ್ಲೂ ಪೌಷ್ಟಿಕ ಮಾನಿಟರ್ ಇರುತ್ತಾರೆ
- ಪೌಷ್ಟಿಕ ಕಾರ್ಡ್ ಪರಿಚಯಿಸಲಾಗುವುದು



## ವಾರಾಣಸಿ, ಪವಿತ್ರ ಮತ್ತು ಸ್ವಚ್ಛ

ಸ್ವಚ್ಛ ಗಂಗೆಗಾಗಿ ಜನರು ತೋರಿದ ಬದ್ಧತೆಯಿಂದಾಗಿ ವಾರಾಣಸಿಯ ಘಟ್ಟಗಳು ಗತವೈಭವಕ್ಕೆ ಮರಳುತ್ತಿವೆ. 2020 ರ ಸ್ವಚ್ಛ ಸರ್ವೇಕ್ಷಣೆಯಲ್ಲಿ ಗಂಗಾ ನದಿ ತಟದಲ್ಲಿರುವ ನಗರಗಳ ಪೈಕಿ ವಾರಾಣಸಿಯು ಸ್ವಚ್ಛ ನಗರವಾಗಿ ಹೊರಹೊಮ್ಮಿರುವುದು ಇದರಿಂದ ಗೊತ್ತಾಗಿದೆ. ವಾರಾಣಸಿಯ ಅರ್ಚಕರೊಬ್ಬರು, ಜನರು ಈಗ ಆಚಮನ ಮಾಡಲು ಹಿಂಜರಿಯುವುದಿಲ್ಲ ಎಂದು ಹೇಳಿದರು. 140 ಎಂಎಲ್‌ಡಿ ಸಾಮರ್ಥ್ಯದ ಒಳಚರಂಡಿ ಸಂಸ್ಕರಣಾ ಘಟಕವು ಗಂಗಾ ನದಿಯನ್ನು ಸ್ವಚ್ಛಗೊಳಿಸಲು ಬಹಳ ನೆರವಾಗಿರುವುದು ಸಾಬೀತಾಗಿದೆ. ನದಿ ತಟವನ್ನು ಸ್ವಚ್ಛಗೊಳಿಸಲು ಮತ್ತು ಸುಂದರಗೊಳಿಸಲು ಸ್ವಚ್ಛ ಭಾರತ ಮಿಷನ್ ಅಡಿಯಲ್ಲಿ 21 ಪ್ರಮುಖ ಮತ್ತು 63 ಸಾಮಾನ್ಯ ಘಾಟ್‌ಗಳ (ನದಿ ತೀರಗಳು) ವರ್ಗೀಕರಣವನ್ನು ಮಾಡಲಾಗಿದೆ. ಪ್ರತಿದಿನ ಸಂಗ್ರಹಿಸಿದ 8–9 ಮೆಟ್ರಿಕ್ ಟನ್ ತ್ಯಾಜ್ಯವನ್ನು ಕಾಂಪೋಸ್ಟ್ ತಯಾರಿಸಲು ಮುಚ್ಚಿದ ದೋಣಿಗಳಲ್ಲಿ ಕಾಂಪೋಸ್ಟ್ ಘಟಕಕ್ಕೆ ಕೊಂಡೊಯ್ಯಲಾಗುತ್ತದೆ. ವಾರಾಣಸಿ ನಗರವು ಈಗ ಇತರರಿಗೆ ಸ್ಫೂರ್ತಿಯಾಗಿದೆ. ■

## ಭಾರತ ಮತ್ತು ಜಪಾನ್ ಶಸ್ತ್ರಾಸ್ತ್ರಗಳಲ್ಲಿ ಕಾರ್ಯತಂತ್ರದ ಪಾಲುದಾರರು

ಭಾರತೀಯ ಸಶಸ್ತ್ರ ಪಡೆ ಮತ್ತು ಜಪಾನ್‌ನ ಸ್ವಯಂ ರಕ್ಷಣಾ ಪಡೆಗಳ ನಡುವೆ ಸರಬರಾಜು ಮತ್ತು ಸೇವೆಗಳನ್ನು ಪರಸ್ಪರ ಒದಗಿಸುವ ಒಪ್ಪಂದಕ್ಕೆ ಸಹಿ ಹಾಕಿದ್ದನ್ನು ಪ್ರಧಾನಿ ನರೇಂದ್ರ ಮೋದಿ ಮತ್ತು ಅಂದಿನ ಜಪಾನ್ ಪ್ರಧಾನಿ ಅಬೆ ಶಿಂಜೊ ಸ್ವಾಗತಿಸಿದ್ದಾರೆ. ವಿಡಿಯೋ ಕಾನ್ಫರೆನ್ಸ್ ಮೂಲಕ ಮಾತನಾಡಿದ ಅವರು, ಈ ಒಪ್ಪಂದವು ಉಭಯ ದೇಶಗಳ ನಡುವಿನ ರಕ್ಷಣಾ ಸಹಕಾರವನ್ನು ಮತ್ತಷ್ಟು ಗಾಢವಾಗಿಸುತ್ತದೆ ಮತ್ತು ಇಂಡೋ–ಪೆಸಿಫಿಕ್ ಪ್ರದೇಶದಲ್ಲಿ ಶಾಂತಿ ಮತ್ತು ಸುರಕ್ಷತೆಗೆ ಸಹಕಾರಿಯಾಗುತ್ತದೆ ಎಂದು ಒಪ್ಪಿಕೊಂಡರು. ಭಾರತ–ಜಪಾನ್ ವಿಶೇಷ ಕಾರ್ಯತಂತ್ರ ಮತ್ತು ಜಾಗತಿಕ ಸಹಭಾಗಿತ್ವದ ಅಡಿಯಲ್ಲಿ ಮುಂಬೈ–ಅಹಮದಾಬಾದ್ ಹೈ ಸ್ಪೀಡ್ ರೈಲು (ಎಂಎಹೆಚ್‌ಎಸ್‌ಆರ್) ಯೋಜನೆ ಸೇರಿದಂತೆ ಸದ್ಯದ ಸಹಯೋಗದ ಬಗ್ಗೆ ಉಭಯ ನಾಯಕರು ಪರಿಶೀಲಿಸಿದರು. ಕೋವಿಡ್ ನಂತರದ ಜಗತ್ತಿನಲ್ಲಿ ಉಭಯ ದೇಶಗಳ ನಡುವಿನ ಬಲವಾದ ಮತ್ತು ನಿರಂತರ ಪಾಲುದಾರಿಕೆಯು ನಿರ್ಣಾಯಕ ಪಾತ್ರ ವಹಿಸುತ್ತದೆ ಎಂದು ಉಭಯ ನಾಯಕರು ಒಪ್ಪಿಕೊಂಡರು. ■

## ಆರೋಗ್ಯ ಸೇತು ಆ್ಯಪ್‌ನಲ್ಲಿ ನಿಮ್ಮ ಆರೋಗ್ಯ ಸ್ಥಿತಿಯನ್ನು ಪರಿಶೀಲಿಸಿ




ವಿಶ್ವದಲ್ಲೇ ಹೆಚ್ಚು ಡೌನ್‌ಲೋಡ್ ಮಾಡಲಾದ ಸಂಪರ್ಕ ಪತ್ತೆಹಚ್ಚುವ ಆ್ಯಪ್ ಆರೋಗ್ಯ ಸೇತು, ಈಗ 'ಓಪನ್ ಎಪಿಐ ಸರ್ವೀಸ್' ಎಂಬ ಹೊಸ ವೈಶಿಷ್ಟ್ಯವನ್ನು ಸೇರಿಸಿದೆ. ಇದನ್ನು 50ಕ್ಕೂ ಹೆಚ್ಚು ಉದ್ಯೋಗಿಗಳಿರುವ ಭಾರತದಲ್ಲಿ ನೊಂದಾಯಿಸಲಾದ ಸಂಸ್ಥೆಗಳು ಮತ್ತು ವ್ಯಾಪಾರ ಸಂಸ್ಥೆಗಳು ಪಡೆದುಕೊಳ್ಳಬಹುದು. ತಮ್ಮ ನೌಕರರ ಆರೋಗ್ಯ ಸ್ಥಿತಿಯನ್ನು ತಿಳಿಯಲು ಅಥವಾ ತಮ್ಮ ಆರೋಗ್ಯ ಸ್ಥಿತಿಯನ್ನು ಸಂಸ್ಥೆಯೊಂದಿಗೆ ಹಂಚಿಕೊಳ್ಳಲು ತಮ್ಮ ಒಪ್ಪಿಗೆಯನ್ನು ಒದಗಿಸಿರುವ ಯಾವುದೇ ಇತರ ಆರೋಗ್ಯ ಸೇತು ಬಳಕೆದಾರರಿಗೆ 'ಓಪನ್ ಎಪಿಐ ಸೇವೆ' ಬಳಸಬಹುದು. ಓಪನ್ ಎಪಿಐ ಸೇವೆಯು ಆರೋಗ್ಯ ಸೇತು ಸ್ಥಿತಿ ಮತ್ತು ಆರೋಗ್ಯ ಸೇತು ಬಳಕೆದಾರರ ಹೆಸರನ್ನು ಮಾತ್ರ ಒದಗಿಸುತ್ತದೆ. ಎಪಿಐ ಮೂಲಕ ಬೇರೆ ಯಾವುದೇ ವೈಯಕ್ತಿಕ ಡೇಟಾವನ್ನು ಒದಗಿಸಲಾಗುವುದಿಲ್ಲ. 15 ಕೋಟಿಗೂ ಹೆಚ್ಚು ಬಳಕೆದಾರರನ್ನು ಹೊಂದಿರುವ ಆರೋಗ್ಯ ಸೇತು ಹೆಚ್ಚು ಡೌನ್‌ಲೋಡ್ ಮಾಡಲಾದ ಸಂಪರ್ಕ ಪತ್ತೆ ಆ್ಯಪ್ ಆಗಿದೆ. ಜನರು ನೀಡಿದ ಅಗಾಧ ಬೆಂಬಲದಿಂದಾಗಿ ಕೋವಿಡ್–19 ನಿಯಂತ್ರಣ ಮತ್ತು ನಿರ್ವಹಣಾ ಪ್ರಯತ್ನಗಳಲ್ಲಿ ಮುಂಚೂಣಿಯ ಆರೋಗ್ಯ ಕಾರ್ಯಕರ್ತರು ಮತ್ತು ಸರ್ಕಾರದ ಪ್ರಯತ್ನಗಳಿಗೆ ನೆರವಾಗಲು ಇದು ಸಹಾಯ ಮಾಡಿದೆ. ■

## ಲಾಕ್‌ಡೌನ್ ನಡುವೆಯೂ ಜನೌಷಧಿ ಕೇಂದ್ರಗಳಲ್ಲಿ ಚುರುಕಿನ ವ್ಯಾಪಾರ




ಸೇವೆ ಮತ್ತು ಕೆಲಸ ಎರಡೂ – ಎಂಬ ತನ್ನ ಧ್ಯೇಯವಾಕ್ಯಕ್ಕೆ ನ್ಯಾಯ ಒದಗಿಸುವ ರೀತಿಯಲ್ಲಿ ಪ್ರಧಾನಮಂತ್ರಿ ಜನೌಷಧಿ ಯೋಜನೆ (ಪಿಎಂಜೆಎವೈ) ಜನರಿಗೆ ಕಡಿಮೆ ವೆಚ್ಚದಲ್ಲಿ ಔಷಧಿಗಳನ್ನು ಪೂರೈಸುತ್ತಿದೆ. ಜನೌಷಧಿ ಕೇಂದ್ರಗಳಲ್ಲಿ (ಜೆಎಕೆ) ಔಷಧಿಗಳ ಬೆಲೆ ಮಾರುಕಟ್ಟೆಗಿಂತ ಶೇಕಡಾ 50 ರಿಂದ 90 ರಷ್ಟು ಕಡಿಮೆ ಇರುತ್ತದೆ. ಮಾರುಕಟ್ಟೆಯಲ್ಲಿ 6500 ರೂ. ಗೆ ಮಾರಾಟವಾಗುವ ಕ್ಯಾನ್ಸರ್ ಚಿಕಿತ್ಸೆಗೆ ಮೀಸಲಾದ ಔಷಧವು ಜನೌಷಧಿ ಕೇಂದ್ರಗಳಲ್ಲಿ 800 ರೂ. ಗಳಿಗೆ ಲಭ್ಯವಿದೆ! ಕೋವಿಡ್–19 ಲಾಕ್‌ಡೌನ್ ಸಮಯದಲ್ಲಿ, ಜನೌಷಧಿ ಮಾರಾಟವು ಸುಮಾರು 150 ಕೋಟಿ ರೂ. ಗಳನ್ನು ತಲುಪಿದೆ, ಅಂದರೆ ಈ ಹಣಕಾಸು ವರ್ಷದ ಮೊದಲ ತ್ರೈಮಾಸಿಕವು ಹಿಂದಿನ ವರ್ಷದ ಇದೇ ಅವಧಿಯಲ್ಲಿನ ಮಾರಾಟಕ್ಕಿಂತ ದ್ವಿಗುಣಗೊಂಡಿದೆ. ಸೆಪ್ಟೆಂಬರ್ 15, 2020 ರವರೆಗಿನ ಒಟ್ಟು ಮಾರಾಟವು 256 ಕೋಟಿ ರೂ. ಗಳಾಗಿದೆ ಜನೌಷಧಿ ಕೇಂದ್ರಗಳು 1,250 ಕೋಟಿ ರೂ. ಗಳನ್ನು ಗ್ರಾಹಕರಿಗೆ ಉಳಿಸಿವೆ. ದೇಶಾದ್ಯಂತ 6,600 ಕ್ಕೂ ಹೆಚ್ಚು ಜನೌಷಧಿ ಕೇಂದ್ರಗಳಿವೆ, ಅವುಗಳು 1250 ಕ್ಕೂ ಹೆಚ್ಚು ರೀತಿಯ ಔಷಧಿಗಳನ್ನು ಮಾರಾಟ ಮಾಡುತ್ತಿವೆ ಮತ್ತು 250ಕ್ಕೂ ಹೆಚ್ಚು ಬಗೆಯ ಶಸ್ತ್ರಚಿಕಿತ್ಸಾ ಸಾಧನಗಳನ್ನು ಮಾರಾಟ ಮಾಡುತ್ತಿವೆ. ಜನೌಷಧಿ ಕೇಂದ್ರಗಳು ಲಾಕ್‌ಡೌನ್ ಸಮಯದಲ್ಲಿ ಸುಮಾರು 15 ಲಕ್ಷ ಮುಖಗವಸುಗಳು, 80 ಲಕ್ಷ ಹೈಡ್ರಾಕ್ಸಿಕ್ಲೋರೋಕ್ವಿನ್ ಮಾತ್ರೆಗಳು ಮತ್ತು 1 ಕೋಟಿ ಪ್ಯಾರಸಿಟಮಲ್ ಮಾತ್ರೆಗಳನ್ನು ಮಾರಾಟ ಮಾಡಿವೆ. ಈ ಕೇಂದ್ರಗಳಲ್ಲಿ 1 ರೂಪಾಯಿಯಂತೆ 5 ಕೋಟಿಗೂ ಹೆಚ್ಚು ಸ್ಯಾನಿಟರಿ ನ್ಯಾಪ್‌ಕಿನ್‌ಗಳನ್ನು ಮಾರಾಟ ಮಾಡಲಾಗಿದೆ. ■

## ನವ ಭಾರತದ ಅದ್ಭುತ: ಕೋಲ್ಕತ್ತಾದಲ್ಲಿ ನೀರೊಳಗೆ ಮೆಟ್ರೋ



ಸಾಲ್ಟ್ ಲೇಕ್ ಸೆಕ್ಟರ್ 5 ರಿಂದ ಕೋಲ್ಕತ್ತಾದ ಸಾಲ್ಟ್ ಲೇಕ್ ಸ್ಟೇಡಿಯಂವರೆಗೆ 16.5 ಕಿಲೋಮೀಟರ್ ಉದ್ದದ ನೀರೊಳಗಿನ ಮೆಟ್ರೋ ಸಂಪರ್ಕದ ಮೊದಲ ಹಂತ ಪೂರ್ಣಗೊಂಡಿದೆ. ಭಾರತೀಯ ರೈಲ್ವೆಯ ಎಂಜಿನಿಯರಿಂಗ್ ಅದ್ಭುತವಾಗಿರುವ ಇದು ಅತ್ಯಾಧುನಿಕ ಭದ್ರತೆ ಮತ್ತು ಸಂಪರ್ಕ ತಂತ್ರಜ್ಞಾನವನ್ನು ಹೊಂದಿದೆ. ಡಿಸೆಂಬರ್ 2021ರ ವೇಳೆಗೆ ಇಡೀ ಕಾರಿಡಾರ್ ಬಳಕೆಗೆ ಸಿದ್ಧವಾಗಲಿದೆ. ಸುಮಾರು 8,600 ಕೋಟಿ ರೂ.ಗಳ ವೆಚ್ಚದ ಈ ಯೋಜನೆಯು ನಗರದಲ್ಲಿ ಹೆಚ್ಚು ಬೇಡಿಕೆಯಿರುವ ಸಾರಿಗೆ ವಿಧಾನವಾಗಿದೆ. ನೀರೊಳಗಿನ ಮೆಟ್ರೋ ಕೋಲ್ಕತಾ ಮತ್ತು ಹೌರಾ ಅವಳಿ ನಗರಗಳ ನಡುವೆ ಸಂಪರ್ಕ ಕಲ್ಪಿಸುತ್ತದೆ. ■

## ಉದ್ಯೋಗಗಳಿಗೆ ಕ್ರೀಡಾ ಕೋಟಾದ ವ್ಯಾಪ್ತಿ ಹೆಚ್ಚಳ

ಸೆಪ್ಟೆಂಬರ್ 1, 2020 ರಂದು 20 ಹೊಸ ವಿಭಾಗಗಳ ಕ್ರೀಡಾಪಟುಗಳಿಗೆ ಕ್ರೀಡಾ ಕೋಟಾದ ಲಾಭವನ್ನು ನೀಡುವ ಕ್ರೀಡಾ ಸಚಿವಾಲಯದ ಪ್ರಸ್ತಾವನೆಯನ್ನು ಸಿಬ್ಬಂದಿ ಮತ್ತು ತರಬೇತಿ ಇಲಾಖೆ (ಡಿಒಪಿಟಿ) ಅಂಗೀಕರಿಸಿತು. ಕೇಂದ್ರ ಸರ್ಕಾರದ ಕಚೇರಿಗಳಿಗೆ ಶ್ರೇಷ್ಠ ಕ್ರೀಡಾಪಟುಗಳನ್ನು ನೇಮಕ ಮಾಡಲು ಇರುವ ಕ್ರೀಡೆಗಳ ಪಟ್ಟಿಯನ್ನು 43 ರಿಂದ 63 ಕ್ಕೆ ಪರಿಷ್ಕರಿಸಲಾಗಿದೆ. ಅವುಗಳಲ್ಲಿ ಸ್ಥಳೀಯ ಮತ್ತು ಸಾಂಪ್ರದಾಯಿಕ ಕ್ರೀಡೆಗಳಾದ ಮಲ್ಲಕಂಬ, ಹಗ್ಗ ಜಗ್ಗಾಟ, ಸೆಪಾಕ್ ಟಾಕ್ರೋ ಮತ್ತು ರೋಲ್ ಬಾಲ್ ಸೇರಿವೆ. ಈ ನಿರ್ಧಾರದ ಬಗ್ಗೆ ಮಾತನಾಡಿದ ಕೇಂದ್ರ ಯುವಜನ ವ್ಯವಹಾರ ಮತ್ತು ಕ್ರೀಡಾ ಸಚಿವ ಕಿರೆನ್ ರಿಜಿಜು, "ನಮ್ಮ ಕ್ರೀಡಾಪಟುಗಳ ಒಟ್ಟಾರೆ ಯೋಗಕ್ಷೇಮವನ್ನು ಖಚಿತಪಡಿಸಿಕೊಳ್ಳುವುದು ಸರ್ಕಾರದ ಪ್ರಾಥಮಿಕ ಜವಾಬ್ದಾರಿಯಾಗಿದೆ, ಹೆಚ್ಚಿನ ಕ್ರೀಡಾ ವಿಭಾಗಗಳನ್ನು ಡಿಒಪಿಟಿ ಪಟ್ಟಿಯಲ್ಲಿ ಸೇರಿಸುವ ನಿರ್ಧಾರವು ಆ ದಿಕ್ಕಿನಲ್ಲಿ ಇಟ್ಟಿರುವ ಒಂದು ಹೆಜ್ಜೆಯಾಗಿದೆ" ಎಂದು ತಿಳಿಸಿದರು. ■





# ಭಾರತ ಮತ್ತು ವಿಶ್ವಕ್ಕೆ ಗಾಂಧಿ ಏಕೆ ಬೇಕು

***ಪ್ರತಿಯೊಬ್ಬ ನಾಗರಿಕನೂ ಘನತೆ ಮತ್ತು ಸಮೃದ್ಧಿಯನ್ನು ಹೊಂದಿದ ಜಗತ್ತು ಈ ಮಹಾನ್ ನಾಯಕನ ದೃಷ್ಟಿಯಾಗಿತ್ತು***

**ನರೇಂದ್ರ ಮೋದಿ**

1959 ರಲ್ಲಿ ಭಾರತಕ್ಕೆ ಬರುವ ಮುನ್ನ ಡಾ. ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್, "ಇತರ ದೇಶಗಳಿಗೆ ನಾನು ಪ್ರವಾಸಿಗನಾಗಿ ಹೋಗಬಹುದು, ಆದರೆ ಭಾರತಕ್ಕೆ ಮಾತ್ರ ನಾನು ಯಾತ್ರಿಕನಾಗಿ ಬರುತ್ತೇನೆ" ಎಂದು ಹೇಳಿದ್ದರು. "ಎಲ್ಲಕ್ಕಿಂತ ಹೆಚ್ಚಾಗಿ, ನನ್ನ ಜನರು ಮಾಂಟೊಗ್‌ಮೆರಿ, ಅಲಬಾಮಾ ಮತ್ತು ದಕ್ಷಿಣ ಅಮೇರಿಕಾದಾದ್ಯಂತ ಬಳಸಿದ ಅಹಿಂಸಾತ್ಮಕ ಸಾಮಾಜಿಕ ಬದಲಾವಣೆಯ ಮಾದರಿಗಳಿಗೆ ಜನ್ಮ ನೀಡಿದ ಭೂಮಿ ಇದು. ಅವುಗಳು ಪರಿಣಾಮಕಾರಿ ಮತ್ತು ಸುಸ್ಥಿರವಾದವೆಂದು ನಾವು ಕಂಡುಕೊಂಡಿದ್ದೇವೆ – ಅವು ಕೆಲಸ ಮಾಡುತ್ತವೆ! " ಎಂದು ಅವರು ಹೇಳಿದ್ದರು.

ಡಾ. ಕಿಂಗ್ ಅವರು ಭಾರತಕ್ಕೆ ಬರುವಂತೆ ಪ್ರೇರೇಪಿಸಿದ ಆ ಮಾರ್ಗದರ್ಶಕ ಬೆಳಕು ಮೋಹನ್‌ದಾಸ್ ಕರಮ್‌ಚಂದ್ ಗಾಂಧಿ, ಮಹಾತ್ಮ, ಮಹಾನ್ ಆತ್ಮ. ಗಾಂಧೀಜಿ ಅಥವಾ ಬಾಪು, ಜಾಗತಿಕವಾಗಿ ಕೋಟ್ಯಂತರ ಜನರಿಗೆ ಧೈರ್ಯವನ್ನು ನೀಡುತ್ತಲೇ ಇದ್ದಾರೆ.

ಪ್ರತಿರೋಧದ ಗಾಂಧೀಜಿ ಮಾದರಿಗಳು ಆಫ್ರಿಕಾದ ಹಲವಾರು ರಾಷ್ಟ್ರಗಳಲ್ಲಿ ಭರವಸೆಯ ಮನೋಭಾವವನ್ನು ಮೂಡಿಸಿದವು. "ನಾನು ಪಶ್ಚಿಮ ಆಫ್ರಿಕಾದ ಘಾನಾಗೆ ಭೇಟಿ ನೀಡಿದ್ದಾಗ, ಪ್ರಧಾನಿ ನಿಕ್ರೂಮಾ ಅವರು, ತಾವು ಗಾಂಧಿಯವರ ಕೃತಿಗಳನ್ನು ಓದಿರುವುದಾಗಿ ಮತ್ತು ಅಹಿಂಸಾತ್ಮಕ ಪ್ರತಿರೋಧವನ್ನು ಇಲ್ಲಿಗೂ ವಿಸ್ತರಿಸಬಹುದು ಎಂದು ಹೇಳಿದ್ದರು. ದಕ್ಷಿಣ ಆಫ್ರಿಕಾದ ಬಸ್ ಬಹಿಷ್ಕಾರಗಳನ್ನು ನಾವು ನೆನಪಿಸಿಕೊಳ್ಳಬೇಕು." ಎಂದು ಡಾ. ಕಿಂಗ್ ಹೀಗೆ ಹೇಳಿತ್ತಾರೆ. ನೆಲ್ಸನ್ ಮಂಡೇಲಾ ಅವರು ಗಾಂಧಿಯನ್ನು "ಪವಿತ್ರ ಯೋಧ" ಎಂದು ಕರೆದಿದ್ದಾರೆ. "ಅವರ ಅಸಹಕಾರ ತಂತ್ರ, ನಮ್ಮ ಮೇಲೆ ಪ್ರಾಬಲ್ಯ ಸಾಧಿಸುತ್ತಿರುವವರೊಂದಿಗೆ ನಾವು ಸಹಕರಿಸಿದರೆ ಮಾತ್ರ ನಾವು ಪ್ರಾಬಲ್ಯ ಸಾಧಿಸಬಹುದು ಎಂಬುದು ಅವರ ಪ್ರತಿಪಾದನೆಯಾಗಿತ್ತು ಮತ್ತು ಅವರ ಅಹಿಂಸಾತ್ಮಕ ಚಳವಳಿಯು ನಮ್ಮ ಶತಮಾನದಲ್ಲಿ ಅಂತಾರಾಷ್ಟ್ರೀಯ ವಸಾಹತು ಶಾಹಿ ವಿರೋಧಿ ಮತ್ತು ವರ್ಣಭೇದ ವಿರೋಧಿ ಚಳುವಳಿಗಳಿಗೆ ಪ್ರೇರಣೆ ನೀಡಿತು" ಎಂದು ಅವರು ಬರೆಯುತ್ತಾರೆ.

ಶ್ರೀ ಮಂಡೇಲಾ ಅವರಿಗೆ ಗಾಂಧೀಜಿ ಭಾರತೀಯ ಮತ್ತು ದಕ್ಷಿಣ ಆಫ್ರಿಕಾದವರು. ಬಹುಶಃ ಗಾಂಧೀಜಿಯೂ ಇದನ್ನು ಒಪ್ಪುತ್ತಿದ್ದರು. ಮಾನವ ಸಮಾಜದಲ್ಲಿನ ಹಲವು ವಿರೋಧಾಭಾಸಗಳ ನಡುವೆ ಸೇತುವೆಯಾಗುವ ವಿಶಿಷ್ಟ ಸಾಮರ್ಥ್ಯವನ್ನು ಅವರು ಹೊಂದಿದ್ದರು.

ಗಾಂಧೀಜಿ 1925 ರಲ್ಲಿ "ಯಂಗ್ ಇಂಡಿಯಾ" ದಲ್ಲಿ "ರಾಷ್ಟ್ರವಾದಿಯಾಗದೆ ಯಾರೂ ಅಂತಾರಾಷ್ಟ್ರೀಯತಾವಾದಿ ಯಾಗುವುದು ಅಸಾಧ್ಯ. ರಾಷ್ಟ್ರೀಯತೆಯು ಸತ್ಯವಾದಾಗ ಮಾತ್ರ ಅಂತಾರಾಷ್ಟ್ರೀಯತೆ ಸಾಧ್ಯ, ಅಂದರೆ, ವಿವಿಧ ದೇಶಗಳಿಗೆ ಸೇರಿದ ಜನರು ತಮ್ಮನ್ನು ತಾವು ಸಂಘಟಿಸಿಕೊಂಡಾಗ ಮತ್ತು ಒಬ್ಬ ಮನುಷ್ಯನಾಗಿ ಕಾರ್ಯನಿರ್ವಹಿಸಲು ಸಮರ್ಥರಾದಾಗ

ಮಾತ್ರ ಇದು ಸಾಧ್ಯ" ಎಂದು ಬರೆದಿದ್ದಾರೆ. ಅವರು ಭಾರತದ ರಾಷ್ಟ್ರೀಯತೆಯನ್ನು ಎಂದಿಗೂ ಸಂಕುಚಿತ ಅಥವಾ ಪ್ರತ್ಯೇಕ ದೃಷ್ಟಿಯಿಂದ ನೋಡದೆ ಮನುಕುಲದ ಸೇವೆಗಾಗಿ ಕೆಲಸ ಮಾಡುವಂತಹದ್ದಾಗಿ ಕಂಡಿದ್ದರು.

ಮಹಾತ್ಮ ಗಾಂಧಿಯವರು ಸಮಾಜದ ಎಲ್ಲ ವರ್ಗದವರಲ್ಲಿ ವಿಶ್ವಾಸವನ್ನು ತೋರಿಸಿದ್ದಾರೆ. 1917 ರಲ್ಲಿ, ಗುಜರಾತ್‌ನ ಅಹಮದಾಬಾದ್‌ನಲ್ಲಿ ಒಂದು ದೊಡ್ಡ ಜವಳಿ ಮುಷ್ಕರ ನಡೆಯಿತು. ಗಿರಣಿ ಕಾರ್ಮಿಕರು ಮತ್ತು ಮಾಲೀಕರ ನಡುವಿನ ಸಂಘರ್ಷವು ಮುಗಿಯದ ಹಂತಕ್ಕೆ ಬಂದಾಗ, ಗಾಂಧೀಜಿ ನ್ಯಾಯಯುತವಾದ ಇತ್ಯರ್ಥಕ್ಕೆ ಮಧ್ಯಸ್ಥಿಕೆ ವಹಿಸಿದರು.

ಗಾಂಧೀಜಿ ಕಾರ್ಮಿಕರ ಹಕ್ಕುಗಳ ಸಂಘಟನೆಯಾಗಿ ಮಜ್ದೂರ್ ಮಹಾಜನ್ ಸಂಘವನ್ನು ಸ್ಥಾಪಿಸಿದರು. ಇದು ಎಲ್ಲರಂತೆ ಮತ್ತೊಂದು ಸಂಸ್ಥೆಯ ಹೆಸರಾಗಿ ಕಾಣಿಸಬಹುದು. ಆದರೆ ಸಣ್ಣ ಹೆಜ್ಜೆಗಳು ಹೇಗೆ ದೊಡ್ಡ ಪರಿಣಾಮವನ್ನು ಬೀರಿದವು ಎಂಬುದನ್ನು ಇದು ತೋರಿಸುತ್ತದೆ. ಆ ದಿನಗಳಲ್ಲಿ, "ಮಹಾಜನ್" ಅನ್ನು ಗಣ್ಯರಿಗೆ ಗೌರವದ ಶೀರ್ಷಿಕೆಯಾಗಿ ಬಳಸಲಾಗುತ್ತಿತ್ತು. ಗಾಂಧಿಯವರು "ಮಹಾಜನ್" ಎಂಬ ಹೆಸರನ್ನು "ಮಜ್ದೂರ್" ಅಥವಾ ಕಾರ್ಮಿಕರಿಗೆ ಜೋಡಿಸುವ ಮೂಲಕ ಸಾಮಾಜಿಕ ವ್ಯವಸ್ಥೆಯನ್ನೇ ತಲೆಕೆಳಗು ಮಾಡಿದರು. ಆ ಭಾಷೆಯ ಆಯ್ಕೆಯೊಂದಿಗೆ ಗಾಂಧೀಜಿ ಕಾರ್ಮಿಕರ ಹೆಮ್ಮೆಯನ್ನು ಹೆಚ್ಚಿಸಿದರು. ಗಾಂಧೀಜಿ ಸಾಮಾನ್ಯ ವಸ್ತುಗಳನ್ನು ಸಾಮೂಹಿಕ ರಾಜಕೀಯದೊಂದಿಗೆ ಸಂಯೋಜಿಸಿದರು. ಒಂದು ರಾಷ್ಟ್ರದ ಆರ್ಥಿಕ ಸ್ವಾವಲಂಬನೆ ಮತ್ತು ಸಬಲೀಕರಣದ ಸಂಕೇತವಾಗಿ ಚರಕ, ಭಾರತೀಯ ಹೋಮ್‌ಸ್ಪನ್ ಬಟ್ಟೆ ಮತ್ತು ಖಾದಿಯನ್ನು ಬೇರೆ ಯಾರು ಬಳಸಲು ಸಾಧ್ಯವಿತ್ತು? ಒಂದು ಚಿಟಿಕೆ ಉಪ್ಪಿನ ಮೂಲಕ ಜನಾಂದೋಲನವನ್ನು ಬೇರೆ ಯಾರು ಸೃಷ್ಟಿಸಲು ಸಾಧ್ಯ? ವಸಾಹತುಶಾಹಿ ಆಳ್ವಿಕೆಯಲ್ಲಿ, ಭಾರತದ ಉಪ್ಪಿನ ಮೇಲೆ ಹೊಸ ತೆರಿಗೆ ವಿಧಿಸಿದ ಉಪ್ಪಿನ ಕಾನೂನುಗಳು ಹೊರೆಯಾದವು. 1930 ರಲ್ಲಿ ದಂಡಿ ಯಾತ್ರೆ ಮೂಲಕ ಗಾಂಧೀಜಿ ಉಪ್ಪು ಕಾನೂನುಗಳನ್ನು ಪ್ರಶ್ನಿಸಿದರು. ಅವರು ಅರಬ್ಬಿ ಸಮುದ್ರ ತೀರದಿಂದ ಒಂದು ಸಣ್ಣ ಉಪ್ಪಿನ ಉಂಡೆಯನ್ನು ಎತ್ತಿಕೊಳ್ಳುವುದು ಐತಿಹಾಸಿಕವಾದ ನಾಗರಿಕರ ಅಸಹಕಾರ ಚಳವಳಿಗೆ ನಾಂದಿಯಾಯಿತು.

ಜಗತ್ತಿನಲ್ಲಿ ಅನೇಕ ಜನಾಂದೋಲನಗಳು ನಡೆದಿವೆ, ಭಾರತದಲ್ಲಿಯೂ ಸ್ವಾತಂತ್ರ್ಯ ಹೋರಾಟದ ಹಲವು ಎಳೆಗಳಿವೆ, ಆದರೆ ಗಾಂಧಿವಾದಿ ಹೋರಾಟ ಮತ್ತು ಅವರಿಂದ ಪ್ರೇರಿತವಾದವುಗಳ ವಿಶೇಷತೆಯೆಂದರೆ ವ್ಯಾಪಕವಾದ ಸಾರ್ವಜನಿಕರ ಭಾಗವಹಿಸುವಿಕೆ. ಅವರು ಎಂದಿಗೂ ಆಡಳಿತಾತ್ಮಕ ಅಥವಾ ಚುನಾಯಿತ ಹುದ್ದೆಯನ್ನು ಅಲಂಕರಿಸಲಿಲ್ಲ. ಅವರು ಎಂದಿಗೂ ಅಧಿಕಾರದ ಪ್ರಲೋಭನೆಗೆ ಒಳಗಾಗಲಿಲ್ಲ.

ಗಾಂಧೀಜಿಯವರಿಗೆ, ಸ್ವಾತಂತ್ರ್ಯವು ಬಾಹ್ಯ ಆಡಳಿತದ ಅನುಪಸ್ಥಿತಿಯಾಗಿರಲಿಲ್ಲ. ರಾಜಕೀಯ ಸ್ವಾತಂತ್ರ್ಯ ಮತ್ತು ವೈಯಕ್ತಿಕ ಸಬಲೀಕರಣದ ನಡುವಿನ ಗಾಢವಾದ ಸಂಬಂಧವನ್ನು ಅವರು ಕಂಡಿದ್ದರು. ಪ್ರತಿಯೊಬ್ಬ ನಾಗರಿಕನು ಘನತೆ ಮತ್ತು ಸಮೃದ್ಧಿಯನ್ನು ಹೊಂದಿರುವ ಜಗತ್ತು ಅವರ ದೃಷ್ಟಿಯಾಗಿತ್ತು. ಜಗತ್ತು ಹಕ್ಕುಗಳ ಬಗ್ಗೆ ಮಾತನಾಡುವಾಗ ಗಾಂಧಿ ಕರ್ತವ್ಯಕ್ಕೆ ಒತ್ತು ನೀಡಿದರು. "ಹಕ್ಕುಗಳ ನಿಜವಾದ ಮೂಲವೆಂದರೆ ಕರ್ತವ್ಯ. ನಾವೆಲ್ಲರೂ ನಮ್ಮ ಕರ್ತವ್ಯಗಳನ್ನು ನಿರ್ವಹಿಸಿದರೆ, ಹಕ್ಕುಗಳನ್ನು ಹುಡುಕುವುದು ಹೆಚ್ಚು ಕಷ್ಟವಾಗುವುದಿಲ್ಲ." ಎಂದು ಅವರು "ಯಂಗ್ ಇಂಡಿಯಾ" ದಲ್ಲಿ ಬರೆದಿದ್ದಾರೆ. "ತನ್ನ ಕರ್ತವ್ಯಗಳನ್ನು ಸರಿಯಾಗಿ ನಿರ್ವಹಿಸುವವನಿಗೆ ಹಕ್ಕುಗಳು ತಾವಾಗಿಯೇ ದಕ್ಕುತ್ತವೆ" ಎಂದು ಹರಿಜನ ಪತ್ರಿಕೆಯಲ್ಲಿ ಅವರು ಬರೆದಿದ್ದಾರೆ, ಬಡವರ ಸಾಮಾಜಿಕ-ಆರ್ಥಿಕ ಕಲ್ಯಾಣಕ್ಕೆ ಒತ್ತು ನೀಡುವ ಟ್ರಸ್ಟೀಶಿಪ್ ಸಿದ್ಧಾಂತವನ್ನು ಗಾಂಧಿ ನಮಗೆ ನೀಡಿದರು. ಅದರಿಂದ ಪ್ರೇರಿತರಾಗಿ ನಾವು ಮಾಲೀಕತ್ವದ ಮನೋಭಾವದ ಬಗ್ಗೆ ಯೋಚಿಸಬೇಕು. ಭೂಮಿಯ ಅನುವಂಶಿಕರಾದ ನಾವು ನಮ್ಮ ಗ್ರಹದ ಮತ್ತು ನಮ್ಮೊಂದಿಗೆ ಇರುವ ಸಸ್ಯ ಮತ್ತು ಪ್ರಾಣಿಗಳ ಯೋಗಕ್ಷೇಮಕ್ಕೂ ಜವಾಬ್ದಾರರು. ನಮಗೆ ಮಾರ್ಗದರ್ಶನ ನೀಡುವ ಅತ್ಯುತ್ತಮ ಶಿಕ್ಷಕನೊಬ್ಬ ಗಾಂಧೀಜಿಯಲ್ಲಿದ್ದಾನೆ. ಮಾನವೀಯತೆಯನ್ನು ನಂಬುವವರನ್ನು ಒಂದುಗೂಡಿಸುವುದರಿಂದ ಹಿಡಿದು ಸುಸ್ಥಿರ ಅಭಿವೃದ್ಧಿಯನ್ನು ಹೆಚ್ಚಿಸುವ ಮತ್ತು ಆರ್ಥಿಕ ಸ್ವಾವಲಂಬನೆಯನ್ನು ಖಾತರಿಪಡಿಸುವವರೆಗೆ ಗಾಂಧೀಜಿ ಪ್ರತಿಯೊಂದು ಸಮಸ್ಯೆಗೆ ಪರಿಹಾರಗಳನ್ನು ನೀಡುತ್ತಾರೆ. ಭಾರತದಲ್ಲಿ ನಾವು ನಮ್ಮ ಕೈಲಾದಷ್ಟು ಕೆಲಸವನ್ನು ಮಾಡುತ್ತಿದ್ದೇವೆ. ಬಡತನ ನಿವಾರಣೆಯಲ್ಲಿ ಭಾರತವು ಅತ್ಯಂತ ವೇಗವಾಗಿದೆ. ನಮ್ಮ ನೈರ್ಮಲ್ಯ ಪ್ರಯತ್ನಗಳು ಜಾಗತಿಕವಾಗಿ ಗಮನ ಸೆಳೆದಿವೆ. ಸುಸ್ಥಿರ ಭವಿಷ್ಯಕ್ಕಾಗಿ ಸೌರಶಕ್ತಿಯನ್ನು ಬಳಸಿಕೊಳ್ಳಲು ಹಲವಾರು ರಾಷ್ಟ್ರಗಳನ್ನು ಒಟ್ಟುಗೂಡಿಸಿರುವ ಅಂತಾರಾಷ್ಟ್ರೀಯ ಸೌರ ಒಕ್ಕೂಟದಂತಹ ಪ್ರಯತ್ನಗಳ ಮೂಲಕ ನವೀಕರಿಸಬಹುದಾದ ಸಂಪನ್ಮೂಲಗಳನ್ನು ಬಳಸಿಕೊಳ್ಳುವಲ್ಲಿ ಭಾರತ ಮುಂದಿದೆ. ನಾವು ಜಗತ್ತಿನೊಂದಿಗೆ ಮತ್ತು ಜಗತ್ತಿಗಾಗಿ ಇನ್ನೂ ಹೆಚ್ಚಿನದನ್ನು ಮಾಡಲು ಬಯಸುತ್ತೇವೆ.

ಗಾಂಧೀಜಿಯವರಿಗೆ ಗೌರವ ನಮನವಾಗಿ, ನಾನು ಐನ್‌ಸ್ಟೈನ್ ಚಾಲೆಂಜ್ ಅನ್ನು ಪ್ರಸ್ತಾಪಿಸುತ್ತೇನೆ. ಗಾಂಧೀಜಿ ಕುರಿತು ಆಲ್ಬರ್ಟ್ ಐನ್‌ಸ್ಟೈನ್‌ರ ಹೆಸರಾಂತ ಮಾತುಗಳು ನಮಗೆಲ್ಲ ಗೊತ್ತಿವೆ: "ಮಾಂಸ ಮತ್ತು ರಕ್ತದ ರೂಪದಲ್ಲಿ ಇಂತಹದೊಂದು ವ್ಯಕ್ತಿತ್ವ ಭೂಮಿಯ ಮೇಲೆ ನಡೆದಾಡುತ್ತಿತ್ತು ಎಂಬುದನ್ನು ಮುಂದಿನ ತಲೆಮಾರುಗಳು ನಂಬುವುದಿಲ್ಲ" ಎಂದು ಅವರು ಹೇಳುತ್ತಾರೆ.

ಗಾಂಧಿಯವರ ಆದರ್ಶಗಳನ್ನು ಭವಿಷ್ಯದ ಪೀಳಿಗೆಗಳು ನೆನಪಿಸಿಕೊಳ್ಳುವುದನ್ನು ನಾವು ಹೇಗೆ ಖಚಿತಪಡಿಸಿಕೊಳ್ಳಬೇಕು? ಗಾಂಧೀಜಿ ವಿಚಾರಧಾರೆಗಳನ್ನು ಹೊಸತನದ ಮೂಲಕ ಹರಡಲು ಚಿಂತಕರು, ಉದ್ಯಮಿಗಳು ಮತ್ತು ತಾಂತ್ರಿಕ ಮುಖಂಡರನ್ನು ನಾನು ಆಹ್ವಾನಿಸುತ್ತೇನೆ. ನಮ್ಮ ಜಗತ್ತನ್ನು ಸಮೃದ್ಧವಾಗಿಸಲು ಮತ್ತು ದ್ವೇಷ, ಹಿಂಸೆ ಮತ್ತು ದುಃಖಗಳಿಂದ ಮುಕ್ತವಾಗಿಸಲು ಪರಸ್ಪರ ಹೆಗಲಿಗೆ ಹೆಗಲು ಕೊಟ್ಟು ಕೆಲಸ ಮಾಡೋಣ. ಆಗ ಮಾತ್ರ ನಾವು ಮಹಾತ್ಮ ಗಾಂಧಿಯವರ ಕನಸನ್ನು ನನಸಾಗಿಸುತ್ತೇವೆ, ಗಾಂಧೀಜಿಯವರ ನೆಚ್ಚಿನ ಸ್ತೋತ್ರವಾದ "ವೈಷ್ಣವ ಜನ ತೋ"ನಲ್ಲಿ ಹೇಳಿರುವಂತೆ "ನಿಜವಾಗಿ ಮನುಷ್ಯನಾದವನು ಇತರರ ನೋವನ್ನು ಅನುಭವಿಸುತ್ತಾನೆ, ಕ್ಲೇಶವನ್ನು ಕಳೆಯುತ್ತಾನೆ ಮತ್ತು ಎಂದಿಗೂ ಅಹಂಕಾರ ತೋರುವುದಿಲ್ಲ". ■

**ಪ್ರಿಯ ಬಾಪು! ಇಡೀ ವಿಶ್ವವೇ ನಿಮಗೆ ನಮಸ್ಕರಿಸುತ್ತದೆ.**

**(ಪ್ರಧಾನಿ ನರೇಂದ್ರ ಮೋದಿಯವರು ಗಾಂಧೀಜಿಯವರ 150ನೇ ಜಯಂತಿ ಸಂದರ್ಭದಲ್ಲಿ ಬರೆದ ಲೇಖನ)**

"ನಾವು ಮಹಾತ್ಮ ಗಾಂಧಿಯವರ ಬಗ್ಗೆ ಯಾವಾಗ ಯೋಚಿಸಿದರೂ, ಸಹಜವಾಗಿ ನಮಗೆ ಖಾದಿ ನೆನಪಾಗುತ್ತದೆ. ಕರವಸ್ತ್ರ ಅಥವಾ ಸ್ನಾನದ ಟವೆಲ್, ಬೆಡ್‌ಶೀಟ್, ದಿಂಬಿನ ಹೊದಿಕೆ, ಪರದೆ ಅಥವಾ ಆ ರೀತಿಯ ಯಾವುದಾದರೂ ಒಂದು ಖಾದಿ ಉತ್ಪನ್ನವನ್ನಾದರೂ ಬಳಸುವಂತೆ ನಿಮ್ಮನ್ನು ನಾನು ಒತ್ತಾಯಿಸುತ್ತಿದ್ದೇನೆ. ನಿಮ್ಮ ಕುಟುಂಬಕ್ಕೆ ಎಲ್ಲಾ ರೀತಿಯ ಬಟ್ಟೆ ಬರೆಗಳ ಬಗ್ಗೆ ಒಲವಿದ್ದರೆ, ನೀವು ಖಾದಿ ಉತ್ಪನ್ನಗಳನ್ನು ಸಹ ನಿಯಮಿತವಾಗಿ ಖರೀದಿಸಬಹುದು. ನೀವು ಖಾದಿ ಉತ್ಪನ್ನಗಳನ್ನು ಖರೀದಿಸಿದರೆ, ಅದು ದೀಪಾವಳಿಯಂದು ದೀಪಗಳನ್ನು ಬೆಳಗಿಸಲು ಬಡ ಜನರಿಗೆ ಸಹಾಯ ಮಾಡುತ್ತದೆ ಎಂಬುದನ್ನು ನಾನು ಹೇಳುತ್ತೇನೆ"



# ಖಾದಿ
## ಒಂದು ಹೆಜ್ಜೆ ಮುಂದಕ್ಕೆ

**ಖಾದಿ ಉತ್ಪನ್ನಗಳ ಆಧುನೀಕರಣ ಮತ್ತು ಗ್ರಾಹಕ ಸ್ನೇಹಿ ಮಾಡಲು ಕೇಂದ್ರ ಸರ್ಕಾರ 2014 ರ ಮಧ್ಯಭಾಗದಿಂದ ಮಾಡಿದ ಪ್ರಯತ್ನಗಳು ಈ ವಲಯಕ್ಕೆ ಮಹತ್ವದ ಲಾಭವನ್ನು ತಂದಿವೆ. ಇಂದು ಖಾದಿ ಮಾರಾಟವು 389 ಪ್ರತಿಶತದಷ್ಟು ಹೆಚ್ಚಾಗಿದೆ ಮತ್ತು ಉದ್ಯೋಗ ಸಾಮರ್ಥ್ಯವನ್ನು ಹೆಚ್ಚಿಸಿದೆ. ಖಾದಿ ಉದ್ಯಮವು ಸರ್ಕಾರದ #ಆತ್ಮನಿರ್ಭರಭಾರತಕ್ಕೆ ಜ್ವಲಂತ ಉದಾಹರಣೆಯಾಗಿದೆ**

ಕಳೆದ ಆರು ವರ್ಷಗಳಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ನಾಯಕತ್ವದಲ್ಲಿ, ಖಾದಿ ಬ್ರಾಂಡ್ ವ್ಯಾಪಕವಾಗಿದೆ ಸ್ವೀಕಾರಾರ್ಹವಾಗಿದೆ. ಅಲ್ಲದೆ, ಕೆವಿಐಸಿಯ ಅತಿದೊಡ್ಡ ಯಶೋಗಾಥೆಗೆ ದೇಶ ಸಾಕ್ಷಿಯಾಗಿದೆ. 2015–16ರ ನಂತರದ ಐದು ವರ್ಷಗಳಲ್ಲಿ ಖಾದಿ ಉತ್ಪಾದನೆಯು ದ್ವಿಗುಣಗೊಂಡಿದೆ.

### ಮೋದಿಯ ಮೋಡಿ, ಖಾದಿಗೆ ಬದಲಾದ ಜನ

**ಅಕ್ಟೋಬರ್ 4, 2014:** ದೆಹಲಿಯ ಮಧು ವಿಹಾರ್ ಪ್ರದೇಶದ ವ್ಯಕ್ತಿಯೊಬ್ಬರು ಕೆವಿಐಸಿ ಅಂಗಡಿಯೊಂದಕ್ಕೆ ಬಂದರು. ಅವರು ಐದು ಬೆಡ್‌ಶೀಟ್ ಮತ್ತು ಟವೆಲ್‌ಗಳನ್ನು ಖರೀದಿಸಿದರು. ಬಿಲ್ಲಿಂಗ್ ಕೌಂಟರ್‌ನಲ್ಲಿ ಅಂಗಡಿಯ ನೌಕರರೊಂದಿಗೆ ಮಾತನಾಡುವಾಗ ಅವರ ಮಾತಿನಲ್ಲಿ ಉತ್ಸಾಹವು ಕಾಣಿಸುತ್ತಿತ್ತು. "ನಾನು ಮೋದಿಜಿಯವರ ಮಾತನ್ನು ಕೇಳಿದ ನಂತರ ಶೋ ರೂಂಗೆ ಭೇಟಿ ನೀಡಿದ್ದೇನೆ. ಖಾದಿಗಿಂತ ಉತ್ತಮವಾದದ್ದು ಬೇರೇನಿದೆ ಎಂದು ನನಗನಿಸಿತು".

**ಅಕ್ಟೋಬರ್ 9, 2014:** ಜಾರ್ಖಂಡ್‌ನ ಛಾತ್ರಾ ಲೋಕಸಭಾ ಸಂಸದ ಸುನಿಲ್ ಕುಮಾರ್ ಸಿಂಗ್ ಅವರಿಗೆ ಸರ್ಕಾರಿ ಬಂಗಲೆ ನೀಡಲಾಯಿತು. ಸಿಪಿಡಬ್ಲ್ಯುಡಿ ಅಧಿಕಾರಿಗಳು ಪರದೆಗಳಿಗೆ ಬಟ್ಟೆಯನ್ನು ಆಯ್ಕೆ ಮಾಡಲು 200 ಕ್ಕೂ ಹೆಚ್ಚು ಮಾದರಿಗಳನ್ನು ತಂದರು. ಖಾದಿ ಅಥವಾ ಕೈಮಗ್ಗ ಪರದೆಗಳನ್ನು ಇವೆಯಾ ಎಂದು ಸಂಸದರು ಕಾರ್ಯನಿರ್ವಾಹಕ ಎಂಜಿನಿಯರ್‌ಗೆ ಕೇಳಿದರು. "ನಮಗೆ ತುಂಬಾ ವಸ್ತುಗಳು ಬೇಕಾಗಿದ್ದವು. ಅದೆಲ್ಲವನ್ನೂ ಪೂರೈಸಲು ಕೆವಿಐಸಿಗೆ ಸಾಧ್ಯವಾಗಲಿಲ್ಲ" ಎಂದು ಅಧಿಕಾರಿಗಳು ಹೇಳಿದರು. "ಬೇಡಿಕೆಯ ಬಗ್ಗೆ ನೀವು ಕೆವಿಐಸಿಗೆ ಮುಂಚಿತವಾಗಿಯೇ ತಿಳಿಸಬೇಕು, ಆಗ ಅವರು ಅದನ್ನು ಪೂರೈಸಬಹುದು" ಎಂದು ಸಿಪಿಡಬ್ಲ್ಯುಡಿ ಅಧಿಕಾರಿಗಳಿಗೆ ಸಂಸದರು ಹೇಳಿದರು: ನಂತರ ಅಧಿಕಾರಿಗಳು ಸಂಸದರ ಆಯ್ಕೆಗಾಗಿ ಹಲವು ಮಾದರಿಗಳನ್ನು ವ್ಯವಸ್ಥೆ ಮಾಡಿದರು.



## ಉತ್ಪಾದನೆಯಲ್ಲಿ ಹೊಸ ಮೈಲಿಗಲ್ಲು

- ಖಾದಿ ಬಟ್ಟೆಯ ವಾರ್ಷಿಕ ಸರಾಸರಿ ಉತ್ಪಾದನೆ 1956 ರಿಂದ 2013–14ರವರೆಗೆ 17.80 ಲಕ್ಷ ಚದರ ಮೀಟರ್
- 2014 ರಿಂದ 2019–20ರವರೆಗೆ ಕೇವಲ 6 ವರ್ಷಗಳಲ್ಲಿ ವಾರ್ಷಿಕ ಸರಾಸರಿ ಉತ್ಪಾದನೆ 1.58 ಕೋಟಿ ಚದರ ಮೀಟರ್‌ಗೆ ಏರಿದೆ

## ಪ್ರಧಾನಿಯವರ ಮನವಿಯಿಂದ ಖಾದಿಯಲ್ಲಿ ಪ್ರಗತಿ

### ಉತ್ಪಾದನೆ ಮತ್ತು ಮಾರಾಟದಲ್ಲಿ ಹೊಸ ದಾಖಲೆ

| ವಲಯ | 2013-14 | | 2019-20 | |
|---|---|---|---|---|
| | ಉತ್ಪಾದನೆ | ಮಾರಾಟ | ಉತ್ಪಾದನೆ | ಮಾರಾಟ |
| ಖಾದಿ | ₹811.08 | ₹1,081.04 | ₹2,292.44 | ₹ 4,211.26 |
| ಗ್ರಾಮೋದ್ಯೋಗ | ₹25,298 | ₹26,689 | ₹65,393.40 | ₹84,675.39 |

ಉತ್ಪಾದನೆ ಮತ್ತು ಮಾರಾಟದ ಅಂಕಿಸಂಖ್ಯೆಗಳು ಕೋಟಿ ರೂ.ಗಳಲ್ಲಿ

ಉದ್ಯೋಗ
2014-20
ಜೇನು ಅಭಿಯಾನ
13,657
ಖಾದಿ
3 ಲಕ್ಷಕ್ಕೂ ಹೆಚ್ಚು
ಖಾದಿ
ಗ್ರಾಮೋದ್ಯೋಗ
30 ಲಕ್ಷಕ್ಕೂ ಹೆಚ್ಚು



ಇದೇ ಅವಧಿಯಲ್ಲಿ ಮಾರಾಟವು ಸುಮಾರು ಮೂರು ಪಟ್ಟು ಹೆಚ್ಚಾಗಿದೆ. 2019–20ರಲ್ಲಿ ಕೆವಿಐಸಿಯ ಒಟ್ಟು ವಹಿವಾಟು 88,887 ಕೋಟಿ ರೂ. ಗಳನ್ನು ತಲುಪಿದ್ದು, ಇದು ಯಾವುದೇ ಎಫ್‌ಎಂಸಿಜಿ ಕಂಪನಿಗಿಂತಲೂ ಹೆಚ್ಚಾಗಿದೆ. ಪ್ರಸ್ತುತ ಸರ್ಕಾರದ ಅವಧಿಯಲ್ಲಿ ಖಾದಿ ಉತ್ಪನ್ನಗಳ ಬಳಕೆಯಲ್ಲಿ ಅಭೂತಪೂರ್ವ ಬೆಳವಣಿಗೆಯಾಗಿದ್ದು 2015–16 ರಿಂದ ಅದರ ಉತ್ಪಾದನೆಯು ವಾರ್ಷಿಕ ಸರಾಸರಿ 19.45 ಶೇಕಡಕ್ಕೆ ವೃದ್ಧಿಯಾಗಿದೆ, ಇದು 2004 ರಿಂದ 2014 ರವರೆಗಿನ ಹಿಂದಿನ ಸರ್ಕಾರದ ಅವಧಿಯಲ್ಲಿ ಕೇವಲ ಶೇಕಡಾ 6.25 ಆಗಿತ್ತು.

ಪ್ರಸ್ತುತ ಸರ್ಕಾರದ ಅವಧಿಯಲ್ಲಿ ಖಾದಿ ಉತ್ಪನ್ನಗಳ ಮಾರಾಟವು ಶೇಕಡಾ 27.6 ವಾರ್ಷಿಕ ದರದಲ್ಲಿ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ, ಅದು 2004 ರಿಂದ 2014 ರವರೆಗೆ ಶೇಕಡಾ 6.65 ರಷ್ಟು ಮಾತ್ರ ಇತ್ತು. 2015–16ರಲ್ಲಿ 1,066 ಕೋಟಿ ರೂ. ಇದ್ದ ಖಾದಿ ವಸ್ತುಗಳ ಉತ್ಪಾದನೆಯು, 2019–20ರಲ್ಲಿ 2,292.44 ಕೋಟಿ ರೂ.ಗಳವರೆಗೆ ಏರಿಕೆಯಾಗಿದ್ದು, ಇದು ಶೇಕಡಾ 115 ಕ್ಕಿಂತ ಹೆಚ್ಚಾಗಿದೆ. ಖಾದಿ ಬಟ್ಟೆ ಉತ್ಪನ್ನಗಳ ಮಾರಾಟವು 2015–16ರಲ್ಲಿದ್ದ 1,510 ಕೋಟಿ ರೂ. ಗಳಿಂದ 2019–20ರಲ್ಲಿ 4,211.26 ಕೋಟಿ ರೂ.ಗಳಿಗೆ ಹೆಚ್ಚಾಗಿದ್ದು ಶೇಕಡಾ 179 ಏರಿಕೆಯಾಗಿದೆ.

### ಯುವಜನತೆಗೆ ಪ್ರಿಯ

ಪ್ರಧಾನಿ ನರೇಂದ್ರ ಮೋದಿ ಅವರು 2014 ರಲ್ಲಿ ಖಾದಿಯನ್ನು ಯುವಜನತೆಗೆ ಜನಪ್ರಿಯಗೊಳಿಸಲು ಯೋಜಿಸಿದ್ದರು. ಅವರ ಯೋಜನೆಯನ್ನು ಅನುಸರಿಸಿ, ಕೆವಿಐಸಿ ಕೂಡ ತನ್ನ ಉತ್ಪನ್ನಗಳನ್ನು ಇತರ ಖಾಸಗಿ ಬ್ರ್ಯಾಂಡ್‌ಗಳಂತೆ ಮಾರಾಟ ಮಾಡಲು ಪ್ರಾರಂಭಿಸಿತು. ಈಗ, ಇದು ಇಂಡೋ–ವೆಸ್ಟರ್ನ್ ಬಟ್ಟೆಗಳನ್ನು ಸಹ ಒದಗಿಸುತ್ತಿದೆ. ಉಡುಪುಗಳಲ್ಲದೆ, ಸೌಂದರ್ಯವರ್ಧಕ, ಸಾಬೂನು, ಶ್ಯಾಂಪೂ, ಆಯುರ್ವೇದ ಔಷಧಿಗಳು, ಜೇನುತುಪ್ಪ, ತೈಲಗಳು, ಚಹಾ, ಉಪ್ಪಿನಕಾಯಿ, ಹಪ್ಪಳ ಮತ್ತು ಚರ್ಮದ ವಸ್ತುಗಳನ್ನು ದೇಶ, ವಿದೇಶದ ಗ್ರಾಹಕರನ್ನು ಆಕರ್ಷಿಸಲು ನೀಡಲಾಗುತ್ತಿದೆ. ಇದು ಐದು ವರ್ಷಗಳಲ್ಲಿ ಗ್ರಾಮೋದ್ಯೋಗ ಉತ್ಪನ್ನಗಳ ಉತ್ಪಾದನೆ ಮತ್ತು ಮಾರಾಟವನ್ನು ದ್ವಿಗುಣಗೊಳಿಸಲು ಕಾರಣವಾಗಿದೆ. ಖಾದಿಯ ಈ ಅದ್ಭುತ ಬೆಳವಣಿಗೆಗೆ ಪ್ರಧಾನ ಮಂತ್ರಿಯವರ ನಿರಂತರ ಪ್ರಯತ್ನಗಳು ಕಾರಣ ಎಂದು ಕೆವಿಐಸಿ ಅಧ್ಯಕ್ಷ ವಿನಯ್ ಕುಮಾರ್ ಸಕ್ಸೇನಾ ಹೇಳುತ್ತಾರೆ. ■





# ಅನುಶೋಧನೆಗಳ ಸಮೃದ್ಧಿ

ಸ್ಟಾರ್ಟ್‌ಅಪ್ ಇಂಡಿಯಾ, ಅಟಲ್ ಅನುಶೋಧನಾ ಅಭಿಯಾನ ಮತ್ತು ಮೇಕ್ ಇನ್ ಇಂಡಿಯಾದಂತಹ ಕೇಂದ್ರದ ಯೋಜನೆಗಳು ಜಾಗತಿಕ ಅನುಶೋಧನಾ ಸೂಚ್ಯಂಕದಲ್ಲಿ ದೇಶವು ಅಗ್ರ 50 ದೇಶಗಳಲ್ಲಿ ಸ್ಥಾನ ಪಡೆಯುವಂತೆ ಮಾಡಿವೆ

ಯಾವುದೇ ಸಮಾಜ ಅಥವಾ ದೇಶವು ತನ್ನ ಸಮಕಾಲೀನರೊಂದಿಗೆ ಬೆಳೆಯಲು ಮತ್ತು ಸ್ಪರ್ಧಿಸಲು, ಬದಲಾವಣೆಗಳು ಮತ್ತು ಹೊಸತನಗಳಿಗೆ ಮುಕ್ತವಾಗಿರಬೇಕು. "ಕಲಿಕೆ ಮತ್ತು ಅನುಶೋಧನೆ ಎರಡೂ ಜೊತೆ ಜೊತೆಯಾಗಿರುತ್ತವೆ. ಯಶಸ್ಸಿನ ದುರಹಂಕಾರವೆಂದರೆ ನೀವು ನಿನ್ನೆ ಮಾಡಿದ್ದೇ ನಾಳೆಗೂ ಸಾಕು ಎಂದು ಯೋಚಿಸುವುದು" ಎಂದು ಇಂಗ್ಲಿಷ್ ಲೇಖಕ ವಿಲಿಯಂ ಪೊಲಾರ್ಡ್ ಹೇಳುತ್ತಾನೆ.

ಆದ್ದರಿಂದ, ಪ್ರಸ್ತುತ ಸರ್ಕಾರದವು ಅನುಶೋಧನೆ, ಸಂಶೋಧನೆ ಮತ್ತು ಅಭಿವೃದ್ಧಿಯತ್ತ ಗಮನ ಹರಿಸಿರುವುದು ಫಲಿತಾಂಶಗಳನ್ನು ನೀಡುತ್ತಿದೆ. ವಿಶ್ವ ಬೌದ್ಧಿಕ ಆಸ್ತಿ ಸಂಸ್ಥೆ (ಡಬ್ಲ್ಯುಐಪಿಒ)ಯ ಜಾಗತಿಕ ಅನುಶೋಧನಾ ಸೂಚ್ಯಂಕ–ಗ್ಲೋಬಲ್ ಇನ್ನೋವೇಶನ್ ಇಂಡೆಕ್ಸ್–(ಜಿಐಐ) 2020ರಲ್ಲಿ ಭಾರತವು ವಿಶ್ವದ ಅಗ್ರ 50 ದೇಶಗಳಲ್ಲಿ ಸ್ಥಾನ ಪಡೆದಿರುವುದರಿಂದ ದೇಶವು ಒಂದು ದೊಡ್ಡ ಮುನ್ನಡೆ ಸಾಧಿಸಿದೆ. ಸ್ಟಾರ್ಟ್‌ಅಪ್ ಇಂಡಿಯಾ, ಅಟಲ್ ಇನ್ನೋವೇಶನ್ ಮಿಷನ್, ಮೇಕ್ ಇನ್ ಇಂಡಿಯಾ, ಅಟಲ್ ಟಿಂಕರಿಂಗ್ ಲ್ಯಾಬ್, ಹ್ಯಾಕಥಾನ್ ಮುಂತಾದ ಯೋಜನೆಗಳು ಅನುಶೋಧನತೆಗೆ ಸಹಾಯ ಮಾಡುತ್ತಿವೆ.



ಭಾರತ ನಾಲ್ಕು ಸ್ಥಾನಗಳು ಮೇಲಕ್ಕೇರಿದೆ. ಜಾಗತಿಕ ಅನುಶೋಧನಾ ಸೂಚ್ಯಂಕ 2020 ಶ್ರೇಯಾಂಕದಲ್ಲಿ 48 ನೇ ಸ್ಥಾನದಲ್ಲಿದೆ. ಕೋವಿಡ್–19 ಸಾಂಕ್ರಾಮಿಕದ ನಡುವೆಯೂ, ಇದು ದೇಶಕ್ಕೆ ಒಂದು ಒಳ್ಳೆಯ ಸುದ್ದಿಯಾಗಿದೆ. ಇದು ದೇಶದ ದೃಢವಾದ ಸಂಶೋಧನೆ ಮತ್ತು ಅಭಿವೃದ್ಧಿಯ ವ್ಯವಸ್ಥೆಗೆ ಸಾಕ್ಷಿಯಾಗಿದೆ.

ಭಾರತವು 2019 ರಲ್ಲಿ 52ನೇ ಸ್ಥಾನದಲ್ಲಿತ್ತು ಮತ್ತು 2015 ರಲ್ಲಿ 81ನೇ ಸ್ಥಾನದಲ್ಲಿತ್ತು. ಹೆಚ್ಚು ಅನುಶೋಧನೆಯ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ತಂಡದಲ್ಲಿರುವುದು ಒಂದು ಸಾಧನೆಯಾಗಿದೆ. ಡಬ್ಲ್ಯುಐಪಿಒ ಭಾರತವನ್ನು ಮಧ್ಯ ಮತ್ತು ದಕ್ಷಿಣ ಏಷ್ಯಾದಲ್ಲಿ 2019ರ ಪ್ರಮುಖ ಅನುಶೋಧನೆಯ ಸಾಧಕ ದೇಶಗಳಲ್ಲಿ ಒಂದು ಎಂದು ಹೇಳಿದೆ.

ಅಪಾರ ಜ್ಞಾನ ಬಂಡವಾಳ, ರೋಮಾಂಚಕ ಸ್ಟಾರ್ಟ್ ಅಪ್ ವ್ಯವಸ್ಥೆ ಮತ್ತು ದೇಶದ ಸಾರ್ವಜನಿಕ ಮತ್ತು ಖಾಸಗಿ ಸಂಶೋಧನಾ ಸಂಸ್ಥೆಗಳು ಮಾಡಿದ ಅದ್ಭುತ ಕಾರ್ಯಗಳಿಂದಾಗಿ ಜಾಗತಿಕ ಅನುಶೋಧನಾ ಸೂಚ್ಯಂಕ ಶ್ರೇಯಾಂಕಗಳಲ್ಲಿ ಸ್ಥಿರವಾದ ಸುಧಾರಣೆ ಕಂಡಿದೆ.

ಇದಲ್ಲದೆ, 2020ರ ರಾಷ್ಟ್ರೀಯ ಶಿಕ್ಷಣ ನೀತಿಯು, ದೇಶದ ಮಕ್ಕಳು ಮತ್ತು ಯುವಕರಲ್ಲಿ ಹೊಸತನದ ಮನೋಭಾವವನ್ನು ಹೆಚ್ಚಿಸುವ ಒಂದು ಹೆಜ್ಜೆಯಾಗಿದೆ. ಕಳೆದ ವರ್ಷ ನೀತಿ ಆಯೋಗ ಬಿಡುಗಡೆ ಮಾಡಿದ ಭಾರತ ಅನುಶೋಧನಾ ಸೂಚ್ಯಂಕವನ್ನು ಭಾರತದ ಎಲ್ಲಾ ರಾಜ್ಯಗಳಲ್ಲಿ ಅನುಶೋಧನೆಯ ವಿಕೇಂದ್ರೀಕರಣದಲ್ಲಿ ಪ್ರಮುಖ ಹೆಜ್ಜೆಯಾಗಿ ಸ್ವೀಕರಿಸಲಾಗಿದೆ. ಜಿಐಐನಲ್ಲಿ ತನ್ನ ಶ್ರೇಯಾಂಕವನ್ನು ಸುಧಾರಿಸುವಲ್ಲಿ ದೇಶವು ಈಗ ತನ್ನ ಪ್ರಯತ್ನಗಳನ್ನು ದ್ವಿಗುಣಗೊಳಿಸಲು ಸಿದ್ಧವಾಗಿದೆ ಮತ್ತು ಮುಂದಿನ ಶ್ರೇಯಾಂಕದಲ್ಲಿ ಅಗ್ರ 25 ದೇಶಗಳಲ್ಲಿ ಸ್ಥಾನ ಪಡೆಯುವ ಗುರಿ ಹೊಂದಿದೆ. ಕಳೆದ ಆರು ವರ್ಷಗಳ ಇದುವರೆಗಿನ ಪ್ರಯಾಣ ಅದ್ಭುತವಾಗಿದೆ. ಜಿಐಐನ 2020 ರ ವರದಿಗಳ ಪ್ರಕಾರ, ಸುಮಾರು 50,000 ಸ್ಟಾರ್ಟ್‌ಅಪ್‌ಗಳೊಂದಿಗೆ, ಅಮೆರಿಕಾ ಮತ್ತು ಇಂಗ್ಲೆಂಡ್ ನಂತರ ಭಾರತವು ಇಂದು ಮೂರನೇ ಅತಿದೊಡ್ಡ ಸ್ಟಾರ್ಟ್‌ಅಪ್ ಆರ್ಥಿಕತೆಯಾಗಿದೆ.

ವರದಿಗಳ ಪ್ರಕಾರ, ಭಾರತವು 2019 ರಲ್ಲಿ 52 ನೇ ಸ್ಥಾನದಲ್ಲಿತ್ತು, 2018 ರಲ್ಲಿದ್ದ 57ನೇ ಸ್ಥಾನದಿಂದ ತನ್ನ ಶ್ರೇಯಾಂಕವನ್ನು ಸುಧಾರಿಸಿಕೊಂಡಿತ್ತು. ಜುರಿಚ್ ಮೂಲದ ಜಾಗತಿಕ ಸ್ಟಾರ್ಟ್‌ಅಪ್ ಪರಿಸರ ವ್ಯವಸ್ಥೆ ಮತ್ತು ಸಂಶೋಧನಾ ಕೇಂದ್ರವಾದ ಸ್ಟಾರ್ಟ್‌ಅಪ್ ಬ್ಲಿಂಕ್ ಪ್ರಕಾರ, 2019 ರಲ್ಲಿ 100 ದೇಶಗಳ ಪೈಕಿ ಭಾರತ 17ನೇ ಸ್ಥಾನದಲ್ಲಿದೆ, ಅದರ ಸ್ಟಾರ್ಟ್‌ಅಪ್ ಪರಿಸರ ವ್ಯವಸ್ಥೆಯ ಬಲವನ್ನು ಆಧರಿಸಿ, 2018ರಲ್ಲಿ 37ನೇ ಶ್ರೇಯಾಂಕದಿಂದ 20 ಸ್ಥಾನಗಳನ್ನು ಹೆಚ್ಚಿಸಿಕೊಂಡಿದೆ. ಜಿಐಐ ಶ್ರೇಯಾಂಕವು 80 ಸೂಚಕಗಳನ್ನು ಆಧರಿಸಿದೆ. ■

## 118 ಆ್ಯಪ್‌ಗಳನ್ನು ನಿಷೇಧಿಸಿದ ಸರ್ಕಾರ




**ದೇಶದ ಸಾರ್ವಭೌಮತ್ವ ಮತ್ತು ಸಮಗ್ರತೆಗೆ ಧಕ್ಕೆ ತರುವ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದ 118 ಮೊಬೈಲ್ ಅಪ್ಲಿಕೇಶನ್‌ಗಳನ್ನು ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ ನಿಷೇಧಿಸಿದೆ.**

**ಆಂಡ್ರಾಯ್ಡ್ ಮತ್ತು ಐಒಎಸ್ ಪ್ಲಾಟ್‌ಫಾರ್ಮ್‌ಗಳಲ್ಲಿ ಲಭ್ಯವಿರುವ ಕೆಲವು ಮೊಬೈಲ್ ಅಪ್ಲಿಕೇಶನ್‌ಗಳನ್ನು ದುರುಪಯೋಗಪಡಿಸಿಕೊಂಡ ಬಗ್ಗೆ ಸಚಿವಾಲಯವು ಹಲವಾರು ವರದಿಗಳು ಮತ್ತು ದೂರುಗಳನ್ನು ಸ್ವೀಕರಿಸಿದ ನಂತರ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.**

**ನಿಷೇಧವಾಗಿರುವ ಕೆಲವು ಅಪ್ಲಿಕೇಶನ್‌ಗಳು: ಪಿಯುಎಸ್ ಲಾಂಚರ್ ಪ್ರೊ–ಥೀಮ್, ಲೈವ್ ವಾಲ್ಪೇಪರ್ಸ್, ಸ್ಮಾರ್ಟ್, ಎಪಿಯುಎಸ್ ಲಾಂಚರ್– ಥೀಮ್, ಕಾಲ್ ಶೋ, ವಾಲ್ಪೇಪರ್, ಹೈಡ್‌ಆ್ಯಪ್ಸ್, ಬೈದು, ಫೇಸ್ಯು–ಇನ್‌ಸ್ಪೈರ್ ಯುವರ್ ಬ್ಯೂಟಿ, ಶಿಯೋಮಿಯ ಶೇರ್‌ಸೇವ್: ಲೇಟೆಸ್ಟ್ ಗ್ಯಾಜೆಟ್ಸ್, ಅಮೇಜಿಂಗ್ ಡೀಲ್ಸ್, ಕ್ಯಾಮ್ಕಾರ್ಡ್– ಬಿಸಿನೆಸ್ ಕಾರ್ಡ್ ರೀಡರ್, ವೀಚಾಟ್ ರೀಡಿಂಗ್, ಸೈಬರ್ ಹಂಟರ್, ಲುಡೋ ವರ್ಲ್ಡ್–ಲುಡೋ ಸೂಪರ್‌ಸ್ಟಾರ್, ಟ್ಯಾಂಕ್ ಟ್ಯಾಂಕ್ಸ್ ಮತ್ತು ಪಬ್ಜಿ ಮೊಬೈಲ್ ನಾರ್ಡಿಕ್ ಮ್ಯಾಪ್: ಲಿವಿಕ್, ಪಬ್ಜಿ ಮೊಬೈಲ್ ಲೈಟ್.**



## ಕಾರ್ಮಿಕ ಸಂಹಿತೆಯಿಂದ

# ಕಾರ್ಮಿಕರ ಸಬಲೀಕರಣ

# ಸಾಮಾಜಿಕ ಭದ್ರತೆಯ ಸುರಕ್ಷೆ ವಿಸ್ತರಣೆ, ಉತ್ತಮ ಕೂಲಿ, ಉಚಿತ ಆರೋಗ್ಯ ಸೇವೆ, ಔಷಧ, ಕಾರ್ಯಸ್ಥಳದಲ್ಲಿ ಹೆಚ್ಚಿನ ಸುರಕ್ಷತೆ ಒದಗಿಸುವುದಕ್ಕೆ ನಾಲ್ಕು ಕಾರ್ಮಿಕ ಸಂಹಿತೆಗಳೂ ಗಮನಹರಿಸಿವೆ.

ಸ್ವತಂತ್ರ ಭಾರತದ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ, ಪ್ರಸಕ್ತ ಸರ್ಕಾರ 50 ಕೋಟಿ ಕಾರ್ಮಿಕರಿಗೆ ಸಂಕೀರ್ಣ ಕಾರ್ಮಿಕ ಕಾನೂನುಗಳ ಗೋಜಲಿನಿಂದ ಮುಕ್ತಿ ನೀಡಿ, ಅವರಿಗೆ ಸಾಮಾಜಿಕ ಭದ್ರತೆ ವ್ಯಾಪ್ತಿ ಒದಗಿಸಲು ಪರಿಹಾರ ಕ್ರಮಗಳನ್ನು ಪ್ರಾರಂಭಿಸಿದೆ.

ಕಾರ್ಮಿಕ ಸುಧಾರಣೆಯ ಉಪಕ್ರಮದ ಭಾಗವಾಗಿ, ಸರ್ಕಾರ ಹಲವು ಕಾರ್ಮಿಕ ಕಾನೂನುಗಳನ್ನು – ವೇತನ; ಕೈಗಾರಿಕಾ ಸಂಬಂಧ; ಸಾಮಾಜಿಕ ಭದ್ರತೆ ಮತ್ತು ಸುರಕ್ಷತೆ ಹಾಗೂ ಆರೋಗ್ಯಪೂರ್ಣ ಕೆಲಸದ ವಾತಾವರಣ ನಾಲ್ಕು ಸಂಹಿತೆಗಳಲ್ಲಿ ವಿಲೀನ ಮಾಡಲು ನಿರ್ಧರಿಸಿದೆ.

ದೇಶದ ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯ ಪ್ರಯೋಜನಗಳೊಂದಿಗೆ ಗೌರವಯುತ ಜೀವನ ಒದಗಿಸುವುದು ಇದರ ಗುರಿಯಾಗಿದೆ. ಅಸಂಘಟಿತ ವಲಯದ ಶೇಕಡಾ 93 ರಷ್ಟು ಕಾರ್ಮಿಕರ ಹಿತಾಸಕ್ತಿಗಳನ್ನು ರಕ್ಷಿಸುವ ಯಾವುದೇ ಕಾನೂನು ಇಲ್ಲದ ಕಾರಣದಿಂದ ಕಾರ್ಮಿಕರ ಕರುಣಾಜನಕ ಸ್ಥಿತಿಯನ್ನು ಅಳೆಯಬಹುದಾಗಿದೆ. ಸಂಘಟಿತ ವಲಯದಲ್ಲಿ ಕೇವಲ ಶೇಕಡ 7ರಷ್ಟು ಕಾರ್ಮಿಕರಿದ್ದಾರೆ.

ಸರ್ಕಾರ ಕಾರ್ಮಿಕ ಕಾಯಿದೆ ಸುಧಾರಣೆಗೆ ಬದ್ಧವಾಗಿದೆ. 2014ರ ಅಕ್ಟೋಬರ್ 16ರಂದು 'ಶ್ರಮೇವ ಜಯತೆ' ಆರಂಭಿಸಿದಾಗ, ಪ್ರಧಾನಿ ಕಾರ್ಮಿಕರನ್ನು "ರಾಷ್ಟ್ರ ನಿರ್ಮಾತೃಗಳು' ಎಂದು ಸಂಬೋಧಿಸಿದ್ದರು.

ಸರ್ಕಾರ 'ಶ್ರಮೇವ ಜಯತೆ' ಅಡಿಯಲ್ಲಿ ಐದು ಬೃಹತ್ ಉಪಕ್ರಮಗಳನ್ನು ಆರಂಭಿಸಿತ್ತು. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಒಂದೇ ಆನ್‌ಲೈನ್ ಅರ್ಜಿಯ ಮೂಲಕ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಕೆಯೂ ಸೇರಿದಂತೆ 16 ಕಾರ್ಮಿಕ ಕಾನೂನುಗಳ ಅನುಸರಣೆಯನ್ನು ಸರಳೀಕರಿಸುವ ಉದ್ದೇಶದ "ಶ್ರಮ್ ಸುವಿದಾ ಪೋರ್ಟಲ್'. ಪರಿಶೀಲನೆಗಾಗಿ ಯಾದೃಚ್ಛಿಕವಾಗಿ ಘಟಕಗಳನ್ನು ಆಯ್ಕೆ ಮಾಡಲು ಪಾರದರ್ಶಕ ಕಾರ್ಮಿಕ ತಪಾಸಣೆ ಯೋಜನೆ ಮತ್ತೊಂದು ಸುಧಾರಣೆಯಾಗಿದೆ. ಚೌಕಾಶಿಯಲ್ಲಿ ಉತ್ತಮ ಅನುಸರಣೆ ಖಾತ್ರಿಪಡಿಸಿಕೊಳ್ಳಲು "ಇನ್ಸ್‌ಪೆಕ್ಟರ್ ರಾಜ್" ನಿಂದ ಅನಗತ್ಯ ಕಿರುಕುಳವನ್ನು ಕೊನೆಗೊಳಿಸಲು ಇದು ಸಹಾಯಕವಾಗಿದೆ. ಈ ಯೋಜನೆಯು ಮೊದಲ ಬಾರಿಗೆ ಸಂಘಟಿತ ವಲಯದ ಇಪಿಎಫ್ ಚಂದಾದಾರರಿಗೆ ಸಾರ್ವತ್ರಿಕ ಖಾತೆ ಸಂಖ್ಯೆ (ಯುಎಎನ್) ಮೂಲಕ ವರ್ಗಾವಣೆ (ಪೋರ್ಟಬಿಲಿಟಿ) ಸಕ್ರಿಯಗೊಳಿಸಿದೆ. ಇದು ನೌಕರರ ಭವಿಷ್ಯ ನಿಧಿ ಸಂಸ್ಥೆ (ಇಪಿಎಫ್‌ಒ) ಯಲ್ಲಿ ಯಾರೂ ಕ್ಲೇಮ್ ಮಾಡದಿರುವ 27,000 ಕೋಟಿ ರೂ.ಗಳ ಪ್ರವೇಶ ಸುಗಮಗೊಳಿಸುತ್ತದೆ.

ಅಸಂಘಟಿತ ವಲಯದ ವಯೋವೃದ್ಧ ಕಾರ್ಮಿಕರ ಸಾಮಾಜಿಕ ಭದ್ರತೆಗಾಗಿ ಸರ್ಕಾರವು ಅವಕಾಶ ಕಲ್ಪಿಸಿದೆ. ಇದಕ್ಕಾಗಿ ಪ್ರಧಾನಮಂತ್ರಿ ಶ್ರಮ ಯೋಗಿ ಮಾನ-ಧನ್ ಯೋಜನೆಯನ್ನು ಪ್ರಾರಂಭಿಸಲಾಗಿದೆ. ಇದರ ಅಡಿಯಲ್ಲಿ ಕಾರ್ಮಿಕರಿಗೆ 60 ವರ್ಷ ದಾಟಿದ ನಂತರ ಮಾಸಿಕ ಪಿಂಚಣಿಯಾಗಿ 3,000 ರೂ. ನೀಡಲಾಗುತ್ತದೆ. ಈ ಎಲ್ಲ ಉಪಕ್ರಮಗಳನ್ನು ಮುಂದೆ ತೆಗೆದುಕೊಂಡು ಹೋಗಲು, ಸರ್ಕಾರ ಈಗ ಎಲ್ಲ ಕಾರ್ಮಿಕ ಕಾಯಿದೆಗಳನ್ನು ನಾಲ್ಕು ಕಾರ್ಮಿಕ ಸಂಹಿತೆಗಳಲ್ಲಿ ವಿಲೀನಗೊಳಿಸುತ್ತಿದೆ. ಒಂದು ಸಂಹಿತೆ ವೇತನ ನಿರ್ವಹಿಸಿದರೆ; ಉಳಿದವು ಔದ್ಯೋಗಿಕ ಸುರಕ್ಷತೆ ಮತ್ತು ಆರೋಗ್ಯಪೂರ್ಣ ಕೆಲಸದ ವಾತಾವರಣ ನಿರ್ವಹಿಸುತ್ತವೆ. ಸಾಮಾಜಿಕ ಭದ್ರತೆ ಕುರಿತಂತೆ ಒಂದು ಸಂಹಿತೆ ಇದ್ದರೆ, ಮತ್ತೊಂದು ಕೈಗಾರಿಕಾ ಬಾಂಧವ್ಯಕ್ಕೆ ಸಂಬಂಧಿಸಿದ್ದಾಗಿದೆ. ವೇತನ ಸಂಹಿತೆಯನ್ನು ಸಂಸತ್ತು ಈಗಾಗಲೇ ಅನುಮೋದಿಸಿದೆ. ಇತರ ಮೂರು ಸಂಹಿತೆಗಳಿಗೆ ಸಂಪುಟ ಅನುಮೋದನೆ ನೀಡಿದೆ.

## ಕಾನೂನುಗಳ ಸಂಕೀರ್ಣತೆಯಿಂದ ಮುಕ್ತಿ

ಕಾರ್ಮಿಕ ಕಾಯಿದೆಗಳ ಹಲವು ನಿಯಮಗಳು ಬ್ರಿಟಿಷರ ಕಾಲದಿಂದಲೂ ಇದ್ದವು. ಸಮಯ ಕಳೆದರೂ, ಈ ಕಾನೂನುಗಳಲ್ಲಿ ಯಾವುದೇ ಬದಲಾವಣೆಯಾಗದೆ ಅವು ಅನಗತ್ಯವಾಗಿದ್ದವು. ಕಾರ್ಮಿಕರ ಹಿತಾಸಕ್ತಿಗಳನ್ನು ಕಾಪಾಡುವ ಬದಲು ಅವು ಅಡ್ಡಿಯುಂಟು ಮಾಡುತ್ತಿದ್ದವು.

ಕಾನೂನುಗಳ ಗೋಜಲು ಎಷ್ಟಿತ್ತೆಂದರೆ ಪ್ರಕ್ರಿಯೆಯಲ್ಲಿ ಕಾರ್ಮಿಕರು ಅನೇಕ ಅರ್ಜಿಗಳನ್ನು ಭರ್ತಿ ಮಾಡುವಂತೆ ಒತ್ತಾಯಿಸುತ್ತಿತ್ತು. ಅಂತಹ ಪರಿಸ್ಥಿತಿಯಲ್ಲಿ, ಅವುಗಳನ್ನು ನಾಲ್ಕು ಸಂಹಿತೆಗಳ ಅಡಿಯಲ್ಲಿ ತರಲು ಸರ್ಕಾರ ಬಯಸಿದೆ.

### ವಲಸೆ ಕಾರ್ಮಿಕರ ಕಾಳಜಿ

ಕೋವಿಡ್-19 ಲಾಕ್‌ಡೌನ್ ವೇಳೆ, ಪ್ರಧಾನಮಂತ್ರಿ ವಲಸೆ ಕಾರ್ಮಿಕರ ಬಗ್ಗೆ ಕಾಳಜಿ ವಹಿಸಿದ್ದರು ಮತ್ತು ಸಂಕಷ್ಟದ ಸಮಯದಲ್ಲಿ ಅವರಿಗೆ ಸಾಧ್ಯವಾದಷ್ಟೂ ಕಡಿಮೆ ತೊಂದರೆ ಆಗುವ ರೀತಿಯಲ್ಲಿ ಕ್ರಮ ವಹಿಸಿದರು. ಇತರ ಪರಿಹಾರಗಳ ಜೊತೆಗೆ ಉಚಿತ ಪಡಿತರವನ್ನೂ ಪೂರೈಸಿದ ಸರ್ಕಾರ, ಅವರ ಜೀವನ ಸುಗಮಗೊಳಿಸಲು ಗಮನಹರಿಸಿರು.

ವಲಸೆ ಕಾರ್ಮಿಕರ ದುಃಸ್ಥಿತಿಯನ್ನು ನೋಡಿ ಪ್ರಧಾನಿ ದುಃಖಿತರಾದರು. ಏತನ್ಮಧ್ಯೆ, ಕಾರ್ಮಿಕರಿಗೆ ಉತ್ತಮ ಭವಿಷ್ಯವನ್ನು ಕಲ್ಪಿಸಲು ಮೂರು ಸಂಹಿತೆಗಳನ್ನು ರೂಪಿಸಿ, ನಿರಂತರ ಪ್ರಯತ್ನಗಳನ್ನು ಮಾಡಲಾಯಿತು.

ಈಗ, ಹೊಸ ನಿಬಂಧನೆಗಳೊಂದಿಗೆ ವಲಸೆ ಕಾರ್ಮಿಕರಿಗೆ ರಾಷ್ಟ್ರೀಯ ಡೇಟಾಬೇಸ್ ಮಾಡಲಾಗಿದ್ದು, ಈಗ ಅವರು ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಹೋದರೂ, ಅವರು ಅದೇ ಸಂಹಿತೆಯ ಅಡಿಯಲ್ಲಿ ಸೌಲಭ್ಯ ಪಡೆಯುತ್ತಾರೆ.

ಈವರೆಗೆ ಗುತ್ತಿಗೆದಾರರ ಕೈಕೆಳಗೆ ಕೆಲಸ ಮಾಡುತ್ತಿದ್ದ ವಲಸೆ ಕಾರ್ಮಿಕರು ಮಾತ್ರವೇ ಈ ಕಾಯಿದೆ ವ್ಯಾಪ್ತಿಗೆ ಬರುತ್ತಿದ್ದರು. ಹೊಸ ಸಂಹಿತೆಯ ಪ್ರಕಾರ ಉದ್ಯೋಗದಾರರು ವರ್ಷಕ್ಕೊಮ್ಮೆ ತಮ್ಮ ಮನೆಗೆ ತೆರಳುವ ಕಾರ್ಮಿಕರಿಗೆ ಸಾರಿಗೆ ಭತ್ಯೆ ನೀಡಬೇಕು.

## ಇಎಸ್ಐಸಿಯ

## ಸಾಮಾಜಿಕ ವಿಸ್ತರಣೆ

ಇಎಸ್ಐಸಿಯ ಪ್ರಯೋಜನಗಳು ವಿಸ್ತರಣೆ **50**

- ಅಸಂಘಟಿತ ವಲಯಕ್ಕೆ ಸಾಮಾಜಿಕ ಭದ್ರತೆ ನಿಧಿ
- ಇಎಸ್.ಐ.ಸಿ. ನೌಕರರ ಸಣ್ಣ ವಂತಿಗೆಯೊಂದಿಗೆ ಅವರಿಗೆ ಉಚಿತ ಆರೋಗ್ಯ ಆರೈಕೆ ಮತ್ತು ಔಷಧ ಪೂರೈಸುತ್ತದೆ.
- ಇಎಸ್.ಐ.ಸಿ.ಯ ಬಾಗಿಲು ಅಸಂಘಟಿತ ವಲಯದ ಕಾರ್ಮಿಕರಿಗೂ ಈಗ ತೆರೆದಿದೆ
- ಜಿಲ್ಲಾ ಮಟ್ಟದವರೆಗೆ ಇಎಸ್.ಐ.ಸಿ. ಆಸ್ಪತ್ರೆಗಳು, ಚಿಕಿತ್ಸಾಲಯಗಳು ಮತ್ತು ಶಾಖೆಗಳ ವಿಸ್ತರಣೆ.



## ವೇತನ ಸಂಹಿತೆ

**50** ಕೋಟಿ ಸಂಘಟಿತ ಮತ್ತು ಅಸಂಘಟಿತ ವಲಯದ ಕಾರ್ಮಿಕರು ಕನಿಷ್ಠ ವೇತನ ಖಾತ್ರಿ ಪಡೆಯುತ್ತಾರೆ.

- ಸ್ವಾತಂತ್ರ್ಯ ಪಡೆದ 73 ವರ್ಷಗಳ ನಂತರ, ಸರ್ಕಾರ 50 ಕೋಟಿ ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರ ವೇತನ ಭದ್ರತೆ, ಸಾಮಾಜಿಕ ಭದ್ರತೆ ಮತ್ತು ಆರೋಗ್ಯ ಸುರಕ್ಷತೆಗಾಗಿ ಕಾರ್ಯನಿರ್ವಹಿಸುತ್ತಿದೆ.
- ಪ್ರತಿಯೊಬ್ಬ ಕಾರ್ಮಿಕರಿಗೂ ಕನಿಷ್ಠ ವೇತನ ಖಾತ್ರಿ

## ಔದ್ಯೋಗಿಕ ಸುರಕ್ಷತೆ ಮತ್ತು ಆರೋಗ್ಯ (ಓ.ಎಸ್.ಎಚ್) ಸಂಹಿತೆ

- ಪ್ರತಿಯೊಬ್ಬ ಕಾರ್ಮಿಕನಿಗೂ ನೇಮಕಾತಿ ಪತ್ರ
- ವರ್ಷದಲ್ಲಿ ಒಮ್ಮೆ ಮನೆಗೆ ಹೋಗಲು ಭತ್ಯೆ ಪಡೆಯಲಿರುವ ವಲಸೆ ಕಾರ್ಮಿಕರು
- ವಲಸೆ ಕಾರ್ಮಿಕರು ಪ್ರಸ್ತುತ ಕೆಲಸ ಮಾಡುತ್ತಿರುವ ವಲಯಕ್ಕೆ ಪಡಿತರ ಚೀಟಿ ವರ್ಗಾವಣೆಯ ಸೌಲಭ್ಯ.
- ಕಾರ್ಮಿಕರಿಗೆ ವಾರ್ಷಿಕ ಆಧಾರದಲ್ಲಿ ಉಚಿತ ಆರೋಗ್ಯ ತಪಾಸಣೆ
- ಯಾವುದೇ ವಲಯದಲ್ಲಿ ಕೆಲಸ ಮಾಡಲು ಮಹಿಳಾ ಕಾರ್ಮಿಕರಿಗೆ ಅವಕಾಶ
- ರಾತ್ರಿಯ ಪಾಳಿಯಲ್ಲಿ ಕೆಲಸ ಮಾಡುವ ಮಹಿಳಾ ಕಾರ್ಮಿಕರಿಗೆ ಸೂಕ್ತ ಭದ್ರತೆ
- ನಿರ್ಮಾಣ ಕೈಗಾರಿಕೆಯಲ್ಲಿನ ಕಾರ್ಮಿಕರು ತಮಗಾಗಿ ಸ್ಥಾಪಿಸಲಾಗಿರುವ ನಿಧಿಯಿಂದ ನೆರವು ಪಡೆಯಲಿದ್ದಾರೆ.
- ವಾರ್ಷಿಕ ರಜೆ ಅವಧಿಯನ್ನು 240 ದಿನಗಳಿಂದ 180 ದಿನಗಳಿಗೆ ಇಳಿಸಲಾಗಿದೆ. ಪ್ರತಿ 20 ದಿನಗಳ ಕೆಲಸದ ನಂತರ ಒಂದು ದಿನದ ರಜೆ ಸಂಗ್ರಹವಾಗುತ್ತದೆ.
- ವಲಸೆ ಕಾರ್ಮಿಕರಿಗಾಗಿ ರಾಷ್ಟ್ರೀಯ ಡೇಟಾಬೇಸ್ ಸಿದ್ಧಪಡಿಸಬೇಕು

# ಭದ್ರತೆ ಸಂಹಿತೆ

## (ಆರೋಗ್ಯ ಮತ್ತು ವಿಮೆ)

ಊಬರ್, ಓಲಾ, ಫ್ಲಿಪ್ ಕಾರ್ಟ್ ಮತ್ತು ಅಮೇಜಾನ್ ನಂಥ ನೂತನ ತಂತ್ರಜ್ಞಾನ ವೇದಿಕೆಗಳನ್ನು ಲಕ್ಷಾಂತರ ಕಾರ್ಮಿಕರು ಬಳಸುತ್ತಿದ್ದಾರೆ.

- ಅಪಾಯಕಾರಿ ಘಟಕದಲ್ಲಿ ಒಬ್ಬನೇ ಕಾರ್ಮಿಕನಿದ್ದರೂ ಇ.ಎಸ್.ಐ.ಸಿ. ಸೌಲಭ್ಯ ವಿಸ್ತರಣೆ
- ತೋಟಗಾರಿಕೆ ಕಾರ್ಮಿಕರಿಗೂ ಇ.ಎಸ್.ಐ.ಸಿ. ಸೌಲಭ್ಯ
- 10 ಕಾರ್ಮಿಕರಿಗಿಂತ ಕಡಿಮೆ ಇರುವ ಘಟಕಗಳಿಗೆ ಸ್ವಯಂಪ್ರೇರಿತರಾಗಿ ಇ.ಎಸ್.ಐ.ಸಿ. ಸೇರುವ ಅವಕಾಶ.




- ಪ್ರತಿಯೊಬ್ಬ ಕಾರ್ಮಿಕರಿಗೂ ಸಕಾಲದಲ್ಲಿ ವೇತನ ಖಾತ್ರಿ
- ಕೂಲಿಯಲ್ಲಿ ಯಾವುದೇ ಲಿಂಗಭೇದವಿಲ್ಲ.
- ಪ್ರಾದೇಶಿಕ ಅಸಮಾನತೆ ಹೋಗಲಾಡಿಸಲು ಕನಿಷ್ಠ ಹಂತದ ವೇತನಕ್ಕೆ ಅವಕಾಶ.

## ಇಪಿಎಫ್ಒ ವಿಸ್ತರಣೆ

### (ಪಿಂಚಣಿ)

- ಸಂಘಟಿತ ಮತ್ತು ಅಸಂಘಟಿತ ವಲಯದ ಎಲ್ಲ ಕಾರ್ಮಿಕರಿಗೂ ಪಿಂಚಣಿ (ಇಪಿಎಫ್ಒ) ಸೌಲಭ್ಯ.
- ಸ್ವಯಂ ಉದ್ಯೋಗ ಪ್ರವರ್ಗದ ನೌಕರರು ಮತ್ತು ಇತರ ಕೆಲವು ಪ್ರವರ್ಗದ ನೌಕರರನ್ನೂ ಇಪಿಎಫ್ಒ ವ್ಯಾಪ್ತಿಗೆ ತರಲಾಗಿದೆ.
- ಅಸಂಘಟಿತ ವಲಯಕ್ಕಾಗಿ ಸಾಮಾಜಿಕ ಭದ್ರತೆ ನಿಧಿ ಸ್ಥಾಪನೆಗೆ ಅವಕಾಶ
- ನಿಗದಿತ ಅವಧಿಯ ಉದ್ಯೋಗಿಗಳಿಗೆ ಕನಿಷ್ಠ ಸೇವಾ ಅವಧಿಗೆ ಬಾಧ್ಯತೆ ಇಲ್ಲದಂತೆ ಗ್ರಾಚುಯಿಟಿ
- ನಿಗದಿತ ನೌಕರರಿಗೆ ಮತ್ತು ನಿರ್ದಿಷ್ಟ ಅವಧಿಗೆ ಕೆಲಸ ಮಾಡುವ ನೌಕರರಿಗೆ ಸಮಾನವಾದ ಸಾಮಾಜಿಕ ಭದ್ರತೆ.
- ಪೋರ್ಟಲ್ ಮೂಲಕ ನೋಂದಾಯಿಸಿ ಅಸಂಘಟಿತ ವಲಯದ ಕಾರ್ಮಿಕರ ರಾಷ್ಟ್ರೀಯ ದತ್ತಾಂಶ ಸೃಷ್ಟಿ
- ಈಗ, 20ಕ್ಕೂ ಹೆಚ್ಚು ಕಾರ್ಮಿಕರನ್ನು ಹೊಂದಿರುವ ಸಂಸ್ಥೆಗಳು ಖಾಲಿ ಹುದ್ದೆಗಳ ಬಗ್ಗೆ ಆನ್‌ಲೈನ್‌ನಲ್ಲಿ ಮಾಹಿತಿ ನೀಡಬಹುದು.





## ಕೈಗಾರಿಕಾ ಬಾಂಧವ್ಯ (ಐಆರ್) ಸಂಹಿತೆ

- ನ್ಯಾಯಾಧಿಕರಣಗಳಿಂದ ಕಾರ್ಮಿಕರಿಗೆ ತ್ವರಿತ ನ್ಯಾಯ
- ನ್ಯಾಯಾಧಿಕರಣಗಳಲ್ಲಿ ನೌಕರರ ಪ್ರಕರಣಗಳು ಒಂದು ವರ್ಷದಲ್ಲಿ ಇತ್ಯರ್ಥ
- ನ್ಯಾಯಾಧಿಕರಣದ ಇಬ್ಬರು ಸದಸ್ಯರು ಕೆಲಸವನ್ನು ತ್ವರಿತಗೊಳಿಸಬೇಕು.
- ಇತ್ಯರ್ಥ ಕುರಿತ ಮಾತುಕತೆ ನಡೆಸಲು ಮಾನ್ಯತೆ ಪಡೆದ ಸಂಘಟನೆಗಳಿಗೆ ಅವಕಾಶ ಮತ್ತು ಶೇ. 51 ಮತಗಳನ್ನು ಪಡೆದ ಕಾರ್ಮಿಕ ಸಂಘಟನೆಗೆ ಮಾನ್ಯತೆ.
- ಬೇರೆಡೆ ಎಲ್ಲ ಸಂಘಟನೆಗಳಿಂದ ಒಂದು ಮಂಡಳಿ ರಚನೆ
- ನೌಕರಿ ಕಳೆದುಕೊಳ್ಳುವ ಯಾವುದೇ ಕಾರ್ಮಿಕನಿಗೆ ಅಟಲ್ ಬಿಮಿತ್ ವ್ಯಕ್ತಿ ಕಲ್ಯಾಣ ಯೋಜನೆಯಡಿ ನಿಯಮಗಳ ಪ್ರಕಾರ ವೇತನ ನೀಡಿಕೆ.
- ಉದ್ಯೋಗ ನಷ್ಟದ ತರುವಾಯ ಮರು ಕೌಶಲ ಕಲಿಕೆಗೆ 15 ದಿನಗಳ ವೇತನ
- ಕಾರ್ಮಿಕ ಸಂಘಗಳಿಗೆ ಕೇಂದ್ರ ಮತ್ತು ರಾಜ್ಯಮಟ್ಟದಲ್ಲಿ ಮಾನ್ಯತೆ ನೀಡಲಾಗುವುದು. ಈ ಮಾನ್ಯತೆಯನ್ನು ಮೊದಲ ಬಾರಿಗೆ ನೀಡಲಾಗುತ್ತಿದೆ.



## ಕೊರೊನಾ ಕಾಲದಲ್ಲಿ ಕಾರ್ಮಿಕರಿಗೆ ನೆರವಿನ ಹಸ್ತ

**80** ಕೋಟಿ ಜನರಿಗೆ 8 ತಿಂಗಳುಗಳ ಕಾಲ ಉಚಿತ ಪಡಿತರ

- ರೈಲು ಮತ್ತು ಬಸ್‌ಗಳ ಮೂಲಕ ತಮ್ಮ ಊರುಗಳಿಗೆ ತೆರಳಲು ಕಾರ್ಮಿಕರಿಗೆ ಸೌಲಭ್ಯ.
- ಪ್ರಧಾನಮಂತ್ರಿ ಗರೀಬ್ ಕಲ್ಯಾಣ ರೋಜ್‌ಗಾರ್ ಅಭಿಯಾನದಡಿ ಅವರ ಮನೆಗಳ ಸಮೀಪದಲ್ಲೇ ಉದ್ಯೋಗ ಒದಗಿಸಲಾಗುತ್ತಿದೆ.
- 116 ಜಿಲ್ಲೆಗಳ 23,000 ಕಾರ್ಮಿಕರು ಈ ಯೋಜನೆಯ ಮೂಲಕ ಸಂಪರ್ಕಿತರಾಗಿದ್ದಾರೆ.

### ಕಾರ್ಮಿಕರು ಮತ್ತು ಉದ್ಯೋಗದಾತರ ಅನುಬಂಧ

ನಾಲ್ಕು ಕಾರ್ಮಿಕ ಸಂಹಿತೆಗಳು ಕಾರ್ಮಿಕರು ಮತ್ತು ಉದ್ಯೋಗದಾತರ ಹಕ್ಕುಗಳ ನಡುವಿನ ಸಮತೋಲನವನ್ನು ಸಾಧಿಸುತ್ತವೆ. ಜುಲೈ 20, 2015 ರಂದು 46ನೇ ಭಾರತೀಯ ಕಾರ್ಮಿಕ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಪ್ರಧಾನಿ ಅವರು ತಮ್ಮ ಭಾಷಣದಲ್ಲಿ ವ್ಯಕ್ತಪಡಿಸಿದ ಚಿಂತನೆಗಳ ಆಧಾರದ ಮೇಲೆ ಇದನ್ನು ನಿರ್ಧರಿಸಲಾಗಿದೆ. ರಾಷ್ಟ್ರ ನಿರ್ಮಾಣದಲ್ಲಿ ಕಾರ್ಮಿಕರು, ರೈತರು ಮತ್ತು ನೌಕರರು ನಿರ್ಣಾಯಕ ಪಾತ್ರ ವಹಿಸುತ್ತಾರೆ ಎಂದು ಪ್ರಧಾನಿ ನಂಬಿದ್ದಾರೆ. ನೌಕರರು ಅತೃಪ್ತಿ ಹೊಂದಿದ್ದರೆ, ದೇಶವು ಸಂತುಷ್ಟವಾಗಿರಲು ಸಾಧ್ಯವಿಲ್ಲ.

**ನಾಲ್ಕು ಕಾರ್ಮಿಕ ಸಂಹಿತೆಗಳು ನೌಕರರು ಮತ್ತು ಮಾಲೀಕರ ನಡುವಿನ ಹಕ್ಕುಗಳನ್ನು ಸಮತೋಲಿತವಾಗಿಡುತ್ತದೆ. ಇದನ್ನು ಪ್ರಧಾನಮಂತ್ರಿಯವರು 2015ರ ಜುಲೈ 20ರಂದು ಮಾಡಿದ ಭಾಷಣದಲ್ಲಿ ವ್ಯಕ್ತಪಡಿಸಿದ ಚಿಂತನೆಗಳ ಆಧಾರದಲ್ಲಿ ನಿರ್ಧರಿಸಲಾಗಿದೆ.**

"ಒಂದು ಸಮಾಜವಾಗಿ ನಾವು ಕಾರ್ಮಿಕರ ಘನತೆಯನ್ನು ಗೌರವಿಸಬೇಕು" ಎಂದು ಅವರು ಹೇಳಿದ್ದರು. ಉದ್ಯೋಗದಾತ ಮತ್ತು ಕೆಲಸಗಾರ ನಡುವೆ ಬಾಂಧವ್ಯ ಇರಬೇಕು. ಸಂಸ್ಥೆಯನ್ನು ಸುಗಮವಾಗಿ ನಡೆಸಲು ಪರಸ್ಪರ ಗೌರವ ಇರಬೇಕು. ಉದ್ಯೋಗದಾತನು ತನ್ನ ಕಾರ್ಮಿಕರ ಬಗ್ಗೆ ಸಹಾನುಭೂತಿ ಹೊಂದಿರಬೇಕು ಮತ್ತು ಕಾರ್ಮಿಕರಿಂದಲೂ ಪರಸ್ಪರ ಸಹಾನುಭೂತಿ ಇರಬೇಕು ಎಂದೂ ಅವರು ಹೇಳಿದ್ದರು.

### ಕಾರ್ಮಿಕರು ಕಾನೂನು ಅರಿತು, ಹಕ್ಕು ಪಡೆಯಬೇಕು

ಕಾರ್ಮಿಕ ಸುಧಾರಣೆಯ ನಿಟ್ಟಿನಲ್ಲಿ ಸರ್ಕಾರದ ಯೋಜನೆಗಳು ಮತ್ತು ಉದ್ದೇಶ ಅದು ಪ್ರಥಮ ಅವಧಿಯಲ್ಲೇ ಸ್ಪಷ್ಟವಾಗಿತ್ತು. ಪ್ರಧಾನಮಂತ್ರಿಯವರು ಕೇಂದ್ರ ಹಣಕಾಸು ಸಚಿವರ ಅಧ್ಯಕ್ಷತೆಯಲ್ಲಿ ಸಮಗ್ರ ದೃಷ್ಟಿಕೋನದೊಂದಿಗೆ ಕಾರ್ಮಿಕ ಸುಧಾರಣೆಗಳನ್ನು ಮಾಡಲು ಸಮಿತಿ ರಚಿಸಿದರು. ಹಾಲಿ ಕಾರ್ಮಿಕ ಕಾನೂನುಗಳು ನಿಜವಾಗಿಯೂ ಉಪಯುಕ್ತವಾಗಿವೆಯೇ ಅಥವಾ ಕಲ್ಯಾಣ ಕ್ರಮಗಳನ್ನು ಕಾರ್ಯಗತಗೊಳಿಸಲು ಅಡ್ಡಿಯಾಗುತ್ತಿವೆಯೇ ಎಂಬುದು ಅವರ ಕಾಳಜಿಯಾಗಿತ್ತು. ಸರ್ಕಾರದ ಉಪಕ್ರಮದ

## ಸಂಘಟಿತ ಮತ್ತು ಅಸಂಘಟಿತ ವಲಯಗಳ ಕಾರ್ಮಿಕರ ಕಾಳಜಿ

ಭಾರತದಲ್ಲಿ 50 ಕೋಟಿ ಕಾರ್ಮಿಕರ ಶಕ್ತಿ ಇದೆ. ಇದರಲ್ಲಿ ಶೇಕಡಾ 93 ರಷ್ಟು ಜನರು ಅಸಂಘಟಿತ ವಲಯದವರಾಗಿದ್ದು, ಕಠಿಣ ಕಾರ್ಮಿಕ ಕಾನೂನುಗಳ ಹೊರತಾಗಿಯೂ ಪ್ರಯೋಜನಗಳನ್ನು ಪಡೆಯುತ್ತಿಲ್ಲ. ಕಾರ್ಮಿಕ ಸಂಸ್ಥೆಗಳ ಮಾಹಿತಿಯ ಪ್ರಕಾರ, ಶೇಕಡ 7ರಷ್ಟಿರುವ ಸಂಘಟಿತ ವಲಯದ ಕಾರ್ಮಿಕರ ಪೈಕಿ ಅರ್ಧದಷ್ಟು ಜನರು ಗುತ್ತಿಗೆ ಅಥವಾ ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದಾರೆ, ಹೀಗಾಗಿ ಸರ್ಕಾರಕ್ಕೆ ಅವರ ಹಕ್ಕುಗಳನ್ನು ರಕ್ಷಿಸಲು ಸಾಧ್ಯವಾಗುತ್ತಿಲ್ಲ. ಈ ಸಮಸ್ಯೆಯನ್ನು ನಿಭಾಯಿಸಲು ಎರಡನೇ ಕಾರ್ಮಿಕ ಆಯೋಗವು ಕಾರ್ಮಿಕ ಕಾಯಿದೆಗಳನ್ನು ಕಾರ್ಮಿಕ ಸಂಹಿತೆಗಳಾಗಿ ಪರಿವರ್ತಿಸುವಂತೆ ಸಲಹೆ ಮಾಡಿ 2002ರಲ್ಲಿ ವರದಿ ಸಲ್ಲಿಸಿತ್ತು. ಆದಾಗ್ಯೂ, 2004 ಮತ್ತು 2014ರ ನಡುವೆ ಯಾವುದೇ ಪ್ರಗತಿ ಆಗಿರಲಿಲ್ಲ. ಆದರೆ, 2014ರಲ್ಲಿ ಪ್ರಧಾನಮಂತ್ರಿ ನರೇಂದ್ರಮೋದಿ ಅವರು ದೆಹಲಿಯಲ್ಲಿ ಅಧಿಕಾರ ಹಿಡಿದಾಗ, ಕಾರ್ಮಿಕ ಕಾನೂನುಗಳನ್ನು ನಾಲ್ಕು ಸಂಹಿತೆಗಳಾಗಿ ಪರಿವರ್ತಿಸುವ ನಿಟ್ಟಿನಲ್ಲಿ ಕೆಲವು ಗಂಭೀರ ಕ್ರಮಗಳನ್ನು ಕೈಗೊಳ್ಳಲಾಯಿತು.

# ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ



ಸರ್ಕಾರ ಕೈಗೊಂಡ ಐತಿಹಾಸಿಕ ಕ್ರಮಗಳು ಇಡೀ ಅಸಂಘಟಿತ ವಲಯವನ್ನು ಸಾಮಾಜಿಕ ಭದ್ರತಾ ವ್ಯಾಪ್ತಿಗೆ ತರುತ್ತಿವೆ. ಸಾಮಾಜಿಕ ಭದ್ರತಾ ಸಂಹಿತೆಯ ಬೇಡಿಕೆ 2011–12ರಲ್ಲಿ ಎದ್ದಿತ್ತು. ಆದಾಗ್ಯೂ, ಜಿಎಸ್‌ಟಿ ಅನುಷ್ಠಾನದ ನಂತರ, ಸರಣಿ ಬುದ್ಧಿಮತ್ತೆಯ ಸಮಾವೇಶಗಳ ಪರಿಣಾಮವಾಗಿ ಅದರ ಅನುಷ್ಠಾನ ತ್ವರಿತಗೊಂಡಿತು. ಇದಕ್ಕೂ ಮುನ್ನ ಇಂಥ ಸುಧಾರಣೆಗಳು ಸಾಧ್ಯವೇ ಇಲ್ಲ ಎಂದು ಭಾವಿಸಲಾಗಿತ್ತು. ಜಿಎಸ್‌ಟಿ ಈ ಹಾದಿ ಸುಗಮಗೊಳಿಸಿ ರಾಜ್ಯ ಸರ್ಕಾರಗಳಿಂದ ಅನುಮೋದನೆ ಪಡೆಯಲು ಸಾಧ್ಯವಾಗಿಸಿತು. ಸರ್ಕಾರ ಸರತಿಯಲ್ಲಿರುವ ಕೊನೆಯ ವ್ಯಕ್ತಿಯನ್ನೂ ತಲುಪಿತು. ಈ ಸಾಮಾಜಿಕ ಭದ್ರತೆ ಸಂಹಿತೆ, ಸಾಮಾನ್ಯ ವ್ಯಕ್ತಿಯ ಭಾಷೆಯಲ್ಲಿ ಹೇಳುವುದಾದರೆ ಈಗ ದೊಡ್ಡ ಕೈಗಾರಿಕೋದ್ಯಮಿಗಳಿಂದ ಹಿಡಿದು ಚಿಂದಿ ಆಯುವವರೆಗೆ, ಪ್ರತಿಯೊಬ್ಬರಿಗೂ ಪಿಂಚಣಿ ಮತ್ತು ಆರೋಗ್ಯದ ಒಂದೇ ರೀತಿಯ ಸಾಮಾಜಿಕ ಭದ್ರತೆಯನ್ನು ಪಡೆಯುತ್ತಾರೆ ಎಂದು ಖಚಿತಪಡಿಸುತ್ತದೆ. ಕಡುಬಡವರು ಕೂಡ ಈ ಮೂಲಭೂತ ಹಕ್ಕುಗಳಿಂದ ವಂಚಿತರಾಗುವುದಿಲ್ಲ. ಪ್ರಸ್ತುತ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿವಿಧ ಯೋಜನೆಗಳಿದ್ದು, ಈ ಎಲ್ಲ ಯೋಜನೆಗಳನ್ನೂ ವಿಲೀನಗೊಳಿಸುವ ಯೋಜನೆ ಇದೆ. ಈ ಸಂಹಿತೆಯಲ್ಲಿ ಮೂರು ಪ್ರವರ್ಗದ ನಾಗರಿಕರಿರುತ್ತಾರೆ: ಮೊದಲನೆಯದು – ತಮ್ಮ ಕಾಳಜಿಯನ್ನು ತಾವೇ ವಹಿಸುವ ಮೇಲ್ವರ್ಗ, ಎರಡನೆಯವರು– ಈ ಸೌಲಭ್ಯವನ್ನು ಮಾಲೀಕರಿಂದ ಪಡೆದುಕೊಳ್ಳುವ ಕಾರ್ಮಿಕರು, ಮೂರನೆಯವರು – ಆರೋಗ್ಯ ಮತ್ತು ಪಿಂಚಣಿಯ ಅನುಕೂಲಕ್ಕೂ ಪಾವತಿಸಲು ಸಾಧ್ಯವಾಗದ ಬಡ ವರ್ಗ. ಸಾಮಾಜಿಕ ಆರ್ಥಿಕ ಗಣತಿಯ ಪ್ರಕಾರ, ಮೂರನೇ ಪ್ರವರ್ಗ ಶೇ.23ರಷ್ಟಿದ್ದು, ಸರ್ಕಾರ ಇವರ ವೆಚ್ಚವನ್ನು ಭರಿಸುತ್ತದೆ. ಪಿಎಫ್ ಮತ್ತು ಇಎಸ್‌ಐನ ಸಂಚಿತ ವೆಚ್ಚವು ಈ ವೆಚ್ಚದಲ್ಲಿ ಸೇರಿರುತ್ತದೆ. ಪಿಎಫ್ ಹಿಂತೆಗೆದುಕೊಳ್ಳುವ ಪ್ರಕ್ರಿಯೆಯು ಬದಲಾಗದೆ ಹಾಗೇ ಇರುತ್ತದೆ. ಒಮ್ಮೆ ಸ್ವರೂಪ ಸಿದ್ಧವಾದ ನಂತರ, ರಾಷ್ಟ್ರೀಯ ಮಂಡಳಿಯನ್ನು ರಚಿಸಲಾಗುತ್ತದೆ.

**ರಾಷ್ಟ್ರ ನಿರ್ಮಾಣದಲ್ಲಿ ಕಾರ್ಮಿಕರು, ರೈತರು ಮತ್ತು ನೌಕರರು ಮಹತ್ವದ ಪಾತ್ರ ವಹಿಸುತ್ತಾರೆ ಎಂದು ಪ್ರಧಾನಿಯವರು ಭಾವಿಸುತ್ತಾರೆ. ಕಾರ್ಮಿಕರು ಅಸಂತೋಷದಿಂದ ಇದ್ದರೆ, ದೇಶ ಸಂತೃಪ್ತಿಯಿಂದಿರಲು ಸಾಧ್ಯವಿಲ್ಲ.**

ಹಿಂದಿನ ಉದ್ದೇಶವೆಂದರೆ ಇದನ್ನು ನ್ಯಾಯಾಲಯದ ಅನೇಕ ಹೋರಾಟಗಳಲ್ಲಿ ಗಮನಿಸಲಾಯಿತು, ದುಬಾರಿ ವಕೀಲರನ್ನು ನೇಮಿಸಿಕೊಳ್ಳಲು ಸಾಧ್ಯವಾಗದ ಕಾರಣ ಕಾರ್ಮಿಕರು ಸಾಕಷ್ಟು ತೊಂದರೆಗಳನ್ನು ಅನುಭವಿಸುವಂತಾಗಿತ್ತು. ಈ ನಾಲ್ಕು ಸಂಹಿತೆಗಳು ಭಾರತವನ್ನು ಹೊಸ ಎತ್ತರಕ್ಕೆ ಕೊಂಡೊಯ್ಯಲು ಮತ್ತು ಕಾರ್ಮಿಕರ ವಿಚಾರದಲ್ಲಿ ಜನರ ಚಿಂತನೆಯಲ್ಲಿ ಅಂತಿಮವಾಗಿ ಕ್ರಾಂತಿಯನ್ನು ತರುವಲ್ಲಿ ಐತಿಹಾಸಿಕ ಹೆಜ್ಜೆಗಳಾಗಿದ್ದವು. ಹೀಗಾಗಿ, ಎಲ್ಲರ ಹಿತಾಸಕ್ತಿಯಿಂದ ಸುಳಿವು ಪಡೆದುಕೊಂಡು, ದೇಶದ ಸುಮಾರು 50 ಕೋಟಿ ಕಾರ್ಮಿಕರಿಗೆ ಸುರಕ್ಷಿತ, ಆರೋಗ್ಯಕರ ಮತ್ತು ಘನತೆಯ ಜೀವನಶೈಲಿಗಾಗಿ ಸರ್ಕಾರ ಕಾರ್ಯನಿರ್ವಹಿಸುತ್ತಿದೆ. ■



# ಉದ್ಯಮಿಗಳಾಗಿ ರೈತರ ಪರಿವರ್ತನೆ

ಸ್ವಾವಲಂಬಿ ಭಾರತಕ್ಕೆ ಕೃಷಿಯನ್ನು ಒಂದು ಉದ್ಯಮವಾಗಿ ಪರಿವರ್ತಿಸಿ, ರೈತರನ್ನು ಮಧ್ಯವರ್ತಿಗಳ ಕಬಂಧ ಬಾಹುಗಳಿಂದ ಮುಕ್ತರನ್ನಾಗಿಸಿ, ಸಮೃದ್ಧಿ ಮತ್ತು ಸ್ವಾವಲಂಬನೆಯ ಹಾದಿಯಲ್ಲಿ ದಾಪುಗಾಲು ಹಾಕುವುದು ಅನಿವಾರ್ಯವಾಗಿದೆ. **2022** ರ ಹೊತ್ತಿಗೆ ರೈತರ ಆದಾಯವನ್ನು ದುಪ್ಪಟ್ಟು ಮಾಡಲು ಅವರು ಬೆಳೆದ ಉತ್ಪನ್ನಗಳಿಗೆ ಒಂದೂವರೆ ಪಟ್ಟು ದರದ ಹೆಚ್ಚಿನ ಕನಿಷ್ಠ ಬೆಂಬಲ ಬೆಲೆ ಮತ್ತು **10** ಕೋಟಿ ರೈತರ ಖಾತೆಗಳಿಗೆ ನೇರವಾಗಿ **7** ಲಕ್ಷ ಕೋಟಿ ರೂ. ವರ್ಗಾವಣೆ ಮಾಡುವಂಥ ಕ್ರಮಗಳ ಮೂಲಕ ರೈತರ ಸಂಕಷ್ಟವನ್ನು ತಗ್ಗಿಸಲು ಸರ್ಕಾರ ಬದ್ಧವಾಗಿದೆ. 'ಒಂದು ರಾಷ್ಟ್ರ ಒಂದು ತೆರಿಗೆ', 'ಒಂದು ರಾಷ್ಟ್ರ ಒಂದು ಪಡಿತರ ಚೀಟಿ' ಮತ್ತು ಸರ್ಕಾರಿ ಕೆಲಸಕ್ಕಾಗಿ 'ಒಂದು ರಾಷ್ಟ್ರ ಒಂದು ಪರೀಕ್ಷೆ' ಬಳಿಕ ಸರ್ಕಾರ 'ಕೃಷಿ ವಲಯಕ್ಕೆ ಒಂದು ರಾಷ್ಟ್ರ ಒಂದು ಮಾರುಕಟ್ಟೆ' ಪರಿಚಯಿಸುವ ಮೂಲಕ ಸುಧಾರಣೆಯ ತನ್ನ ಅದಮ್ಯ ಉತ್ಸಾಹವನ್ನು ಪ್ರದರ್ಶಿಸಿದೆ.

**ರೈತರ ಉತ್ಪನ್ನ ಮಾರಾಟ ಮತ್ತು ವಾಣಿಜ್ಯ (ಉತ್ತೇಜನ ಮತ್ತು ಅವಕಾಶ) ಮಸೂದೆ 2020 ಮತ್ತು ರೈತರ (ಸಬಲೀಕರಣ ಮತ್ತು ಸಂರಕ್ಷಣೆ) ದರ ಖಾತ್ರಿಯ ಒಪ್ಪಂದ ಮತ್ತು ಕೃಷಿ ಸೇವೆಗಳ ಮಸೂದೆಗಳು ಕೃಷಿ ಕ್ಷೇತ್ರದಲ್ಲಿ ದೇಶದಲ್ಲಿ ಈವರೆಗಿನ ಅತಿ ದೊಡ್ಡ ಸುಧಾರಣೆಗಳಾಗಿವೆ.**

ಧನಕಾಸಿನ ಪ್ರಯೋಜನವನ್ನು ರೈತರಿಗೆ ಅಥವಾ ಬಡವರಿಗೆ ವಿಸ್ತರಿಸಿದಾಗ, ಆರ್ಥಿಕ ಭವಿಷ್ಯ ನುಡಿಯುವ ತಜ್ಞರು ಇದನ್ನು 'ಸಬ್ಸಿಡಿ' ಎಂದು ಕೀಳಾಗಿ ಕಾಣುತ್ತಾರೆ. ಅದೇ, ಉದ್ಯಮ ಅಥವಾ ವಾಣಿಜ್ಯಕ್ಕೆ ಇದೇ ರೀತಿಯ ಪ್ರಯೋಜನವನ್ನು ನೀಡಿದರೆ, ಅದನ್ನು "ಪ್ರೋತ್ಸಾಹಕ" ಅಥವಾ "ಸಹಾಯಧನ" ಎಂದು ಹೊಗಳುತ್ತಾರೆ. ಭಾಷೆಯಲ್ಲಿನ ಈ ವ್ಯತ್ಯಾಸವು ವರ್ತನೆಯ ವ್ಯತ್ಯಾಸವನ್ನು ಸಹ ಪ್ರತಿಬಿಂಬಿಸುತ್ತದೆ ಅಲ್ಲವೇ? 2016 ಜನವರಿ 30ರಂದು ಮಾಧ್ಯಮ ಮನೆಯೊಂದರ ಕಾರ್ಯಕ್ರಮದಲ್ಲಿ ಮತ್ತು ಮರುದಿನ ರೈತರ ನಿಯೋಗಕ್ಕೆ ಪ್ರಧಾನಿ ಈ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದರು. ಇದು ರೈತರ ಬಗೆಗಿನ ಅವರಿಗಿರುವ ಸಕಾರಾತ್ಮಕ ಕಾಳಜಿಯನ್ನು ಪ್ರತಿಬಿಂಬಿಸುತ್ತದೆ.

ಕೃಷಿ ಸಮುದಾಯಕ್ಕಾಗಿ ಪ್ರಧಾನಿ ನರೇಂದ್ರ ಮೋದಿಯವರ ದೃಷ್ಟಿಕೋನವನ್ನು ಅನುಸರಿಸುವಲ್ಲಿ, ಸುಳ್ಳು ಮತ್ತು ತಪ್ಪು ಮಾಹಿತಿಯ ಕಾರ್ಯಸೂಚಿ–ಪ್ರೇರಿತ ಅಪಪ್ರಚಾರವನ್ನು ಬದಿಗೊತ್ತಿ ಸರ್ಕಾರ ಎರಡು ಮಸೂದೆಗಳಿಗೆ ಸಂಸತ್ತಿನ ಅನುಮೋದನೆ ಪಡೆದುಕೊಂಡಿದೆ. ಈ ಮಸೂದೆಗಳು ಒಂದು ಹೊಡೆತದಲ್ಲಿ ಮಂಡಿ ಮತ್ತು ಮಧ್ಯವರ್ತಿಗಳ ಸಂಬಂಧವನ್ನು ಧ್ವಂಸ ಮಾಡಿದ್ದು, ಮಧ್ಯವರ್ತಿಗಳ ಸಂಕೋಲೆಗಳಿಂದ ರೈತರಿಗೆ ನಿಜವಾದ ಸ್ವಾತಂತ್ರ್ಯವನ್ನು ದೊರಕಿಸಿದೆ.

ಪ್ರಧಾನಿಯವರು 2016ರಲ್ಲಿ ಕೆಂಪು ಕೋಟೆಯ ಮೇಲಿಂದ ಒಂದು ರಾಷ್ಟ್ರ ಒಂದು ಮಾರುಕಟ್ಟೆ ಉಪಕ್ರಮ ಪ್ರಕಟಿಸಿದ ತರುವಾಯ ಅವರು ಅದು ಕೇವಲ ಒಂದು ಘೋಷಣೆಯಾಗಷ್ಟೇ ಉಳಿಯದೆ, ಶೀಘ್ರವೇ ಅದರ ಸಾಕಾರವಾಗುವ ಖಾತ್ರಿಪಡಿಸಿದರು.


ತಮ್ಮ ಭಾಷಣದ ವೇಳೆ, ಪ್ರಧಾನಮಂತ್ರಿಯವರು ಸರ್ದಾರ್ ಪಟೇಲ್ ಅವರು ಏಕೀಕರಣದ ಉಪಕ್ರಮದೊಂದಿಗೆ ಕಂಡಿದ್ದ ಏಕ ಭಾರತ, ಶ್ರೇಷ್ಠ ಭಾರತದ ಕನಸು ನನಸಾಗಿದೆ ಎಂದರು. ಆದರೆ, ಭಾರತ ಇನ್ನೂ ಏಕೀಕೃತ ಮಾರುಕಟ್ಟೆಯಾಗಬೇಕಾಗಿದೆ. ಸರ್ಕಾರ ಈ ನಿಟ್ಟಿನಲ್ಲಿ ಹಂತ ಹಂತವಾಗಿ ಕಾರ್ಯಾರಂಭ ಮಾಡಿದೆ. ಈಗ ಸಂಸತ್ತಿನಲ್ಲಿ ಮಸೂದೆಯನ್ನು ಅಂಗೀಕರಿಸುವುದರೊಂದಿಗೆ 2016ರ ಏಪ್ರಿಲ್ 14ಕ್ಕೂ ಮೊದಲೇ ಆರಂಭಿಸಲಾದ ಇ–ನಾಮ್ ವೇದಿಕೆ ಮೂಲಕ, ಕೃಷಿ ಕ್ಷೇತ್ರವನ್ನು ಉದ್ಯಮದ ಮಾರ್ಗದಲ್ಲಿ ಅಭಿವೃದ್ಧಿಪಡಿಸುವುದಲ್ಲದೆ ರೈತರು ಕೂಡ ನೈಜ ಮಾಲೀಕರಾಗಿ ತಮ್ಮ ಉತ್ಪನ್ನವನ್ನು ದೇಶದ ಯಾವುದೇ ಭಾಗದಲ್ಲಿ ಮಾರಾಟ ಮಾಡಲು ಮುಕ್ತರನ್ನಾಗಿಸಿ ತನ್ನ ನಿಲುವನ್ನು ಸ್ಪಷ್ಟಪಡಿಸಿದೆ. ಈವರೆಗೆ ರೈತರಿಗೆ ಈ ಸ್ವಾತಂತ್ರ್ಯ ಇರಲಿಲ್ಲ "ಒಂದು ಮಂಡಿ, ಒಂದು ಪರವಾನಗಿ" ಆಡಳಿತ ಅವರಿಗೆ ತಮ್ಮ ಉತ್ಪನ್ನಗಳನ್ನು ನಿರ್ದಿಷ್ಟ ಕೃಷಿ ಮಾರುಕಟ್ಟೆಯಲ್ಲಿ ಮಾರಾಟ ಮಾಡುವಂತೆ ಒತ್ತಾಯಿಸುತ್ತಿತ್ತು, ಇದರ ದುರ್ಲಾಭವನ್ನು ಮಧ್ಯವರ್ತಿಗಳು ಪಡೆಯುತ್ತಿದ್ದರು ಕಾರಣ, ಮಧ್ಯವರ್ತಿ ನ್ಯಾಯಯುತವಲ್ಲದ ದರಕ್ಕೆ ಕೇಳಿದರೂ, ಮಾರಾಟ ಮಾಡದೆ ತನ್ನ ಗ್ರಾಮಕ್ಕೆ ಸರಕನ್ನು ಮರಳಿ ತೆಗೆದುಕೊಂಡು ಹೋಗಲು ರೈತರು ಶಕ್ತನಾಗಿರಲಿಲ್ಲ.

**ಕನಿಷ್ಠ ಬೆಂಬಲ ಬೆಲೆ: ಉತ್ಪಾದನಾ ವೆಚ್ಚದ ಒಂದೂವರೆ ಪಟ್ಟು**

ಈ ಶಾಸನಗಳು ಜಾರಿಗೆ ಬಂದ ತರುವಾಯ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಯನ್ನು ರದ್ದುಪಡಿಸಲಾಗುತ್ತದೆ ಎಂಬ ಗೊಂದಲ ಸೃಷ್ಟಿಸಲಾಗಿದೆ. ನಿಜವೇನೆಂದರೆ ಸರ್ಕಾರ ರೈತರ ಆದಾಯವನ್ನು ದುಪ್ಪಟ್ಟು ಮಾಡುವ ನಿಟ್ಟಿನಲ್ಲಿ ನಿರಂತರವಾಗಿ ಕನಿಷ್ಠ ಬೆಂಬಲ ಬೆಲೆಯನ್ನು ಹೆಚ್ಚಿಸುತ್ತಿದ್ದು, ಈಗ ಅದು ರೈತರು ಮಾಡುವ ವೆಚ್ಚದ ಒಂದೂವರೆ ಪಟ್ಟು ಆಗಿದೆ. ಸರ್ಕಾರ 2009 ಮತ್ತು 2014ರ ನಡುವೆ 2.88 ಲಕ್ಷ ಕೋಟಿ ರೂ. ನೀಡಿ ಖರೀದಿಸಲಾಗಿದ್ದ 1,670 ಲಕ್ಷ ಮೆಟ್ರಿಕ್ ಟನ್‌ಗೆ ಪ್ರತಿಯಾಗಿ 2014–2019ರ ನಡುವೆ 1,870 ಲಕ್ಷ ಮೆಟ್ರಿಕ್ ಟನ್ ಭತ್ತವನ್ನು ಖರೀದಿಸಿದ್ದು, 4.34 ಲಕ್ಷ ಕೋಟಿ ರೂಪಾಯಿ ಪಾವತಿಸಿದೆ. ಹಾಲಿ ಸರ್ಕಾರ ಎಂಎಸ್‌ಪಿ ನಿರ್ಧರಿಸುವ ಎಂ.ಎಸ್. ಸ್ವಾಮಿನಾಥನ್ ಆಯೋಗದ ವರದಿಯನ್ನು ಜಾರಿ ಮಾಡಿದೆ.


**ರೈತರು ಜಮೀನಿನ ಒಡೆತನ ಕಳೆದುಕೊಳ್ಳುವುದಿಲ್ಲ**

ಮತ್ತೊಂದು ಹಬ್ಬಿಸಲಾಗಿರುವ ವದಂತಿ ಎಂದರೆ, ದೊಡ್ಡ ಸಾಂಸ್ಥಿಕ ಸಂಸ್ಥೆಗಳು ರೈತರ ಜಮೀನು ಕಬಳಿಸುತ್ತಾರೆ ಎಂಬುದು. ಆದರೆ, ರೈತರೊಂದಿಗೆ ಸಾಂಸ್ಥಿಕ ಸಂಪರ್ಕಕ್ಕೆ ಮಸೂದೆ ಅವಕಾಶ ನೀಡಿದರೂ, ಭೂಮಿಯ ಒಡೆತನದ ಬಗ್ಗೆ ಯಾವುದೇ ನಿಬಂಧನೆಗಳನ್ನು ಅದು ಒಳಗೊಂಡಿರುವುದಿಲ್ಲ. ವಾಸ್ತವವಾಗಿ, ಮಸೂದೆಗಳು ತಮ್ಮ ಜಮೀನುಗಳನ್ನು ಉತ್ತಮಗೊಳಿಸಲು ಹೂಡಿಕೆ ಮಾಡಲು ಹಣವಿಲ್ಲದ ಶೇಕಡಾ 86 ರಷ್ಟು ಅತಿ ಸಣ್ಣ




ರೈತರಿಗೆ ಇವು ಪ್ರಯೋಜನವನ್ನು ನೀಡುತ್ತವೆ. ಸರ್ಕಾರ 7 ಸಾವಿರ ಕೋಟಿ ರೂ. ಹೂಡಿಕೆಯೊಂದಿಗೆ 10 ಸಾವಿರ ರೈತರ ಉತ್ಪನ್ನ ಸಂಘಟನೆ (ಎಫ್‌ಪಿಒ)ಗಳ ಬಲವರ್ಧನೆ ಮಾಡುತ್ತಿದೆ. ಸಾಂಸ್ಥಿಕ ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲು ಗುಂಪುಗಳನ್ನು ರಚಿಸಲು ಈ ಎಫ್‌ಪಿಒಗಳು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಸಹಾಯ ಮಾಡುತ್ತವೆ. ರೈತರಿಂದ ದುರ್ಲಾಭವನ್ನು ಯಾರೂ ಪಡೆದುಕೊಳ್ಳುತ್ತಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಲು, ರೈತರ ಭೂಮಿಯ ಮಾರಾಟ, ಗುತ್ತಿಗೆ ಅಥವಾ ಅಡಮಾನವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಮತ್ತು ಯಾವುದೇ ಹಣ ವಸೂಲಿಗೆ ಪ್ರತಿಯಾಗಿ ರೈತರ ಭೂಮಿಯನ್ನು ಸಹ ರಕ್ಷಿಸಲಾಗಿದೆ. ಜೊತೆಗೆ ಖಾಸಗಿ ಸಂಸ್ಥೆಗಳು ಒಪ್ಪಂದಕ್ಕೆ ಬದ್ಧರಾಗಿರಬೇಕೇ ಹೊರತು ರೈತರು ಅದಕ್ಕೆ ಬದ್ಧರಾಗಿರುವುದಿಲ್ಲ. ರೈತರು ಯಾವುದೇ ಮುಂಗಡವನ್ನು ಪಡೆಯದಿದ್ದಲ್ಲಿ ಅವರು ಸಹಿ ಹಾಕಿದ್ದರೂ ಯಾವುದೇ ಸಂದರ್ಭದಲ್ಲಿ ದಂಡವಿಲ್ಲದೆ ಕರಾರು ರದ್ದು ಮಾಡಬಹುದಾಗಿದೆ. ಒಂದೊಮ್ಮೆ ರೈತರು ಯಾವುದೇ ಮುಂಗಡ ಅಥವಾ ಹಣ ಪಡೆದುಕೊಂಡಿದ್ದರೂ ಸಹ ರೈತರು ಅಸಲು ಹಣ ಹಿಂತಿರುಗಿಸುವ ಮೂಲಕ ಯಾವಾಗ ಬೇಕಾದರೂ ಕರಾರು ರದ್ದು ಮಾಡಿಕೊಳ್ಳಬಹುದು, ಇದಕ್ಕೆ ಯಾವುದೇ ಬಡ್ಡಿ ನೀಡುವ ಅಗತ್ಯ ಇರುವುದಿಲ್ಲ. ಆದರೆ ಖಾಸಗಿ ಸಂಸ್ಥೆಯವರು ಏಕಪಕ್ಷೀಯವಾಗಿ ಕರಾರು ರದ್ದು ಮಾಡಿಕೊಳ್ಳಲು ಸಾಧ್ಯವಿಲ್ಲ ಮತ್ತು ಅವರು ಕರಾರಿನಲ್ಲಿ ಒಪ್ಪಿಕೊಂಡ ಹಣವನ್ನು ಪಾವತಿ ಮಾಡಬೇಕಾಗುತ್ತದೆ. ಹೀಗಾಗಿ ರೈತರನ್ನು ಸಂಭವನೀಯ ಸಮಸ್ಯೆಗಳಿಂದ ರಕ್ಷಿಸಲಾಗಿದೆ.

> **ಹೊಸ ಕೃಷಿ ಸುಧಾರಣೆಗಳು ಪ್ರತಿಯೊಬ್ಬ ರೈತರಿಗೂ ತಮ್ಮ ಬೆಳೆ, ಹಣ್ಣು ಮತ್ತು ತರಕಾರಿಯನ್ನು ಯಾರಿಗೆ ಬೇಕಾದರೂ, ಎಲ್ಲಿ ಬೇಕಾದರೂ ಮಾರಾಟ ಮಾಡುವ ಸ್ವಾತಂತ್ರ್ಯವನ್ನು ನೀಡುತ್ತದೆ. ಈಗ ಅವರು ತಮ್ಮ ಪ್ರದೇಶದ ಮಂಡಿಯಲ್ಲದೆ ಇನ್ನೂ ಹಲವು ಆಯ್ಕೆಗಳನ್ನು ಪಡೆದಿದ್ದಾರೆ. ಈಗ ಅವರಿಗೆ ಮಂಡಿಯಲ್ಲಿ ಹೆಚ್ಚಿನ ಲಾಭ ದೊರೆತರೆ ಅವರು ಮಂಡಿಗೆ ಹೋಗಿ ತಮ್ಮ ಬೆಳೆಗಳನ್ನು ಮಾರಬಹುದು. ಅವರಿಗೆ ಬೇರೆಡೆ ಹೆಚ್ಚು ಹಣ ದೊರೆಯುವುದಾದರೆ, ಅವರು ಅಲ್ಲಿಗೆ ಹೋಗಿ ಮಾರಾಟ ಮಾಡಬಹುದು. ಈಗ ಅವರು ಯಾವುದೇ ರೀತಿಯ ಬಲವಂತಗಳಿಂದ ಮುಕ್ತರಾಗಿದ್ದಾರೆ.**
>
> **ಪ್ರಧಾನ ಮಂತ್ರಿ ನರೇಂದ್ರ ಮೋದಿ**




ರೈತರನ್ನು ಮತ್ತಷ್ಟು ಸಬಲೀಕರಿಸಲು, ನಿರ್ದಿಷ್ಟ ಗಡುವಿನೊಳಗೆ ಇತ್ಯರ್ಥ ಮಾಡಲು ಸಮರ್ಥವಾದ ವಿವಾದ ಪರಿಹಾರ ವ್ಯವಸ್ಥೆಯನ್ನು ರೂಪಿಸಲಾಗುವುದು. ಇದು ರೈತರು ವಿಳಂಬವಿಲ್ಲದೆ ನ್ಯಾಯ ಪಡೆಯುವುದನ್ನು ಖಾತ್ರಿಪಡಿಸುತ್ತದೆ. ಎಲ್ಲಾ ವಿವಾದಗಳನ್ನು 30 ದಿನಗಳಲ್ಲಿ ಕಡ್ಡಾಯವಾಗಿ ಪರಿಹರಿಸಬೇಕಾಗುತ್ತದೆ. ಈ ಸಂದರ್ಭದಲ್ಲಿ, ಒಪ್ಪಂದದ ನಂತರ ಉತ್ಪನ್ನಗಳ ಬೆಲೆ ಹೆಚ್ಚಾದರೆ, ಹೆಚ್ಚುವರಿ ಪ್ರಯೋಜನಗಳನ್ನು ರೈತರಿಗೆ ನೀಡಲಾಗುತ್ತದೆ.

**ಮಂಡಿ ತೆರಿಗೆಯಿಂದ ಮುಕ್ತಿ**

ರೈತರು ಶೇ.2ರಿಂದ ಶೇ.8.5 ರವರೆಗೆ ಮಂಡಿ ತೆರಿಗೆ ನೀಡಬೇಕಾಗುತ್ತಿತ್ತು. ಪಂಜಾಬ್‌ನಲ್ಲಿ ಅತಿ ಹೆಚ್ಚು ಮಂಡಿ ತೆರಿಗೆ ಇತ್ತು. ಆದರೆ, ಈಗ ರೈತರಿಗೆ ಮಂಡಿಯ ಹೊರಗೆ ತಮ್ಮ ಉತ್ಪನ್ನ ಮಾರಾಟ ಮಾಡಲು ಅವಕಾಶ ನೀಡಿರುವುದರಿಂದ ಅವರು ತೆರಿಗೆ ಹೊರೆಯಿಂದ ಮುಕ್ತರಾಗಿದ್ದು, ಅವರಿಗೆ ಹೆಚ್ಚುವರಿ ಆದಾಯ ದೊರಕಿದಂತಾಗುತ್ತದೆ.

**ರೈತರಿಗೆ ಕಾನೂನು ಕವಚ**

ಸ್ವಾತಂತ್ರ್ಯಬಂದಾಗಿನಿಂದ ನಿರಂತರವಾಗಿ ಶೋಷಣೆಗೆ ಒಳಗಾಗಿರುವ ರೈತರನ್ನು ಈಗ ಇದೇ ಮೊದಲ ಬಾರಿಗೆ ಸಂಕೋಲೆಗಳಿಂದ ಮುಕ್ತಗೊಳಿಸಲಾಗಿದೆ. ಹೊಸ ಕಾನೂನಿನಡಿ ರೈತರಿಗೆ ತಮ್ಮ ಉತ್ಪನ್ನ ಮಾರಾಟ ಮಾಡಲು ಹಲವಾರು ಅವಕಾಶಗಳಿವೆ. ಸಂಸತ್ತು ಈ ಕಾನೂನುಗಳನ್ನು ಅನುಮೋದಿಸಿರುವುದು ಅಮೃತ ಘಳಿಗೆ ಎಂದು ಪ್ರಧಾನಿಯವರು ಬಣ್ಣಿಸಿದ್ದಾರೆ. "ದಶಕಗಳ ಕಾಲ ಈ ದೇಶವನ್ನಾಳಿದ ಕೆಲವರು ಈ ವಿಚಾರದಲ್ಲಿ ರೈತರನ್ನು ದಾರಿ ತಪ್ಪಿಸುತ್ತಿದ್ದಾರೆ. ಅವರು ಮಧ್ಯವರ್ತಿಗಳಿಗೆ ಮತ್ತು ರೈತರ ಸಂಪಾದನೆಯನ್ನು ಲೂಟಿ ಮಾಡುವವರಿಗೆ ಬೆಂಬಲ ನೀಡುತ್ತಿದ್ದಾರೆ. ರೈತರಿಗೆ ಇನ್ನೆಂದೂ ಕನಿಷ್ಠ ಬೆಂಬಲ ಬೆಲೆ ಸಿಗುವುದಿಲ್ಲ ಎಂದು ಸುಳ್ಳು ಹೇಳಲಾಗುತ್ತಿದೆ. ಸರ್ಕಾರ ರೈತರಿಗೆ ಕನಿಷ್ಠ ಬೆಂಬಲ ಬೆಲೆ ಮೂಲಕ ನ್ಯಾಯಯುತ ಬೆಲೆ ನೀಡಲು ಬದ್ಧವಾಗಿದೆ ಮತ್ತು ಈ ಹಿಂದಿನಂತೆಯೆ ಸರ್ಕಾರದ ದಾಸ್ತಾನು ಮುಂದುವರಿಯಲಿದೆ." ಎಂದು ಪ್ರಧಾನಿ ತಿಳಿಸಿದ್ದಾರೆ. "ಹೊಸ ಅವಕಾಶದ ರೀತ್ಯ ರೈತರು ತಮ್ಮ ಉತ್ಪನ್ನವನ್ನು ತಾವು ಬಯಸಿದ ದರಕ್ಕೆ ದೇಶದ ಯಾವುದೇ ಮಾರುಕಟ್ಟೆಯಲ್ಲಿ ಮಾರಾಟ ಮಾಡಬಹುದಾಗಿದೆ; ಇದೊಂದು ಐತಿಹಾಸಿಕ ಕ್ಷಣ." ಎಂದೂ ತಿಳಿಸಿದ್ದಾರೆ.

ಈ ಕಾನೂನಾತ್ಮಕ ಕವಚಗಳೊಂದಿಗೆ, ದೇಶದ 21ನೇ ಶತಮಾನದ ರೈತರು ಕೃಷಿ ಚಟುವಟಿಕೆ, ಸಾಗಣೆ ಮತ್ತು ತಮ್ಮ ಉತ್ಪನ್ನ ಮಾರಾಟದಲ್ಲಿ ಯಾವುದೇ ರೀತಿಯ ನಿರ್ಬಂಧಗಳಿಲ್ಲದೆ ಮುಕ್ತವಾಗಿರಬೇಕು ಎಂಬುದು ಸರ್ಕಾರದ ಉದ್ದೇಶವಾಗಿದೆ. "ಹಲವು ದಶಕಗಳಿಂದ ಭಾರತೀಯ ರೈತರು ಹಲವು ತೊಡಕುಗಳಿಂದ ಬಂಧಿತರಾಗಿದ್ದರು ಮತ್ತು ಮಧ್ಯವರ್ತಿಗಳ ಬೆದರಿಕೆಗೆ ಒಳಪಟ್ಟಿದ್ದರು. ಸಂಸತ್ತು ಅಂಗೀಕರಿಸಿದ ಮಸೂದೆಗಳು ರೈತರನ್ನು ಇಂತಹ ತೊಂದರೆಗಳಿಂದ ಮುಕ್ತಗೊಳಿಸುತ್ತಿವೆ. ಈ ಮಸೂದೆಗಳು ರೈತರ ಆದಾಯವನ್ನು ದ್ವಿಗುಣಗೊಳಿಸುವ ಮತ್ತು ಖಾತರಿಪಡಿಸುವ ಪ್ರಯತ್ನಗಳಿಗೆ ಪ್ರಚೋದನೆಯನ್ನು ನೀಡುತ್ತವೆ ಮತ್ತು ಅವರಿಗೆ ಹೆಚ್ಚಿನ ಸಮೃದ್ಧಿ ತರಲಿವೆ."ಎಂದು ಪ್ರಧಾನಮಂತ್ರಿಯವರು ಹೇಳಿದ್ದಾರೆ.

ಕಿಸಾನ್ ಸಮ್ಮಾನ್ ನಿಧಿ ನೀಡುವ ಮೂಲಕ ರೈತರ ಬದುಕು ಬದಲಾಯಿಸುವ ಅತಿ ದೊಡ್ಡ ಉಪಕ್ರಮ ಕೈಗೊಳ್ಳಲಾಗಿದೆ. ಈ ಯೋಜನೆಯಡಿ ರೈತರ ಖಾತೆಗೆ ವಾರ್ಷಿಕ 6 ಸಾವಿರ ರೂ.ಗಳನ್ನು ಮೂರು ಸಮಾನ ಕಂತುಗಳಲ್ಲಿ ವರ್ಗಾವಣೆ ಮಾಡಲಾಗುತ್ತದೆ, ಹೀಗಾಗಿ ಅವರು ಸಾಲ ಪಡೆಯುವ ಅಗತ್ಯ ಇರುವುದಿಲ್ಲ. 2008ರಲ್ಲಿ ಅಂದಿನ ಸರ್ಕಾರ ರೈತರ 72 ಸಾವಿರ ಕೋಟಿ ರೂ. ಸಾಲವನ್ನು ಮನ್ನಾ ಮಾಡಿದಾಗ, ನಿಜವಾಗಿಯೂ ಮನ್ನಾ ಆದ ಮೊತ್ತ 52,000 ಕೋಟಿ ರೂ. ಮಾತ್ರ, ಆದರೆ ಪ್ರಸಕ್ತ ಸರ್ಕಾರ

# 'ಎಂಎಸ್‌ಪಿ ಮುಂದುವರಿಯುತ್ತದೆ; ನಿಮ್ಮ ಉತ್ಪನ್ನಗಳನ್ನು

**ಖಚಿತವಾಗಿ, ಎಂಎಸ್.ಪಿ ಮುಂದುವರಿಯುತ್ತದೆ:** ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ಥೋಮರ್ ಅವರ ಪ್ರಕಾರ, ಕನಿಷ್ಠ ಬೆಂಬಲ ಬೆಲೆಯಲ್ಲಿ ಆಹಾರ ಧಾನ್ಯಗಳ ಖರೀದಿ ಮುಂದುವರಿಯುತ್ತದೆ. ಈ ಕುರಿತಂತೆ ಪ್ರಧಾನಿ ನರೇಂದ್ರ ಮೋದಿಯವರು ಭರವಸೆ ನೀಡಿದ್ದಾರೆ ಎಂದು ಹೇಳಿದರು. ಎಂಎಸ್.ಪಿ ದರಗಳನ್ನು 2014 ಮತ್ತು 2020 ರ ನಡುವೆ ಗಮನಾರ್ಹವಾಗಿ ಹೆಚ್ಚಿಸಲಾಗಿದೆ. ಮುಂಬರುವ ಹಿಂಗಾರು ಹಂಗಾಮಿನ ಪರಿಷ್ಕೃತ ಎಂಎಸ್.ಪಿ.ಗಳನ್ನು ಘೋಷಿಸಲಾಗಿದೆ. ಈ ಮಸೂದೆಗಳಲ್ಲಿ ರೈತರ ಸಂಪೂರ್ಣ ರಕ್ಷಣೆ ಖಾತರಿಪಡಿಸಲಾಗಿದೆ ಎಂದು ಕೇಂದ್ರ ಕೃಷಿ ಸಚಿವರು ತಿಳಿಸಿದ್ದಾರೆ.



## ರೈತರ ಉತ್ಪನ್ನ ಮಾರಾಟ ಮತ್ತು ವಾಣಿಜ್ಯ (ಉತ್ತೇಜನ ಮತ್ತು ಸೌಲಭ್ಯ) ಮಸೂದೆ 2020

### ಮುಖ್ಯ ನಿಬಂಧನೆಗಳು

- ರೈತರು ಮತ್ತು ವ್ಯಾಪಾರಸ್ಥರು ಉತ್ಪನ್ನಗಳ ಮಾರಾಟ ಮತ್ತು ಖರೀದಿಯ ಸ್ವಾತಂತ್ರ್ಯ ಅನುಭವಿಸುವಂತಹ ವಾತಾವರಣವನ್ನು ಇದು ಸೃಷ್ಟಿಸುತ್ತದೆ.
- ಇದು ರಾಜ್ಯಗಳ ಅಧಿಸೂಚಿತ ಮಾರುಕಟ್ಟೆಯ ಆವರಣದ ಹೊರಗೆ ತಡೆರಹಿತವಾಗಿ, ಅಂತರ ರಾಜ್ಯ ಮತ್ತು ರಾಜ್ಯದೊಳಗೆ ವಾಣಿಜ್ಯ ಮತ್ತು ವ್ಯಾಪಾರ ಉತ್ತೇಜಿಸುತ್ತದೆ.
- ರೈತರಿಗೆ ಅವರ ಉತ್ಪನ್ನ ಮಾರಾಟ ಮಾಡಲು ಯಾವುದೇ ಕರ ಅಥವಾ ತೆರಿಗೆ ವಿಧಿಸಲಾಗುವುದಿಲ್ಲ ಮತ್ತು ಅವರು ಸಾರಿಗೆ ವೆಚ್ಚವನ್ನೂ ಭರಿಸಬೇಕಾಗಿಲ್ಲ.
- ಇದು ವಿದ್ಯುನ್ಮಾನ ವ್ಯಾಪಾರವನ್ನು ಖಚಿತಪಡಿಸಿಕೊಳ್ಳಲು ವಹಿವಾಟು ವೇದಿಕೆಯಲ್ಲಿ ಎಲೆಕ್ಟ್ರಾನಿಕ್ ವ್ಯಾಪಾರವನ್ನು ಪ್ರಸ್ತಾಪಿಸುತ್ತದೆ.
- ಮಂಡಿಗಳ ಜೊತೆಗೆ ರೈತರು ತಮ್ಮ ಜಮೀನಿನಲ್ಲಿ, ಶೈತ್ಯಾಗಾರಗಳಲ್ಲಿ ಮತ್ತು ಗೋದಾಮುಗಳಲ್ಲಿ ಸಂಸ್ಕರಣಾ ಘಟಕ ಇತ್ಯಾದಿಗಳಲ್ಲಿ ಮಾರಾಟ ಮಾಡಲು ಮುಕ್ತರಾಗಿರುತ್ತಾರೆ.
- ರೈತರು ನೇರವಾಗಿ ಮಾರುಕಟ್ಟೆಯಲ್ಲಿ ತೊಡಗಬಹುದಾಗಿದ್ದು, ಇದರಿಂದ ಮಧ್ಯವರ್ತಿಗಳ ನಿರ್ಮೂಲನೆ ಆಗುತ್ತದೆ, ಇದರ ಫಲವಾಗಿ ರೈತರಿಗೆ ಪೂರ್ಣ ಬೆಲೆ ಸಿಗುತ್ತದೆ.

### ಸಂಶಯಗಳು

- ಕನಿಷ್ಠ ಬೆಂಬಲ ಬೆಲೆಯ ಖರೀದಿ ನಿಂತುಹೋಗುತ್ತದೆ.
- ಮಂಡಿಯ ಹೊರಗೆ ಕೃಷಿ ಉತ್ಪನ್ನ ಮಾರಾಟ ಮಾಡಿದರೆ, ಇದೆಲ್ಲದರ ಕಾರ್ಯಾಚರಣೆ ನಿಲ್ಲುತ್ತದೆ.
- ಇ–ನಾಮ್ ನಂತ ಸರ್ಕಾರದ ವಿದ್ಯುನ್ಮಾನ ವ್ಯಾಪಾರ ಪೋರ್ಟಲ್ ಭವಿಷ್ಯ ಏನು

### ಸ್ಪಷ್ಟೀಕರಣ

- ಕನಿಷ್ಠ ಬೆಂಬಲ ಬೆಲೆಯ ಖರೀದಿ ಮುಂದುವರಿಯುತ್ತದೆ; ರೈತರು ತಮ್ಮ ಉತ್ಪನ್ನವನ್ನು ಎಂ.ಎಸ್.ಪಿ. ದರದಲ್ಲಿ ಮಾರಾಟ ಮಾಡಬಹುದು; ಹಿಂಗಾರು ಹಂಗಾಮಿಗೆ ಈಗಾಗಲೇ ಎಂ.ಎಸ್.ಪಿ. ದರ ಘೋಷಿಸಲಾಗಿದೆ.
- ಮಂಡಿಗಳು ಕಾರ್ಯಾಚರಣೆ ನಿಲ್ಲಿಸುವುದಿಲ್ಲ, ಹಿಂದಿನಂತೆಯೇ ವ್ಯಾಪಾರ ಮುಂದುವರಿಯಲಿದೆ. ಹೊಸ ವ್ಯವಸ್ಥೆಯಡಿ, ರೈತರು ಮಂಡಿಗಳ ಜೊತೆಗೆ ಇತರ ಕಡೆಗಳಲ್ಲೂ ತಮ್ಮ ಉತ್ಪನ್ನ ಮಾರಾಟ ಮಾಡಬಹುದು.
- ಮಂಡಿಗಳಲ್ಲಿ ಇ–ನಾಮ್ ಮಾರಾಟ ವ್ಯವಸ್ಥೆ ಕೂಡ ಮುಂದುವರಿಯಲಿದೆ
- ವಿದ್ಯುನ್ಮಾನ ವೇದಿಕೆಯಲ್ಲಿ ಕೃಷಿ ಉತ್ಪನ್ನ ವ್ಯಾಪಾರ ಹೆಚ್ಚಳವಾಗಲಿದೆ. ಇದು ಹೆಚ್ಚಿನ ಪಾರದರ್ಶಕತೆಗೆ ಕಾರಣವಾಗಲಿದ್ದು, ಸಮಯ ಉಳಿಸಲಿದೆ.

# ಉತ್ತಮ ಬೆಲೆ ದೊರಕುವ ಕಡೆ ಮಾರಾಟ ಮಾಡಿ'

## ರೈತರ (ಸಬಲೀಕರಣ ಮತ್ತು ಸಂರಕ್ಷಣೆ) ದರ ಖಾತ್ರಿ ಒಪ್ಪಂದ ಮತ್ತು ಕೃಷಿ ಸೇವೆಗಳ ಮಸೂದೆ 2020



### ಪ್ರಮುಖ ನಿಬಂಧನೆಗಳು

- ಇದು ರೈತರಿಗೆ ನೇರವಾಗಿ ಆಹಾರ ಸಂಸ್ಕರಣ ಸಂಸ್ಥೆಗಳು, ಸಗಟು ವ್ಯಾಪಾರಿಗಳು, ದೊಡ್ಡ ಚಿಲ್ಲರೆ ವ್ಯಾಪಾರಿಗಳು, ರಫ್ತುದಾರರು ಇತ್ಯಾದಿಗಳೊಂದಿಗೆ ನೇರವಾಗಿ ವ್ಯವಹರಿಸಲು ಅವಕಾಶ ಕಲ್ಪಿಸಲಿದ್ದು, ಸಮಾನ ಅವಕಾಶ ಒದಗಿಸಲಿದೆ. ರೈತರಿಗೆ ಬಿತ್ತನೆಗೆ ಮೊದಲೇ ದರದ ಖಾತ್ರಿ ದೊರೆಯಲಿದೆ. ಹೆಚ್ಚಿನ ಮಾರುಕಟ್ಟೆ ದರದ ಸಂದರ್ಭದಲ್ಲಿ, ರೈತರು ಕನಿಷ್ಠ ದರಕ್ಕಿಂತ ಹೆಚ್ಚಿನ ದರಕ್ಕೆ ಅರ್ಹರಾಗಿರುತ್ತಾರೆ.
- ಇದು ಮಾರುಕಟ್ಟೆಯ ಅನಿರೀಕ್ಷಿತ ಅಪಾಯವನ್ನು ರೈತನಿಂದ ಪ್ರಾಯೋಜಕರಿಗೆ ವರ್ಗಾಯಿಸುತ್ತದೆ. ಮೊದಲೇ ಬೆಲೆ ನಿರ್ಣಯಿಸುವುದರಿಂದಾಗಿ, ಮಾರುಕಟ್ಟೆ ಬೆಲೆಗಳ ಏರಿಕೆ ಮತ್ತು ಕುಸಿತದಿಂದ ರೈತರನ್ನು ರಕ್ಷಿಸಲಾಗುತ್ತದೆ.
- ಇದು ರೈತರಿಗೆ ಆಧುನಿಕ ತಂತ್ರಜ್ಞಾನ, ಉತ್ತಮ ಬಿತ್ತನೆ ಬೀಜ ಮತ್ತು ಇತರ ಪರಿಕರ ಒದಗಿಸಲಿದೆ.
- ಇದು ಮಾರುಕಟ್ಟೆಯ ವೆಚ್ಚವನ್ನು ತಗ್ಗಿಸಿ ರೈತರ ಆದಾಯವನ್ನು ಹೆಚ್ಚಿಸಲಿದೆ.
- ವಿವಾದ ಇತ್ಯರ್ಥಕ್ಕೆ ಸ್ಪಷ್ಟವಾದ ಕಾಲಮಿತಿಯೊಂದಿಗೆ ಸಮರ್ಥವಾದ ಪರಿಹಾರ ವ್ಯವಸ್ಥೆಯನ್ನು ಒದಗಿಸುತ್ತದೆ.
- ಕೃಷಿ ವಲಯದಲ್ಲಿ ಸಂಶೋಧನೆ ಮತ್ತು ಆಧುನಿಕ ತಂತ್ರಜ್ಞಾನಕ್ಕೆ ಉತ್ತೇಜನ ನೀಡುತ್ತದೆ.

### ಸಂಶಯಗಳು

- ಗುತ್ತಿಗೆ ಕೃಷಿಯಡಿಯಲ್ಲಿ, ರೈತರು ಒತ್ತಡಕ್ಕೆ ಒಳಗಾಗುತ್ತಾರೆ ಮತ್ತು ಬೆಲೆಗಳನ್ನು ನಿರ್ಧರಿಸಲು ಸಾಧ್ಯವಾಗುವುದಿಲ್ಲ
- ಸಣ್ಣ ರೈತರು ಹೇಗೆ ಗುತ್ತಿಗೆ ಕೃಷಿಗೆ ಪ್ರವೇಶ ಪಡೆಯುತ್ತಾರೆ; ಪಾಯೋಜಕರು ಅವರಿಂದ ದೂರ ಸರಿಯುತ್ತಾರೆಯೇ
- ಹೊಸ ವ್ಯವಸ್ಥೆ ರೈತರಿಗೆ ಸಮಸ್ಯೆ ತಂದೊಡ್ಡುತ್ತದೆ
- ವಿವಾದದ ಸಂದರ್ಭದಲ್ಲಿ, ದೊಡ್ಡ ಕಂಪನಿಗಳಿಗೆ ಸದಾ ಅನುಕೂಲತೆ ಇರುತ್ತದೆ



### ಸ್ಪಷ್ಟೀಕರಣ

- ಗುತ್ತಿಗೆ ಕೃಷಿಯಲ್ಲಿ ರೈತರಿಗೆ ತಮ್ಮ ಉತ್ಪನ್ನಕ್ಕೆ ಮಾರಾಟ ದರ ನಿಗದಿ ಮಾಡುವ ಅಧಿಕಾರ ಇರುತ್ತದೆ. ಅವರು ಗರಿಷ್ಠ 3 ದಿನಗಳ ಒಳಗಾಗಿ ಹಣ ಪಡೆದುಕೊಳ್ಳುತ್ತಾರೆ.
- 10,000 ರೈತ ಉತ್ಪಾದಕ ಸಂಸ್ಥೆಗಳನ್ನು ದೇಶದಾದ್ಯಂತ ಸ್ಥಾಪಿಸಲಾಗುತ್ತದೆ. ಈ ಎಫ್.ಪಿ.ಓ.ಗಳು ಸಣ್ಣ ರೈತರುಗಳನ್ನು ಒಗ್ಗೂಡಿಸುತ್ತವೆ, ಮತ್ತು ಕೃಷಿ ಉತ್ಪನ್ನಗಳಿಗೆ ಲಾಭದಾಯಕ ದರವನ್ನು ಖಾತ್ರಿ ಪಡಿಸುತ್ತದೆ.
- ಕರಾರಿಗೆ ಅಂಕಿತ ಹಾಕಿದ ತರುವಾಯ, ಗ್ರಾಹಕರು ಜಮೀನಿನಿಂದ ನೇರವಾಗಿ ಉತ್ಪನ್ನವನ್ನು ಪಡೆಯಬಹುದು.
- ಸ್ಥಳೀಯ ವಿವಾದ ಇತ್ಯರ್ಥ ವ್ಯವಸ್ಥೆ ರೂಪಿಸಲು ಅವಕಾಶವಿರುತ್ತದೆ.

# ರೈತರ ಸಬಲೀಕರಣ

**ರೈತರ ಹಿತವನ್ನು ಕಾಯಲು ಸರ್ಕಾರ ಹಂತ ಹಂತವಾಗಿ ಕೈಗೊಂಡಿರುವ ಕ್ರಮಗಳಿಂದ ಸರ್ಕಾರಕ್ಕೆ ಕೃಷಿಯ ಮೇಲಿರುವ ಕಾಳಜಿಯನ್ನು ಅರ್ಥಮಾಡಿಕೊಳ್ಳಬಹುದು. ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು, ರೈತರನ್ನು ರಕ್ಷಿಸಲು ಮತ್ತು ಅವರ ಆದಾಯ ಹೆಚ್ಚಿಸಲು ಹಾಗೂ ಅವರ ಸರ್ವಾಂಗೀಣ ಕಲ್ಯಾಣಕ್ಕಾಗಿ ಹಲವಾರು ಕ್ರಮಗಳನ್ನು ಕೈಗೊಳ್ಳಲಾಗಿದೆ. ರಸಗೊಬ್ಬರಗಳ ಸುಗಮ ಲಭ್ಯತೆ, ನೀರಾವರಿ ಸೌಲಭ್ಯದಲ್ಲಿನ ಸುಧಾರಣೆ, ಸುಲಭ ಸಾಲ ಮತ್ತು ಬೆಳೆ ಸಾಲ ಯೋಜನೆ, ವೈಜ್ಞಾನಿಕ ಬೆಂಬಲದ ಲಭ್ಯತೆ, ಅವರ ಬೆಳೆಗೆ ಉತ್ತಮ ದರ ಮೊದಲಾದ ಸರ್ಕಾರ ಕೈಗೊಂಡಿರುವ ಕ್ರಮಗಳು ರೈತರಿಗೆ ಹಲವು ಮಾರ್ಗಗಳಲ್ಲಿ ಪ್ರಯೋಜನವಾಗಿವೆ.**

## ಬಿತ್ತನೆಗೆ ಮುನ್ನ

**ಮಣ್ಣಿನ ಆರೋಗ್ಯ ಕಾರ್ಡ್ :** ರೈತರಿಗೆ ಸೂಕ್ತ ಆಯ್ಕೆಗೆ ಅವಕಾಶ ಕಲ್ಪಿಸುತ್ತದೆ. ಸರ್ಕಾರ 22.39 ಕೋಟಿ ಮಣ್ಣಿನ ಆರೋಗ್ಯ ಕಾರ್ಡ್ ವಿತರಿಸಿದೆ.

**ರಸಗೊಬ್ಬರ:** ರಸಗೊಬ್ಬರಕ್ಕಾಗಿ ಉದ್ದದ ಸರತಿ ಸಾಲಿನಲ್ಲಿ ನಿಲ್ಲುತ್ತಿದ್ದುದು ಈಗ ಇತಿಹಾಸ. ಸರ್ಕಾರ ಸುಗಮವಾಗಿ ರಸಗೊಬ್ಬರ ದೊರಕುವಂತೆ ಮಾಡಿದೆ. ರಸಗೊಬ್ಬರಗಳ ದರ ಗಣನೀಯವಾಗಿ ಇಳಿಕೆಯಾಗಿದೆ. ಶೇ. 100ರಷ್ಟು ಬೇವು ಲೇಪಿತ ಯೂರಿಯಾ ದೇಶದಲ್ಲಿ ಲಭ್ಯವಾಗುತ್ತಿದೆ. ಇದು ಯೂರಿಯಾ ಗೊಬ್ಬರ ಬಳಕೆಯನ್ನೂ ತಗ್ಗಿಸಿದೆ.

**ಹಣಕಾಸು :** ಕೃಷಿಗೆ ಹಣದ ಕೊರತೆ ರೈತರನ್ನು ಕಾಡುವ ಮತ್ತೊಂದು ಸಮಸ್ಯೆ. ಆದರೆ ಈಗ ರೈತರು ಅಗ್ಗದ ಬಡ್ಡಿ ದರದ ಸಾಲವನ್ನು ಸುಲಭವಾಗಿ ಪಡೆಯಬಹುದು.

ಒಂದೂವರೆ ವರ್ಷಗಳ ಅವಧಿಯಲ್ಲಿ ರೈತರನ್ನು ಋಣಮುಕ್ತರನ್ನಾಗಿ ಮಾಡಲು 94 ಸಾವಿರ ಕೋಟಿ ರೂಪಾಯಿಗಳನ್ನು ಅವರ ಖಾತೆಗೆ ವರ್ಗಾವಣೆ ಮಾಡಿದೆ. ಈ ಹಣವು ಮುಂದಿನ 10 ವರ್ಷಗಳವರೆಗೆ ರೈತರಿಗೆ ಗೌರವಾನ್ವಿತ ಜೀವನವನ್ನು ನಡೆಸುವ ಸಾಧನವಾಗಿ ಪರಿಣಮಿಸುತ್ತದೆ, ಇದರಲ್ಲಿ 7 ಲಕ್ಷ ಕೋಟಿ ರೂ. ಗಳನ್ನು ನೇರವಾಗಿ ಅವರ ಖಾತೆಗಳಿಗೆ ವರ್ಗಾಯಿಸಲಾಗುತ್ತದೆ.

### ಸ್ವಾವಲಂಬನೆಯ ಪ್ಯಾಕೇಜ್

ಸರ್ಕಾರ ರೈತರ ಆದಾಯವನ್ನು 2022ರ ಹೊತ್ತಿಗೆ ದುಪ್ಪಟ್ಟು ಮಾಡುವ ನಿಟ್ಟಿನಲ್ಲಿ ಅವಿರತ ಕ್ರಮಗಳನ್ನು ಕೈಗೊಂಡಿದೆ. ಇದು ಕೋವಿಡ್–19 ಬಿಕ್ಕಟ್ಟನ್ನು ಕೂಡ ಅವಕಾಶವಾಗಿ ಪರಿವರ್ತಿಸಿದೆ. ಸರ್ಕಾರವು ಕೃಷಿ ಮೂಲಸೌಕರ್ಯಕ್ಕಾಗಿ 1 ಲಕ್ಷ ಕೋಟಿ ರೂ., ಆಹಾರ ಸಂಸ್ಕರಣೆಗಾಗಿ 10,000 ಕೋಟಿ ರೂ, ಮತ್ತು ಜೇನು ಕೃಷಿಗೆ 500 ಕೋಟಿ ರೂ. ಮೀಸಲಿಟ್ಟಿದ್ದು ಕೃಷಿಗೆ ನೀಡಿರುವ ಮಹತ್ವವನ್ನು ತಿಳಿಯಬಹುದಾಗಿದೆ. 2020 ಜುಲೈ, 8 ಮತ್ತು 2020 ಆಗಸ್ಟ್ 9ರಂದು ಕೃಷಿ ಮೂಲಸೌಕರ್ಯ ನಿಧಿಗೆ ಸಂಪುಟ ಸಮ್ಮತಿ ಸೂಚಿಸಿದೆ. ಈ ಯೋಜನೆ ಅಡಿ ಸರ್ಕಾರ 1 ಲಕ್ಷ ಕೋಟಿ ರೂ. ಗಳನ್ನು ಮುಂದಿನ ನಾಲ್ಕು ವರ್ಷಗಳಲ್ಲಿ ವಿನಿಯೋಗಿಸಲು ಯೋಜಿಸಿದೆ. ಈ ಹಂಚಿಕೆಯಲ್ಲಿ 10 ಸಾವಿರ ಕೋಟಿ ರೂ.ಗಳನ್ನು 2020–21ರಲ್ಲಿ ವೆಚ್ಚಮಾಡಲಿದ್ದರೆ, ತಲಾ 30 ಸಾವಿರ ಕೋಟಿ ರೂ.ಗಳನ್ನು ಮುಂದಿನ ಮೂರು ಆರ್ಥಿಕ ವರ್ಷಗಳಲ್ಲಿ ವೆಚ್ಚ ಮಾಡಲಾಗುವುದು. 2 ಕೋಟಿ ರೂ.ವರೆಗಿನ ಸಾಲಕ್ಕೆ ಶೇ.2ರಷ್ಟು ವಿನಾಯಿತಿಯ ಅವಕಾಶ ಮಾಡಲಾಗಿದೆ. ಕೃಷಿ ಮೂಲಸೌಕರ್ಯ ನಿರ್ಮಾಣ, ಪ್ರಾಥಮಿಕ ಕೃಷಿ ಸಾಲ ಸೊಸೈಟಿ (ಪಿಎಸಿಎಸ್), ಎಫ್.ಪಿ.ಓ., ಕೃಷಿ ಉದ್ದಿಮೆಗಳು ಮತ್ತು ರೈತರಿಗೆ ಸುಗ್ಗಿಯ ನಂತರದ ನೆರವು ಒದಗಿಸಲಾಗುತ್ತದೆ.

### ರೈತರ ಆದಾಯ ದುಪ್ಪಟ್ಟು ಮಾಡಲು...

ಬರೇಲಿಯಲ್ಲಿ ಫೆಬ್ರವರಿ 28, 2016 ರಂದು ಪ್ರಧಾನಿಯವರು ಕಿಸಾನ್ ರ್‍ಯಾಲಿ ಉದ್ದೇಶಿಸಿ ಮಾತನಾಡಿದಾಗ, ರೈತರ ಆದಾಯವನ್ನು ದುಪ್ಪಟ್ಟು ಮಾಡುವ ವಿಚಾರ ಪ್ರಸ್ತಾಪಿಸಿದ್ದರು, ಆಗಲೇ ಅವರ ಮನದಲ್ಲಿ ಒಂದು ನಿರ್ದಿಷ್ಟ ಯೋಜನೆ ಇತ್ತು. ಅವರು ಆಡಿದ ದೃಢ ಮಾತುಗಳು "ದೇಶ 2022ರಲ್ಲಿ ತನ್ನ 75ನೇ ಸ್ವಾತಂತ್ರ್ಯೋತ್ಸವ ಆಚರಿಸುವಾಗ ರೈತರ ಆದಾಯ ದುಪ್ಪಟ್ಟಾಗಿರಬೇಕು" ಅಲ್ಲಿಂದೀಚೆಗೆ ಸರ್ಕಾರ ದೇಶದಲ್ಲಿ ಕೃಷಿ ಸ್ಥಾನಮಾನ ಸುಧಾರಿಸುವ ಪ್ರಯತ್ನ ಮಾಡಿದೆ. ಈ ಎರಡು ವಿಧೇಯಕಗಳು ಕೃಷಿ ಮಸೂದೆಗಳು ಈ ನಿಟ್ಟಿನಲ್ಲಿ ದೊಡ್ಡ ಸುಧಾರಣೆಗಳಾಗಿವೆ. ಸರ್ಕಾರದ ಆರು ವರ್ಷಗಳ ಸತತ ಪ್ರಯತ್ನದ ಫಲವಾಗಿ ರೈತರ ಸಮೃದ್ಧಿಗೆ ಕಾರಣವಾಗುತ್ತಿದೆ.

ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿ ಕೈಗೊಂಡ ನಿರ್ಧಾರಗಳು ರೈತರಿಗೆ ಒಳ್ಳೆ ದಿನಗಳು ಬರಲಿವೆ ಎಂಬುದರ ಸಂಕೇತವಾಗಿವೆ. ಮತ್ತೊಮ್ಮೆ ಸರ್ಕಾರ ಎಂ.ಎಸ್.ಪಿ. ಹೆಚ್ಚಳಕ್ಕೆ ತನ್ನ ಸಮ್ಮತಿ ಸೂಚಿಸಿದೆ. ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ಥೋಮರ್ ಅವರ ಪ್ರಕಾರ, ಪ್ರತಿ ಕ್ವಿಂಟಾಲ್ ಗೋಧಿಗೆ ಕನಿಷ್ಠ ಬೆಂಬಲ ಬೆಲೆಯನ್ನು ರೂ.50ರಷ್ಟು, ಕಾಳುಗಳ ದರ ರೂ. 225, ಬಾರ್ಲಿ ದರ ರೂ.75 ಮತ್ತು ಹೆಸರುಕಾಳಿನ ದರವನ್ನು 300 ರೂ. ಹೆಚ್ಚಳ ಮಾಡಲಾಗಿದೆ.

# ಹಂತ ಹಂತವಾಗಿ




## ಬಿತ್ತನೆ ವೇಳೆ

- ನೀರಾವರಿ ಸೌಲಭ್ಯದ ಖಾತ್ರಿ
- ರೈತರಿಗೆ ಬೆಂಬಲ ಮತ್ತು ಮಾರ್ಗದರ್ಶನ
- ದೇಶಾದ್ಯಂತದ ರೈತರಿಗೆ ಎಸ್.ಎಂ.ಎಸ್. ಮತ್ತು ಕರೆ ಮೂಲಕ ವೈಜ್ಞಾನಿಕ ಸಲಹೆ ನೀಡಲಾಗುತ್ತದೆ.

## ಬಿತ್ತನೆ ಬಳಿಕ

**ಪ್ರಧಾನಮಂತ್ರಿಯವರ ಬೆಳೆ ವಿಮೆ ಯೋಜನೆ:** ಈ ಯೋಜನೆ ರೈತರಿಗೆ ಅತ್ಯಂತ ಕಡಿಮೆ ವಿಮಾ ಕಂತಿನಲ್ಲಿ ದೊರೆಯುತ್ತಿದೆ. ಈ ಯೋಜನೆಯಡಿ ಒಂದೊಂದು ಋತುಮಾನದ ಬೆಳೆಗೆ ಒಂದೊಂದು ದರ ಇದೆ, ಉದಾ. ಶೇ.2 ರಷ್ಟು ಮುಂಗಾರು ಬೆಳೆಗೆ, ಶೇ. 1.5 ರಷ್ಟು ಹಿಂಗಾರು ಬೆಳೆಗೆ. ಕಂತಿನ ದರದ ಮೇಲೆ ಯಾವುದೇ ಮಿತಿ ಇಲ್ಲ ಮತ್ತು ವಿಮಾ ಮೊತ್ತದಲ್ಲಿ ಕಡಿತ ಇಲ್ಲ. ಸ್ವಾತಂತ್ರ್ಯ ಬಂದಾಗಿನಿಂದ ಈ ಯೋಜನೆ ಆರಂಭಿಸುವವರೆಗೆ ಕೇವಲ ಶೇ.20ರಷ್ಟು ರೈತರು ಮಾತ್ರ ವಿಮಾ ಪ್ರಯೋಜನ ಪಡೆಯುತ್ತಿದ್ದರು.

**ಇ-ನಾಮ್:** ಇ ನಾಮ್ ಒಂದು ಸಮಗ್ರ ಆನ್‌ಲೈನ್ ಮಾರುಕಟ್ಟೆ-ಯಾಗಿದ್ದು, ಇದು ಮಾರಾಟಗಾರರಿಗೆ ಮತ್ತು ಖರೀದಿದಾರರಿಬ್ಬರಿಗೂ ಮಾಹಿತಿಯ ತಾರತಮ್ಯ ನಿವಾರಿಸುತ್ತದೆ, ಸಕಾಲದಲ್ಲಿ ದತ್ತಾಂಶ ಒದಗಿಸುತ್ತದೆ ಹಾಗೂ ಶೋಧನೆ ಮತ್ತು ಹರಾಜು ಪ್ರಕ್ರಿಯೆಯಲ್ಲಿ ಪಾರದರ್ಶಕತೆಯನ್ನು ಉತ್ತೇಜಿಸುತ್ತದೆ.




### ಸರ್ಕಾರಕ್ಕೆ ರೈತರ ಸಂಘಟನೆಗಳ ಬೆಂಬಲ

ದೇಶದ ವಿವಿಧ ಭಾಗಗಳ ರೈತರು ಈ ಕೃಷಿ ಸುಧಾರಣೆ ಮಸೂದೆಗಳಿಗಾಗಿ ಸರ್ಕಾರಕ್ಕೆ ಧನ್ಯವಾದ ಅರ್ಪಿಸಿದ್ದಾರೆ. ಮಹಾರಾಷ್ಟ್ರದ ಹಿರಿಯ ರೈತ ಮುಖಂಡ ರಾಜು ಶೆಟ್ಟಿ (ಸ್ವಾಭಿಮಾನಿ ಶೇತ್ಕಾರಿ ಸಂಘಟನೆ) ಮತ್ತು ಅನಿಲ್ ಘನಾವತ್ (ಶೇತ್ಕಾರಿ ಸಂಘಟನ್) ಅಲ್ಲದೆ ಕಾನ್ಪುರ, ಮೊರಾದಾಬಾದ್, ಗೋರಖ್‌ಪುರ, ಧುಲೆ, ಕತುವಾ, ಜಬಲ್ಪುರದ ರೈತರು, ಮಂಡಿ ವ್ಯವಸ್ಥೆ ಮತ್ತು ಎಂಎಸ್‌ಪಿ ಹಾಗೇ ಇರುತ್ತದೆ ಎಂದು ಹೇಳಿದ್ದಾರೆ. ಹೊಸ ಮಸೂದೆಗಳಿಗೂ ಈ ವಿಷಯಕ್ಕೂ ಸಂಬಂಧವಿಲ್ಲ. ವಿವಿಧ ವಾರ್ತಾ ಪತ್ರಿಕೆಗಳು ತಮ್ಮ ಸಂಪಾದಕೀಯದಲ್ಲಿ ಹೊಸ ಕೃಷಿ ಮಸೂದೆಗಳು ರೈತರ ಹಿತಕ್ಕೆ ಅನುಗುಣವಾಗಿವೆ ಎಂದು ಬರೆದಿವೆ. ■

## ರೈತರ ಕಲ್ಯಾಣ ಕ್ರಮಗಳು

**ಕಿಸಾನ್ ರೈಲು:** ಸರ್ಕಾರ ಪ್ರಥಮ ಕಿಸಾನ್ ರೈಲನ್ನು ಆರಂಭಿಸಿದ್ದು, ಇದು ರಾಷ್ಟ್ರೀಯ ಶೀಥಲೀಕರಣ ಪೂರೈಕೆ ಸರಪಣಿ ಅಭಿವೃದ್ಧಿಪಡಿಸುವಲ್ಲಿ ಮಹತ್ವದ ಪಾತ್ರ ವಹಿಸಿದೆ. ಇದು ರೈತರು ತಮ್ಮ ಉತ್ಪನ್ನಕ್ಕೆ ಉತ್ತಮ ಬೆಲೆ ಪಡೆಯುವುದನ್ನು ಖಾತ್ರಿಪಡಿಸುತ್ತದೆ.

**ಸಮ್ಮಾನ್ ನಿಧಿ:** ಪ್ರತಿಯೊಬ್ಬ ರೈತನೂ ವಾರ್ಷಿಕ 6 ಸಾವಿರ ರೂ.ಗಳನ್ನು ಡಿಬಿಟಿ ಮೂಲಕ ಪಡೆಯಲಿದ್ದಾರೆ. 94ಸಾವಿರ ಕೋಟಿ ರೂ.ಗಳನ್ನು 10 ಕೋಟಿಗೂ ಹೆಚ್ಚು ರೈತರಿಗೆ ಈವರೆಗೆ ವರ್ಗಾಯಿಸಲಾಗಿದೆ.

**ಉತ್ಪಾದನೆ:** ಹಣ್ಣು ಮತ್ತು ತರಕಾರಿಯ ಉತ್ಪಾದನೆ ಶೇ.52ರಷ್ಟು ಹೆಚ್ಚಳವಾಗಿದೆ. ಮುಂಗಾರು ಬಿತ್ತನೆ ಶೇ.13.92 ರಷ್ಟು ಹೆಚ್ಚಳವಾಗಿದೆ. ಭತ್ತದ ಬಿತ್ತನೆಯಲ್ಲಿ ಶೇ.19.04 ಹೆಚ್ಚಳವಾಗಿದೆ. 2020ರ ಜುಲೈವರೆಗೆ ಸಾವಯವ ಉತ್ಪನ್ನಗಳ ರಫ್ತಿನಲ್ಲಿ ಶೇ.78 ರಷ್ಟು ಹೆಚ್ಚಳವಾಗಿದೆ.

**ಆದಾಯ:** ರೈತರ ಆದಾಯದಲ್ಲಿ ಶೇ.20 ರಿಂದ ಶೇ.68 ಹೆಚ್ಚಳವಾಗಿದೆ.

**ನವೋದ್ಯಮ:** ಯುವಕರಲ್ಲಿ ಉದ್ಯೋಗಾವಕಾಶ ಸೃಷ್ಟಿಸಲು ಮತ್ತು ರೈತರ ಆದಾಯ ಹೆಚ್ಚಿಸಲು 346 ಕೃಷಿ ಆಧಾರಿತ ನವೋದ್ಯಮಗಳು 3,671.75 ಲಕ್ಷ ಕೋಟಿ ರೂ. ಪಡೆಯುತ್ತಿವೆ.

**ತೋಟಗಾರಿಕೆ:** ಕಳೆದ ಐದು ವರ್ಷಗಳಲ್ಲಿ 10,500 ಕೋಟಿ ರೂ. ಗಳನ್ನು ತೋಟಗಾರಿಕೆ ವಲಯದಲ್ಲಿ ಹೂಡಿಕೆ ಮಾಡಲಾಗಿದೆ. 8.83 ಲಕ್ಷ ರೈತರಿಗೆ ಹೊಸ ತಂತ್ರಜ್ಞಾನದ ತರಬೇತಿ ನೀಡಲಾಗುತ್ತಿದೆ.

**ನೀರಾವರಿ:** ಕಿರು ನೀರಾವರಿಯ ಮೂಲಕ ನೀರಿನ ಬಳಕೆ ಹೆಚ್ಚಳವಾಗಿದೆ. ನೀರಾವರಿಯ ಮೇಲಿನ ವೆಚ್ಚ ಶೇ.50ರಷ್ಟು ತಗ್ಗಿದೆ. ರಸಗೊಬ್ಬರ ಬಳಕೆ ಶೇ.42 ಇಳಿದಿದೆ. ರಾಸಾಯನಿಕ ಗೊಬ್ಬರದ ಬದಲಾಗಿ ಬೇವು ಲೇಪಿತ ಗೊಬ್ಬರ ಬಳಕೆಯಾಗುತ್ತಿದೆ.



# ಬೃಹತ್ ನೀಲಿ ಕ್ರಾಂತಿ





**20,000 ಕೋಟಿ ರೂ. ಗಳ ಹೂಡಿಕೆಯೊಂದಿಗೆ ಮೀನು ಸಾಕಾಣಿಕೆ ಅಭಿವೃದ್ಧಿಪಡಿಸುವ ಈ ಮಹತ್ವಾಕಾಂಕ್ಷೆಯ ಯೋಜನೆಯು ರಫ್ತಿನಲ್ಲಿ ದೊಡ್ಡ ಸಾಮರ್ಥ್ಯವನ್ನು ಹೊಂದಿರುವ ಈ ವಲಯವನ್ನು ಆಧುನೀಕರಿಸಲು, ಕೊಯ್ಲಿನ ನಂತರದ ನಷ್ಟವನ್ನು ಕಡಿಮೆ ಮಾಡಲು ಮತ್ತು 21 ರಾಜ್ಯಗಳಲ್ಲಿ ಹೊಸ ಉದ್ಯೋಗಗಳನ್ನು ಸೃಷ್ಟಿಸಲು ಸಹಾಯ ಮಾಡುತ್ತದೆ**

ಭಾರತವು ತನ್ನ ಬೃಹತ್ ಗಾತ್ರದಿಂದಾಗಿ ವಿಶ್ವದ ಪ್ರಮುಖ ಆರ್ಥಿಕತೆಗಳಲ್ಲಿ ಒಂದಾಗಿದೆ. ವಿಶ್ವದ ನಾಲ್ಕನೇ ಅತಿದೊಡ್ಡ ಮೀನು ರಫ್ತುದಾರ ರಾಷ್ಟ್ರವಾಗಿದೆ. ಇದರಿಂದಾಗಿ ಸರ್ಕಾರವು ಮೀನುಗಾರಿಕೆ ಕ್ಷೇತ್ರದಲ್ಲಿ ಮತ್ತಷ್ಟು ಬೆಳವಣಿಗೆಯನ್ನು ತ್ವರಿತಗೊಳಿಸಲು ಯೋಜಿಸಿದೆ. ಈಗ, ಈ ವಲಯದಲ್ಲಿನ ಸಂಪರ್ಕಗಳನ್ನು ಬಲಪಡಿಸುವ ಕೆಲಸ ಮಾಡುವುದು ಅತ್ಯಗತ್ಯವಾಗಿದೆ. ಇದನ್ನು ಮನಗಂಡ ಸರ್ಕಾರ ಆ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ.

ಪ್ರಧಾನಿ ಶ್ರೀ ನರೇಂದ್ರ ಮೋದಿಯವರು 2020 ರ ಸೆಪ್ಟೆಂಬರ್ 10 ರಂದು ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆ, ಇ-ಗೋಪಾಲ ಆ್ಯಪ್ ಮತ್ತು ಮೀನುಗಾರಿಕೆ ಉತ್ಪಾದನೆ, ಡೈರಿ, ಪಶು ಸಂಗೋಪನೆ ಮತ್ತು ಕೃಷಿಯಲ್ಲಿನ ಅಧ್ಯಯನಗಳು ಮತ್ತು

## ಐದು ಸ್ತಂಭಗಳು

1. ಮೀನುಗಾರರು ಮತ್ತು ರೈತರ ಆದಾಯವನ್ನು ದ್ವಿಗುಣಗೊಳಿಸುವುದು
2. ಪ್ರಸಕ್ತ ವಾರ್ಷಿಕ 150 ಲಕ್ಷ ಟನ್ ಮೀನು ಉತ್ಪಾದನೆಯಿದ್ದು, ಅದನ್ನು ಮುಂದಿನ 5 ವರ್ಷಗಳಲ್ಲಿ 220 ಲಕ್ಷ ಟನ್‌ಗಳಿಗೆ ಹೆಚ್ಚಿಸುವುದು
3. ವಾರ್ಷಿಕ ಆದಾಯವನ್ನು ಪ್ರಸ್ತುತ 46,600 ಕೋಟಿ ರೂ.ಗಳಿಂದ 1 ಲಕ್ಷ ಕೋಟಿಗೆ ಹೆಚ್ಚಿಸುವುದು
4. ಕೊಯ್ಲಿನ ನಂತರದ ನಷ್ಟವನ್ನು ಶೇಕಡಾ 20–25 ರಿಂದ ಶೇ. 10 ಕ್ಕೆ ಇಳಿಸುವುದು
5. ಈ ಕ್ಷೇತ್ರದಲ್ಲಿ 55 ಲಕ್ಷ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು

## ಹೊಸ ಅಲೆಗಳ ಸೃಷ್ಟಿ

- ಕೇಂದ್ರ ಸರ್ಕಾರ 2014 ರಲ್ಲಿ 'ನೀಲಿ ಕ್ರಾಂತಿ' ಘೋಷಿಸಿತು. ತನ್ನ ಮೊದಲ ಅವಧಿಯಲ್ಲಿ ಸರ್ಕಾರವು ಮೀನುಗಾರಿಕೆ ಕ್ಷೇತ್ರದಲ್ಲಿ 2600 ಕೋಟಿ ರೂ. ಹೂಡಿಕೆ ಮಾಡಿತು. 1947 ರಿಂದ 67 ವರ್ಷಗಳವರೆಗೆ ಈ ಕ್ಷೇತ್ರದಲ್ಲಿ ಮಾಡಿದ ಒಟ್ಟು ಹೂಡಿಕೆ 3,682 ಕೋಟಿ ರೂ. ಮಾತ್ರ.
- ಈ ವಲಯವು 2014 ರಿಂದ ಹೊಸ ಬದಲಾವಣೆಯನ್ನು ಕಂಡಿದೆ, ಇದು ದಕ್ಷ ಕಾರ್ಯಕ್ಷಮತೆಯನ್ನು ದಾಖಲಿಸಿದೆ ಮತ್ತು ವಾರ್ಷಿಕ ಬೆಳವಣಿಗೆಯು ಹಿಂದಿನ ಶೇಕಡಾ 5.2, ಶೇಕಡಾ 11 ಕ್ಕೆ ದ್ವಿಗುಣಗೊಂಡಿದೆ.



- 2014ರಿಂದ ಐದು ವರ್ಷಗಳಲ್ಲಿ ಮೀನು ಉತ್ಪಾದನೆಯ ವೃದ್ಧಿ ದರ ಹಿಂದಿನ ಶೇ.4.7ರಿಂದ ಶೇ.7.53ಕ್ಕೆ ಏರಿದೆ.
- ಮೀನು ರಫ್ತು ರೂ.46,662 ಕೋಟಿ ಆಗಿದೆ. ಇದು 2014-15ರಿಂದ 2018-19ರವರೆಗೆ ಶೇ.9.71 ಹೆಚ್ಚಳ ಕಂಡಿದೆ.



# ಸುಸ್ಥಿರತೆಯತ್ತ ಮೀನುಗಾರಿಕೆ

- ಇತ್ತೀಚಿನ ಯೋಜನೆಯು ಮೀನುಗಾರಿಕಾ ಹಡಗುಗಗಳಿಗೆ ವಿಮೆ, ಹಡಗುಗಳು, ದೋಣಿಗಳು, ಜೈವಿಕ ಶೌಚಾಲಯಗಳು, ಲವಣಯುಕ್ತ, ಕ್ಷಾರೀಯ ಪ್ರದೇಶಗಳಲ್ಲಿ ಜಲಚರಗಳ ಸಾಕಣೆ, ಸಾಗರ ಮಿತ್ರ, ತಳಿ ಸಂವರ್ಧನಾ ಕೇಂದ್ರಗಳು, ಮೀನುಗಾರಿಕೆ ಮತ್ತು ಮೀನು ಸಾಕಣಿಕೆ ಸ್ಟಾರ್ಟ್‌ಅಪ್ ಅಪ್ಲಿಕೇಶನ್‌ಗಳು, ಸಮಗ್ರ ಆಕ್ವಾ ಪಾರ್ಕ್, ಸಮಗ್ರ ಕರಾವಳಿ ಮೀನುಗಾರಿಕೆ ಗ್ರಾಮ ಅಭಿವೃದ್ಧಿ, ಜಲಚರ ಪ್ರಯೋಗಾಲಯಗಳ ಜಾಲ ಮತ್ತು ಇ-ವ್ಯಾಪಾರ, ಮಾರಾಟ ಸೌಲಭ್ಯಗಳನ್ನು ಮೇಲ್ದರ್ಜೆಗೇರಿಸಲು ಆರ್ಥಿಕ ನೆರವು ಒದಗಿಸುತ್ತದೆ.
- 1,720 ಕೋಟಿ ರೂ.ಗಳ ಮೌಲ್ಯದ ಯೋಜನೆಗಳನ್ನು 21 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಮೊದಲ ಹಂತದಲ್ಲಿ ಜಾರಿಗೊಳಿಸಲಾಗುತ್ತಿದೆ. ಉತ್ಪಾದನೆ, ಗುಣಮಟ್ಟದ ತಂತ್ರಜ್ಞಾನ, ಕೊಯ್ಲಿನ ನಂತರದ ಮೂಲಸೌಕರ್ಯ ಮತ್ತು ನಿರ್ವಹಣೆಯಲ್ಲಿನ ನ್ಯೂನತೆಗಳನ್ನು ಪರಿಹರಿಸುವ ಉದ್ದೇಶವನ್ನು ಪಿಎಂಎಂಎಸ್‌ವೈ ಹೊಂದಿದೆ. ಬಲವಾದ ಮೀನುಗಾರಿಕೆ ನಿರ್ವಹಣಾ ಚೌಕಟ್ಟು ಮತ್ತು ಮೀನುಗಾರರ ಕಲ್ಯಾಣದ ಗುರಿಯನ್ನೂ ಇದು ಹೊಂದಿದೆ.
- ಈ ಕ್ಷೇತ್ರಕ್ಕೆ ಸುಸ್ಥಿರ ಅಭಿವೃದ್ಧಿ ಯೋಜನೆ. ಇದನ್ನು ಮುಂದಿನ 5 ವರ್ಷಗಳಲ್ಲಿ 20,050 ಕೋಟಿ ರೂ.ಗಳ ಹೂಡಿಕೆಯೊಂದಿಗೆ ಆತ್ಮನಿರ್ಭರ ಭಾರತ ಪ್ಯಾಕೇಜ್ ಅಡಿಯಲ್ಲಿ ಜಾರಿಗೆ ತರಲಾಗುವುದು. ಇದರಲ್ಲಿ ಕಡಲು, ಮೀನುಗಾರಿಕೆ ಮತ್ತು ಮೀನು ಸಾಕಣೆ ಸಂಬಂಧಿಸಿದ ಚಟುವಟಿಕೆಗಳಿಗೆ 12,340 ಕೋಟಿ ರೂ. ವೆಚ್ಚ ಮಾಡಲಾಗುವುದು.

ಸಂಶೋಧನೆಗಳಿಗೆ ಸಂಬಂಧಿಸಿದ ಹಲವಾರು ಉಪಕ್ರಮಗಳಿಗೆ ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ಚಾಲನೆ ನೀಡಿದರು.

ದೇಶದ 21 ರಾಜ್ಯಗಳಲ್ಲಿ 20,000 ಕೋಟಿ ರೂ.ಗಳ ಹೂಡಿಕೆಯೊಂದಿಗೆ ಈ ಯೋಜನೆಯನ್ನು ಪ್ರಾರಂಭಿಸಲಾಗುತ್ತಿದೆ, ಈ ಹಣವನ್ನು ಮುಂದಿನ 4-5 ವರ್ಷಗಳಲ್ಲಿ ಖರ್ಚು ಮಾಡಲಾಗುವುದು. ಈ ಪೈಕಿ 1700 ಕೋಟಿ ರೂ. ಗಳ ಯೋಜನೆಗಳಿಗೆ ಸೆಪ್ಟೆಂಬರ್ 10 ರಂದೇ ಚಾಲನೆ ನೀಡಲಾಗಿದೆ. ಈ ಸಂದರ್ಭದಲ್ಲಿ ಮಾತನಾಡಿದ ಪ್ರಧಾನಿ, "ಈ ಎಲ್ಲಾ ಯೋಜನೆಗಳ ಹಿಂದಿನ ಉದ್ದೇಶ ನಮ್ಮ ಹಳ್ಳಿಗಳನ್ನು

ಸಬಲೀಕರಣಗೊಳಿಸುವುದು ಮತ್ತು 21 ನೇ ಶತಮಾನದಲ್ಲಿ ಭಾರತವನ್ನು ಸ್ವಾವಲಂಬಿಯನ್ನಾಗಿ (ಆತ್ಮನಿರ್ಭರ ಭಾರತ) ಮಾಡುವುದಾಗಿದೆ" ಎಂದರು.

ಈ ಯೋಜನೆಯು ಮೀನುಗಾರರಿಗೆ ಹೊಸ ಮೂಲಸೌಕರ್ಯಗಳು, ಆಧುನಿಕ ಉಪಕರಣಗಳು ಮತ್ತು ಹೊಸ ಮಾರುಕಟ್ಟೆಗಳನ್ನು ಒದಗಿಸುತ್ತದೆ, ಜೊತೆಗೆ ಕೃಷಿ ಮತ್ತು ಇತರ ವಿಧಾನಗಳ ಮೂಲಕ ಹೆಚ್ಚಿನ ಅವಕಾಶಗಳನ್ನು ಒದಗಿಸುತ್ತದೆ ಎಂದು ಪ್ರಧಾನಿ ಹೇಳಿದರು. ಸ್ವಾತಂತ್ರ್ಯದ ನಂತರ ದೇಶದಲ್ಲಿ ಇದೇ ಮೊದಲ ಬಾರಿಗೆ ಮೀನುಗಾರಿಕೆ ಕ್ಷೇತ್ರದಲ್ಲಿ ಇಂತಹ ಪ್ರಮುಖ ಯೋಜನೆಯನ್ನು ಪ್ರಾರಂಭಿಸಲಾಗಿದೆ. ಈ ವಲಯದಲ್ಲಿ 2014 ಕ್ಕಿಂತ ಮೊದಲು ಹಿಂದಿನ ಸರ್ಕಾರದ ಹೂಡಿಕೆ 3,682 ಕೋಟಿ ರೂ. ಆಗಿತ್ತು. ಆದರೆ 2014ರ ನಂತರ ಸರ್ಕಾರವು 20,000 ಕೋಟಿ ರೂ.ಗಳ ಉದ್ದೇಶಿತ ಹೂಡಿಕೆಯೊಂದಿಗೆ ಈಗಾಗಲೇ 2,600 ಕೋಟಿ ರೂ. ಗಳನ್ನು ಹೂಡಿಕೆ ಮಾಡಿದೆ ಎಂದರು.

ಮುಂದಿನ 3–4 ವರ್ಷಗಳಲ್ಲಿ ಮೀನಿನ ರಫ್ತು ದ್ವಿಗುಣಗೊಳಿಸುವ ಗುರಿ ಹೊಂದಲಾಗಿದ್ದು, ಇದು ಮೀನುಗಾರಿಕೆ ಕ್ಷೇತ್ರವೊಂದರಲ್ಲೇ ಲಕ್ಷಾಂತರ ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತದೆ. ಇತ್ತೀಚಿನ ತಂತ್ರಜ್ಞಾನದೊಂದಿಗೆ ಕ್ಷೇತ್ರವನ್ನು ಸಜ್ಜುಗೊಳಿಸುವ ನಿಟ್ಟಿನಲ್ಲಿ ಕೆಲಸ ಮಾಡುವುದು, ನಿರ್ಣಾಯಕ ಮೂಲಸೌಕರ್ಯಗಳನ್ನು ನವೀಕರಿಸುವುದು, ಮೌಲ್ಯ ಸರಪಳಿಯನ್ನು ಬಲಪಡಿಸುವುದು ಮತ್ತು ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು ಯೋಜನೆಯ ಉದ್ದೇಶಗಳಾಗಿವೆ. ಈ ಯೋಜನೆಯು ಮೀನುಗಾರಿಕೆಗೆ ಸಂಬಂಧಿಸಿದ ಇತರ ಜನರ ಕಲ್ಯಾಣಕ್ಕೂ ಕ್ರಮಗಳನ್ನು ಹೊಂದಿದೆ ಎಂದು ಅವರು ಹೇಳಿದರು.

ಸ್ವಾತಂತ್ರ್ಯದ ನಂತರ ಇದು ಮೀನುಗಾರಿಕೆ ಕ್ಷೇತ್ರದಲ್ಲಿ ಮಾಡಿದ ಅತಿದೊಡ್ಡ ಹೂಡಿಕೆಯಾಗಿದೆ ಎಂದು ಹೇಳಿದ ಪ್ರಧಾನಿ, ಮುಂಬರುವ ವರ್ಷಗಳಲ್ಲಿ ಮೀನಿನ ರಫ್ತು ದ್ವಿಗುಣಗೊಳಿಸುವ ಉದ್ದೇಶವಿದೆ ಎಂದರು. ಎಲ್ಲಕ್ಕಿಂತ ಮುಖ್ಯವಾಗಿ, ಮೀನುಗಾರಿಕೆ ಕ್ಷೇತ್ರವನ್ನು ಗರಿಷ್ಠವಾಗಿ ಬಳಸಿಕೊಳ್ಳಲು, ಹೊಸ ಸಚಿವಾಲಯವನ್ನು ಸೃಷ್ಟಿಸಲಾಗಿದೆ ಎಂದರು. ಸ್ವಚ್ಛ ಗಂಗಾ ಅಭಿಯಾನ ಮತ್ತು ಮಿಷನ್ ಡಾಲ್ಫಿನ್ ನಂತಹ ಇತರ ಯೋಜನೆಗಳು ಸಹ ಈ ಕ್ಷೇತ್ರಕ್ಕೆ ಉಪಯುಕ್ತವಾಗಿವೆ. "ಇದು ಕೃಷಿ ಮತ್ತು ಇತರ ವಿಧಾನಗಳ ಮೂಲಕ ಗಳಿಕೆಯ ಅವಕಾಶಗಳನ್ನು ಹೆಚ್ಚಿಸುತ್ತದೆ" ಎಂದು ಅವರು ಹೇಳಿದರು. ಈ ಉಪಕ್ರಮವು ಮೀನು, ಹಾಲು ಮತ್ತು ಜೇನು ಉತ್ಪಾದನೆಯನ್ನು ಹೆಚ್ಚಿಸುತ್ತದೆ, ನೀಲಿ ಕ್ರಾಂತಿಗೆ ದಾರಿ ಮಾಡಿಕೊಡುತ್ತದೆ ಎಂದು ಪ್ರಧಾನಿ ತಿಳಿಸಿದರು. ■

## ಜಾನುವಾರುಗಳ ವರ್ಚುವಲ್ ಮಾರುಕಟ್ಟೆ ಅಭಿವೃದ್ಧಿಗೆ ಇ-ಗೋಪಾಲ

ಇ–ಗೋಪಾಲ ಆ್ಯಪ್ ಜಾನುವಾರುಗಳಿಗೆ ಮಾರುಕಟ್ಟೆ ಒದಗಿಸಲು ಅನುಕೂಲವಾಗಲಿದೆ. ಈ ಯೋಜನೆಯಡಿ ಬಿಹಾರದ ಪಾಟ್ನಾ, ಪೂರ್ನಿಯಾ, ಸೀತಮರ್‌ಹಿ, ಮಾದೇಪುರ, ಕಿಶನ್ ಗಂಜ್ ಮತ್ತು ಸಮಸ್ತಿಪುರ ಜಿಲ್ಲೆಗಳಲ್ಲಿ ಅನೇಕ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ, ಶೇಕಡಾ 89 ರಷ್ಟು ಜನರು ಹಳ್ಳಿಗಳಲ್ಲಿ ವಾಸಿಸುತ್ತಿದ್ದಾರೆ ಮತ್ತು ಆ ಜನಸಂಖ್ಯೆಯ ಶೇ.76 ರಷ್ಟು ಜನರು ಕೃಷಿ ಮತ್ತು ಪಶುಸಂಗೋಪನೆಯನ್ನು ಅವಲಂಬಿಸಿದ್ದಾರೆ.




ಇ–ಗೋಪಾಲ ಆ್ಯಪ್ ಮೂಲಕ ಜಾನುವಾರು ಪಾಲಕರು ಪಶುಸಂಗೋಪನೆಗೆ ಸಂಬಂಧಿಸಿದ ಎಲ್ಲಾ ಮಾಹಿತಿಯನ್ನು ಪಡೆಯಬಹುದು. ಅವರು ಜಾನುವಾರುಗಳನ್ನು ಖರೀದಿಸಬಹುದು ಮತ್ತು ಮಾರಾಟ ಮಾಡಬಹುದು. ಗುಣಮಟ್ಟದ ಸಂತಾನೋತ್ಪತ್ತಿ ಸೇವೆಗಳ ಲಭ್ಯತೆ, ಜಾನುವಾರುಗಳಿಗೆ ಮಾರ್ಗದರ್ಶನ ಸೇರಿದಂತೆ ಆಯುರ್ವೇದ ಔಷಧ ಮತ್ತು ರೋಗ ನಿರೋಧಕ ಶಕ್ತಿಯಂತಹ ವಿಷಯಗಳ ಬಗ್ಗೆ ಸೂಕ್ತವಾದ ಮಾಹಿತಿಯನ್ನು ಪಡೆಯಬಹುದು.

ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆ ಅಡಿಯಲ್ಲಿ ಸೀತಮರ್‌ಹಿಯಲ್ಲಿ ಮೀನು ಮರಿ ಬ್ಯಾಂಕ್ ಮತ್ತು ಕಿಶನ್ ಗಂಜ್‌ನಲ್ಲಿ ಜಲಚರ ರೋಗ ರೆಫರಲ್ ಪ್ರಯೋಗಾಲಯವನ್ನು ಸ್ಥಾಪಿಸುವುದಾಗಿ ಪ್ರಧಾನಿ ಘೋಷಿಸಿದರು. ಇದರೊಂದಿಗೆ ಮಾಧೇಪುರದಲ್ಲಿ ಮೀನಿನ ಆಹಾರ ಘಟಕ ಮತ್ತು ಪಾಟ್ನಾದಲ್ಲಿ ಎರಡು 'ಫಿಶ್ ಆನ್ ವೀಲ್ಸ್' ಘಟಕಗಳನ್ನು ಉದ್ಘಾಟಿಸಿದರು. ಬಿಹಾರದ ಪೂಸಾದ ಡಾ.ರಾಜೇಂದ್ರ ಪ್ರಸಾದ್ ಕೇಂದ್ರೀಯ ಕೃಷಿ ವಿಶ್ವವಿದ್ಯಾಲಯದಲ್ಲಿ ಸಮಗ್ರ ಮೀನು ಉತ್ಪಾದನಾ ತಂತ್ರಜ್ಞಾನ ಕೇಂದ್ರವನ್ನು ಉದ್ಘಾಟಿಸಿದರು. ಪಶು ವೈದ್ಯಕೀಯ ವಿಶ್ವವಿದ್ಯಾಲಯದಲ್ಲಿ ಐವಿಎಫ್ ಲ್ಯಾಬ್‌ಗೂ ಸಹ ಚಾಲನೆ ನೀಡಲಾಯಿತು.

ಪಿಎಂಎಂಎಸ್‌ವೈ ಬಗ್ಗೆ ಸಂಪೂರ್ಣ ಮಾಹಿತಿಗಾಗಿ ಈ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ




# ಬಿಹಾರದಲ್ಲಿ ಹೊಸ ವೈಭವ

**ಬಿಹಾರದಲ್ಲಿ ಕೇಂದ್ರವು ಹಲವಾರು ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಿದೆ. ಶುದ್ಧ ನೀರು ಒದಗಿಸುವುದು, ನದಿ ತಟ, ಹೆದ್ದಾರಿಗಳ ಅಭಿವೃದ್ಧಿಯಿಂದ ಒಳಚರಂಡಿ ನೀರು ಸಂಸ್ಕರಣೆಯವರೆಗೆ ಅಭಿವೃದ್ಧಿಯ ಅಭಿಯಾನ ಮುಂದುವರಿದಿದೆ.**

ಸರ್ಕಾರವು ಯಾವಾಗಲೂ ರಾಜ್ಯಗಳ ಅಭಿವೃದ್ಧಿಯತ್ತ ಗಮನ ಹರಿಸುತ್ತಿದೆ, ವಿಶೇಷವಾಗಿ ಅತ್ಯಂತ ನಿರ್ಣಾಯಕವಾದ ಬಿಹಾರ ಸೇರಿದಂತೆ ಪೂರ್ವ ರಾಜ್ಯಗಳ ಅಭಿವೃದ್ಧಿಗೆ ಗಮನ ಹರಿಸಿದೆ. ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಪೂರ್ವ ಭಾಗದ ಅಭಿವೃದ್ಧಿಯ ಬಗ್ಗೆ ಯಾವಾಗಲೂ ಮಾತನಾಡುತ್ತಾರೆ. ಅವುಗಳನ್ನು ಸಾಕಾರಗೊಳಿಸಲು ಪ್ರಧಾನಿಯವರು 2020ರ ಸೆಪ್ಟೆಂಬರ್ 15 ರಂದು ಬಿಹಾರದಲ್ಲಿ 'ನಮಾಮಿ ಗಂಗೆ' ಮತ್ತು ಅಮೃತ್ (ಎಎಂಆರ್‌ಯುಟಿ) ಯೋಜನೆಯಡಿಯಲ್ಲಿ ವಿವಿಧ ಯೋಜನೆಗಳನ್ನು ಉದ್ಘಾಟಿಸಿದರು.

ಸೆಪ್ಟೆಂಬರ್ 15, 2020 ರಂದು ಪ್ರಧಾನಿಯವರು ಉದ್ಘಾಟಿಸಿದ ನಾಲ್ಕು ಯೋಜನೆಗಳಲ್ಲಿ ಪಾಟ್ನಾದ ಬ್ಯುರ್ ಮತ್ತು ಕರಮಾಲಿಚಕ್ ನಲ್ಲಿ ಒಳಚರಂಡಿ ಸಂಸ್ಕರಣಾ ಘಟಕಗಳು, ಮತ್ತು ಅಮೃತ್ ಯೋಜನೆಯಡಿ ಸಿವಾನ್ ಮತ್ತು ಛಾಪ್ರಾ ಜಿಲ್ಲೆಗಳಲ್ಲಿ ನೀರು ಸಂಬಂಧಿತ ಯೋಜನೆಗಳು ಸೇರಿವೆ. ಇದಲ್ಲದೆ, ಮುಂಗೆರ್ ಮತ್ತು ಜಮಾಲ್ಪುರದಲ್ಲಿ ನೀರು ಸರಬರಾಜು ಯೋಜನೆಗಳಿಗೆ ಮತ್ತು ಮುಜಾಫರ್ಪುರ ಜಿಲ್ಲೆಯಲ್ಲಿ ನಮಾಮಿ ಗಂಗೆ ಅಡಿಯಲ್ಲಿ ನದಿ ತಟದ ಅಭಿವೃದ್ಧಿ ಯೋಜನೆಗಳಿಗೆ ಶಿಲಾನ್ಯಾಸ ನೆರವೇರಿಸಲಾಯಿತು. ಮಿಷನ್ ಅಮೃತ್ ಮತ್ತು ರಾಜ್ಯ ಸರ್ಕಾರದ ವಿವಿಧ ಯೋಜನೆಗಳ ಮೂಲಕ ಕಳೆದ 4–5 ವರ್ಷಗಳಲ್ಲಿ ಬಿಹಾರದ ನಗರ ಪ್ರದೇಶಗಳ ಲಕ್ಷಾಂತರ ಕುಟುಂಬಗಳಿಗೆ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಲಾಗಿದೆ ಎಂದು ಪ್ರಧಾನಿ ಹೇಳಿದರು. ■

**ಚಂಪಾರಣ್‌ನಲ್ಲಿ ಎಲ್‌ಪಿಜಿ ಬಾಟ್ಲಿಂಗ್ ಘಟಕ**

ವರ್ಷಕ್ಕೆ 84.50 ಲಕ್ಷ ಎಲ್‌ಪಿಜಿ ಸಿಲಿಂಡರ್ ಬಾಟ್ಲಿಂಗ್ ಸಾಮರ್ಥ್ಯದ ಈ ಘಟಕವನ್ನು 136.4 ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಪೂರ್ವ ಚಂಪಾರಣ್, ಪಶ್ಚಿಮ ಚಂಪಾರಣ್, ಮುಜಾಫರ್‌ಪುರ್, ಸಿವಾನ್, ಗೋಪಾಲಗಂಜ್ ಮತ್ತು ಸೀತಮಾರಿಗಳಲ್ಲದೆ, ಉತ್ತರ ಪ್ರದೇಶದ ಕುಶಿನಗರ ಜಿಲ್ಲೆಯೂ ಇದರ ಪ್ರಯೋಜನ ಪಡೆಯಲಿವೆ.

**ಕೋಸಿ ಸೇತುವೆ ಸಂಪೂರ್ಣ**

ಕೊರೊನಾ ಸಾಂಕ್ರಾಮಿಕದ ಸಮಯದಲ್ಲಿ ಸುಮಾರು 516 ಕೋಟಿ ರೂ. ವೆಚ್ಚದಲ್ಲಿ 1.9 ಕಿಲೋಮೀಟರ್ ಉದ್ದದ ಈ ಸೇತುವೆಯ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ.

**ಒಳಚರಂಡಿ ಮತ್ತು ನದಿ ತಟದ ಅಭಿವೃದ್ಧಿ**

ಪಾಟ್ನಾ ನಗರದ ಬ್ಯುರ್ ಮತ್ತು ಕರಮಾಲಿಚಕ್‌ನಲ್ಲಿ ಒಳಚರಂಡಿ ಸಂಸ್ಕರಣಾ ಘಟಕದ ಜೊತೆಗೆ ಅಮೃತ್ ಯೋಜನೆಯಡಿ ಸಿವಾನ್ ಮತ್ತು ಛಾಪ್ರಾ ಜಿಲ್ಲೆಗಳಲ್ಲಿ ನೀರು ಸಂಬಂಧಿತ ಯೋಜನೆಗಳ ಉದ್ಘಾಟನೆ. ಮುಂಗೆರ್ ಮತ್ತು ಜಮಾಲ್ಪುರದ ನೀರಿನ ಕೊರತೆಯನ್ನು ನೀಗಿಸಲು ನೀರು ಸರಬರಾಜು ಯೋಜನೆಗಳಿಗೆ ಮತ್ತು ಮುಜಾಫರ್ಪುರ ಜಿಲ್ಲೆಯಲ್ಲಿ ನಮಾಮಿ ಗಂಗೆ ಅಡಿಯಲ್ಲಿ ಯೋಜನೆಯ ನದಿ ತಟದ ಅಭಿವೃದ್ಧಿ ಕಾರ್ಯಗಳಿಗೆ ಪ್ರಧಾನಿ ಶಿಲಾನ್ಯಾಸ ನೆರವೇರಿಸಿದರು.

**ನದಿ ತಟ ಅಭಿವೃದ್ಧಿ ಯೋಜನೆ**

ನಮಾಮಿ ಗಂಗೆ ಯೋಜನೆಯಡಿ ಮುಜಾಫರ್‌ಪುರದ ಮೂರು ಘಾಟ್‌ಗಳನ್ನು ಅಭಿವೃದ್ಧಿಪಡಿಸಲಾಗುವುದು. ಇದರಡಿ ಶೌಚಾಲಯಗಳು, ಮಾಹಿತಿ ಕಿಯೋಸ್ಕ್, ಬಟ್ಟೆ ಬದಲಾಯಿಸುವ ಕೊಠಡಿಗಳು, ಪಾದಚಾರಿ ಮಾರ್ಗಗಳು, ವೀಕ್ಷಣಾ ಗೋಪುರಗಳು, ಭದ್ರತೆ ಮತ್ತು ಉತ್ತಮ ಬೆಳಕಿನ ವ್ಯವಸ್ಥೆಯನ್ನು ಒದಗಿಸಲಾಗುವುದು.

**3 ತಿಂಗಳಲ್ಲಿ ಮಂಗೆರ್–ಭಾಗಲ್ಪುರ ರಾಷ್ಟ್ರೀಯ ಹೆದ್ದಾರಿ**

ಬಿಹಾರದ ಮಂಗೆರ್–ಭಾಗಲ್ಪುರ ರಾಷ್ಟ್ರೀಯ ಹೆದ್ದಾರಿ 80 ರಲ್ಲಿ 120 ಕಿ.ಮೀ ಉದ್ದದ ಮಂಗೆರ್–ಭಾಗಲ್ಪುರ ತಿರುಪತಿ–ಕಹಲ್ ಗಾಂವ್ ಕಾಂಕ್ರೀಟ್ ರಸ್ತೆ ನಿರ್ಮಾಣದ ಪ್ರಸ್ತಾವನೆಯನ್ನು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅನುಮೋದಿಸಿದ್ದಾರೆ.



# ಬೀದಿ ಬದಿ ವ್ಯಾಪಾರಿಗಳಿಗೆ ದೊರೆತ ನೆರವಿನ ಹಸ್ತ

## ತಮ್ಮ ಕನಸಿನ ಸೂಕ್ಷ್ಮ ವ್ಯಾಪಾರ ಮತ್ತೆ ಕಟ್ಟಿಕೊಳ್ಳಲು ಕೇಂದ್ರದಿಂದ ಆರ್ಥಿಕ ಬೆಂಬಲ ಪಡೆದ ಕೋವಿಡ್-19 ರಿಂದ ಬಾಧಿತರಾಗಿದ್ದ ಲಕ್ಷಾಂತರ ವ್ಯಾಪಾರಿಗಳು

ಬೀದಿ ಬದಿ ವ್ಯಾಪಾರಿಗಳು ನಗರದ ಆರ್ಥಿಕತೆಯಲ್ಲಿ ಅನೌಪಚಾರಿಕವಾಗಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತಿದ್ದು, ಕೋವಿಡ್-19 ಸಾಂಕ್ರಾಮಿಕದ ಹಿನ್ನೆಲೆಯಲ್ಲಿನ ಲಾಕ್‌ಡೌನ್‌ನಲ್ಲಿ ಅವರ ಜೀವನೋಪಾಯದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಯಿತು. ಲಾಕ್‌ಡೌನ್ ಅವಧಿಯಲ್ಲಿ ಮಾರುಕಟ್ಟೆಗಳು ಮುಚ್ಚಿದ್ದು, ಜನರು ಮನೆಯೊಳಗೆ ಉಳಿಯುವುದು ಅನಿವಾರ್ಯವಾಗಿತ್ತು; ಇದರ ಫಲವಾಗಿ ಬೀದಿ ಬದಿ ವ್ಯಾಪಾರಿಗಳು ವ್ಯಾಪಾರವಿಲ್ಲದೆ ತೀವ್ರ ಸಂಕಷ್ಟಕ್ಕೆ ಸಿಲುಕಿದರು. ಬೀದಿ ಬದಿ ವ್ಯಾಪಾರಿಗಳಿಗೆ ತಮ್ಮ ವ್ಯಾಪಾರ ಪುನಾರಂಭಿಸಲು ಅವರಿಗೆ ಬಂಡವಾಳಕ್ಕೆ ಸಾಲ ನೀಡುವ ತುರ್ತು ಅಗತ್ಯವಿದೆ ಎಂಬುದನ್ನು ಸರ್ಕಾರ ಮನಗಂಡಿತು. ಅವರನ್ನು ಸಂಕಷ್ಟದಿಂದ ಹೊರತರಲು ಪ್ರಧಾನಮಂತ್ರಿ ಸ್ವನಿಧಿ ಯೋಜನೆಯನ್ನು 2020ರ ಜೂನ್ 1 ರಂದು ಆರಂಭಿಸಲಾಯಿತು.

2020ರ ಸೆಪ್ಟೆಂಬರ್ 9 ರಂದು ಪ್ರಧಾನಮಂತ್ರಿಯವರು ಮಧ್ಯಪ್ರದೇಶದಿಂದ ಬೀದಿ ಬದಿ ವ್ಯಾಪಾರಿಗಳೊಂದಿಗೆ ಸಂವಾದ ನಡೆಸಿದರು. ಯಾವಾಗ ದೊಡ್ಡ ಬಿಕ್ಕಟ್ಟು ಅಥವಾ ಸಾಂಕ್ರಾಮಿಕ ತಲೆದೋರುತ್ತದೋ ಆಗ ಬಡವರೇ ಹೆಚ್ಚು ಬಾಧಿತರಾಗುತ್ತಾರೆ. "ಬಡವರಿಗೆ ಉದ್ಯೋಗ, ಆಹಾರದ ಸಂಕಷ್ಟ ಎದುರಾಗುತ್ತದೆ, ಅವರು ಉಳಿಸಿದ್ದೆಲ್ಲವನ್ನೂ ಕಳೆದುಕೊಳ್ಳುತ್ತಾರೆ", ಎಂದು ಪ್ರಧಾನಿ ತಿಳಿಸಿದ್ದರು. ಸಾಂಕ್ರಾಮಿಕದ ವೇಳೆ ಬೀದಿ ಬದಿ ವ್ಯಾಪಾರಿಗಳು ತುಂಬಾ ಬಳಲಿದರು ಎಂದು ಪ್ರಧಾನಿ ಹೇಳಿದರು. ಪಿ.ಎಂ. ಸ್ವನಿಧಿ ಯೋಜನೆ ಅಡಿಯಲ್ಲಿ 11,12,189

**ಮೃದು ಸಾಲ ಮತ್ತು ದುಡಿಯುವ ಬಂಡವಾಳದ ಮೂಲಕ ಒಂದು ಬಾರಿಯ ಹಣಕಾಸು ನೆರವು, ಸಣ್ಣ ವ್ಯಾಪಾರ ಅಭಿವೃದ್ಧಿ ಹೊಂದಲು ಅನುವು ಮಾಡಿಕೊಡುತ್ತದೆ. ಈಗಾಗಲೇ, 1.04 ಲಕ್ಷ ಬೀದಿ ಬದಿ ವ್ಯಾಪಾರಿಗಳು ಸಾಲದ ಮೂಲಕ ಪ್ರಯೋಜನ ಪಡೆದಿದ್ದಾರೆ.**



“ಜನರಿಗೆ ಸುಲಭ ಬಂಡವಾಳ ಖಾತರಿಪಡಿಸಿ, ಇದರಿಂದ ಅವರು ಹೊಸ ಆರಂಭವನ್ನು ಮಾಡಲು ಮತ್ತು ಅವರು ಕೆಲಸವನ್ನು ಪುನರಾರಂಭಿಸುವಂತೆ ಮಾಡುವುದು ಈ ಯೋಜನೆಯ ಹಿಂದಿನ ಉದ್ದೇಶವಾಗಿದೆ. ಸ್ವನಿಧಿ ಯೋಜನೆಯು ಸ್ವಯಂ ಹಣಕಾಸಿನಿಂದ ಸ್ವ-ಉದ್ಯೋಗದವರೆಗೆ, ಸ್ವಯಂ ಉದ್ಯೋಗದಿಂದ ಸ್ವಯಂ ಸುಸ್ಥಿರತೆವರೆಗೆ ಹಾಗೂ ಸ್ವಯಂ ಸುಸ್ಥಿರತೆಯಿಂದ ಆತ್ಮಗೌರವದವರೆಗಿನ ಪಯಣದಲ್ಲಿ ಒಂದು ಪ್ರಮುಖ ಮೈಲಿಗಲ್ಲಾಗಿದೆ.”

**ಪ್ರಧಾನ ಮಂತ್ರಿ**
**ನರೇಂದ್ರ ಮೋದಿ**

ಅರ್ಜಿಗಳು ಬಂದಿದ್ದು, 3,95,120 ಸಾಲ ಮಂಜೂರಾಗಿದೆ ಮತ್ತು 1,04,062 ಮಂದಿಗೆ ಸಾಲ ವಿತರಿಸಲಾಗಿದೆ. ■

ಫಲಾನುಭವಿಗಳೊಂದಿಗೆ ಪ್ರಧಾನಮಂತ್ರಿಯರ ಸಂವಾದಕ್ಕಾಗಿ ಕ್ಯೂಆರ್. ಕೋಡ್ ಸ್ಕ್ಯಾನ್ ಮಾಡಿ.




## ವಿಶೇಷ ಕಿರು ಸಾಲ ಯೋಜನೆ

- ಈ ಯೋಜನೆಗೆ ಪೂರ್ತಿ ಆರ್ಥಿಕ ನೆರವನ್ನು ವಸತಿ ಹಾಗೂ ನಗರ ವ್ಯವಹಾರಗಳ ಸಚಿವಾಲಯ ಒದಗಿಸುತ್ತದೆ.
- ವಾರ್ಷಿಕ 10,000 ರೂ. ಕಾರ್ಯ ಬಂಡವಾಳವನ್ನು ಇದು ಒದಗಿಸುತ್ತದೆ.
- ನಿಗದಿತ ಸಮಯಕ್ಕೆ ಮೊದಲು ಸಾಲ ಮರುಪಾವತಿ ಮಾಡಿದಲ್ಲಿ ಯಾವುದೇ ಪೂರ್ವಪಾವತಿ ದಂಡ ವಿಧಿಸಲಾಗುವುದಿಲ್ಲ.
- ಈ ಯೋಜನೆ ಮಾರ್ಚ್ 2022ರವರೆಗೆ ಜಾರಿ ಮಾಡಲಾಗುತ್ತದೆ
- ಸಕಾಲದಲ್ಲಿ/ಅವಧಿಗೆ ಮುನ್ನ ಮರು ಪಾವತಿಸಿದಲ್ಲಿ ಶೇ.7ರ ಬಡ್ಡಿ ಸಹಾಯಧನ
- ಡಿಜಿಟಲ್ ವಹಿವಾಟಿನ ಮೇಲೆ ಮಾಸಿಕ ಕ್ಯಾಷ್‌ಬ್ಯಾಕ್
- ಪ್ರಥಮ ಸಾಲದ ಸಕಾಲದ ಮರುಪಾವತಿಯಿಂದ ಹೆಚ್ಚಿನ ಸಾಲಕ್ಕೆ ಅರ್ಹತೆ.

## ಪ್ರಯೋಜನ ಪಡೆಯುವುದು ಹೇಗೆ

- ಇದು ನಗರ ಪ್ರದೇಶಗಳಲ್ಲಿ ಮಾರಾಟದಲ್ಲಿ ತೊಡಗಿರುವ ಎಲ್ಲ ಬೀದಿ ಬದಿ ವ್ಯಾಪಾರಿಗಳಿಗೆ ಲಭ್ಯ.
- ಸಾಲಕ್ಕಾಗಿ ಹಣ ನೀಡುವ ಸಂಸ್ಥೆ ಯಾವುದೇ ಮೇಲಾಧಾರ ಪಡೆಯುವುದಿಲ್ಲ.
- ಷೆಡ್ಯೂಲ್ಡ್ ವಾಣಿಜ್ಯ ಬ್ಯಾಂಕ್ ಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಗಳು, ಸಣ್ಣ ಹಣಕಾಸು ಬ್ಯಾಂಕ್ ಗಳು, ಸಹಕಾರಿ ಬ್ಯಾಂಕ್ ಗಳು, ಬ್ಯಾಂಕಿಂಗೇತರ ಹಣಕಾಸು ಕಂಪನಿಗಳು, ಸೂಕ್ಷ್ಮ ಹಣಕಾಸು ಸಂಸ್ಥೆಗಳು ಮತ್ತು ಎಸ್.ಎಚ್.ಜಿ. ಬ್ಯಾಂಕ್‌ಗಳು ಸಾಲ ನೀಡಿಕೆ ಸಂಸ್ಥೆಗಳಾಗಿರುತ್ತವೆ.
- ಮಾರಾಟದ ಪ್ರಮಾಣಪತ್ರ, ಯುಎಲ್.ಬಿ / ಟಿವಿಸಿಯಿಂದ ಶಿಫಾರಸು ಪತ್ರ, ಮಾರಾಟಕ್ಕಾಗಿ ತೆಗೆದುಕೊಂಡ ಹಿಂದಿನ ಸಾಲದ ದಾಖಲೆಗಳು, ಯಾವುದೇ ಬೀದಿ ಬದಿ ಮಾರಾಟಗಾರರ ಸಂಘದ ಸದಸ್ಯತ್ವದ ವಿವರಗಳು ಅಥವಾ ವ್ಯಕ್ತಿಯು ಮಾರಾಟಗಾರನೆಂದು ಸಾಬೀತುಪಡಿಸುವ ಯಾವುದೇ ಇತರ ದಾಖಲೆಗಳು ಅಗತ್ಯವಾಗಿರುತ್ತವೆ.


# ಭವಿಷ್ಯದ ನಾಗರಿಕ ಸೇವಕರು




ಆಡಳಿತದಲ್ಲಿ ಭವಿಷ್ಯದ ಸವಾಲುಗಳನ್ನು ಎದುರಿಸಲು ಸಾಮರ್ಥ್ಯ ವರ್ಧನೆ ಮತ್ತು ಸಜ್ಜುಗೊಳಿಸುವುದು ಕರ್ಮಯೋಗಿ ಅಭಿಯಾನದ ಉದ್ದೇಶವಾಗಿದ್ದು, ದಕ್ಷತೆ ಮತ್ತು ಚುರುಕುತನದೊಂದಿಗೆ ಮನೆ ಬಾಗಿಲಿಗೆ ಸೇವೆಯ ವಿತರಣೆಗೆ ಇದು ಗಮನ ಹರಿಸುತ್ತದೆ.

ಒಂದು ರಾಷ್ಟ್ರ, ಒಂದು ಪಡಿತರ ಚೀಟಿ ಮತ್ತು ರಾಷ್ಟ್ರೀಯ ನೇಮಕಾತಿ ಸಂಸ್ಥೆ (ಎಸ್.ಆರ್.ಎ.), ಬಳಿಕ ಈಗ ಆಡಳಿತಶಾಹಿಗೆ ಕಾಯಕಲ್ಪ ನೀಡಲು ಸರ್ಕಾರ ಕರ್ಮಯೋಗಿ ಅಭಿಯಾನವನ್ನು ರೂಪಿಸಿದೆ. ಇದು ಸಮರ್ಥ ಸಾರ್ವಜನಿಕ ಸೇವಾ ವಿತರಣೆಗಾಗಿ ವೈಯಕ್ತಿಕ ಮತ್ತು ಸಾಂಸ್ಥಿಕ ಮಟ್ಟದಲ್ಲಿ ಸಾಮರ್ಥ್ಯ ವೃದ್ಧಿಸುವ ಉಪಕರಣದ ಸಮಗ್ರ ಸುಧಾರಣೆಯಾಗಿದೆ. ಸಾಮಾನ್ಯ ಜನರಿಗೆ 'ಸುಗಮ ಜೀವನ' ಖಾತರಿಪಡಿಸುವುದು ಮತ್ತು ನವ ಭಾರತಕ್ಕಾಗಿ ಭವಿಷ್ಯದಲ್ಲಿ ಸಿದ್ಧವಾದ ನಾಗರಿಕ ಸೇವೆಯನ್ನು ರಚಿಸುವುದು ಅಭಿಯಾನದ ಉದ್ದೇಶವಾಗಿದೆ.

ನಾಗರಿಕ ಸೇವಕರನ್ನು ಹೆಚ್ಚು ಸೃಜನಶೀಲ, ರಚನಾತ್ಮಕ, ಕಾಲ್ಪನಿಕ, ನಾವೀನ್ಯ, ಸಕ್ರಿಯ, ವೃತ್ತಿಪರ, ಪ್ರಗತಿಪರ, ಶಕ್ತಿಯುತ, ಸಶಕ್ತ, ಪಾರದರ್ಶಕ ಮತ್ತು ತಂತ್ರಜ್ಞಾನ–ಶಕ್ತಗೊಳಿಸುವ ಮೂಲಕ ಭವಿಷ್ಯಕ್ಕಾಗಿ ಅವರನ್ನು ಸಿದ್ಧಪಡಿಸುವ ಉದ್ದೇಶವನ್ನು ಕರ್ಮಯೋಗಿ ಅಭಿಯಾನ ಹೊಂದಿದೆ. ಕರ್ಮಯೋಗಿ ಅಭಿಯಾನ ಸರ್ಕಾರದಲ್ಲಿನ ಮಾನವ ಸಂಪನ್ಮೂಲ ನಿರ್ವಹಣಾ ಪದ್ಧತಿಗೆ ಆಮೂಲಾಗ್ರವಾಗಿ ಸುಧಾರಣೆ ತರುತ್ತದೆ ಎಂದು ಸರಣಿ ಟ್ವೀಟ್‌ಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.





“ಅತ್ಯುನ್ನತ ಗುಣಮಟ್ಟದ, ಸಮಗ್ರತೆಯ ಸಾಧನೆಯನ್ನು ದೃಷ್ಟಿಯಲ್ಲಿ ಹೊಂದಿಲ್ಲದಿದ್ದರೆ ಹೆಸರಿನ ಮೌಲ್ಯದ ಯಾವುದೇ ಸೇವೆಯು ಅಸ್ತಿತ್ವದಲ್ಲಿದೆ ಎಂದು ಹೇಳಿಕೊಳ್ಳುವುದಿಲ್ಲ.”

**ಸರ್ದಾರ್ ವಲ್ಲಭಭಾಯ್ ಪಟೇಲ್**
ಮಾಜಿ ಗೃಹ ಸಚಿವರು

### ಪರಿವರ್ತನೆಯ ಸಮಯ

ನಾಗರಿಕ ಸೇವೆಗಳ ಪರಿವರ್ತನೆಯ ಸಮಯವಾಗಿದ್ದ 1947ರ ಏಪ್ರಿಲ್ 21ರಂದು ಐಎಎಸ್ ಪ್ರೊಬೆಷನರ್ ಗಳನ್ನು ಉದ್ದೇಶಿಸಿ ದೇಶದ ಮೊದಲ ಗೃಹ ಸಚಿವ ಸರ್ದಾರ್ ವಲ್ಲಭಭಾಯಿ ಪಟೇಲ್ ಮಾತನಾಡಿ: “ಆಡಳಿತ ಅತ್ಯಂತ ನಿಷ್ಪಕ್ಷಪಾತ ಮತ್ತು ಭ್ರಷ್ಟತೆಗೀಡಾಗದಂತೆ ಕಾಪಾಡಿಕೊಳ್ಳಲು ನಾನು ನಿಮಗೆ ಸಲಹೆ ನೀಡುತ್ತೇನೆ. ಒಬ್ಬ ನಾಗರಿಕ ಸೇವಕನು ರಾಜಕೀಯದಲ್ಲಿ ಪಾಲ್ಗೊಳ್ಳಬಾರದು ಮತ್ತು ಭಾಗಿಯಾಗಬಾರದು. ಕೋಮು ಸಂಘರ್ಷಗಳಲ್ಲಿ ಅವನು ತನ್ನನ್ನು ತೊಡಗಿಸಿಕೊಳ್ಳಬಾರದು. ಈ ಎರಡೂ ಧರ್ಮಮಾರ್ಗಗಳಿಂದ ವಿಮುಖವಾಗುವುದು ಸಾರ್ವಜನಿಕ ಸೇವೆಯನ್ನು ಕುಗ್ಗಿಸುತ್ತದೆ ಮತ್ತು ಅದರ ಘನತೆಯನ್ನು ಕಡಿಮೆ ಮಾಡುತ್ತದೆ. ಅದೇ ರೀತಿ, ಅತ್ಯುನ್ನತ ಗುಣಮಟ್ಟದ ಸಮಗ್ರತೆಯ ಸಾಧನೆಯನ್ನು ಗಮನದಲ್ಲಿರಿಸಿಕೊಳ್ಳದಿದ್ದರೆ ಹೆಸರಿನ ಮೌಲ್ಯದ ಯಾವುದೇ ಸೇವೆಯು ಅಸ್ತಿತ್ವದಲ್ಲಿದೆ ಎಂದು ಹೇಳಲಾಗುವುದಿಲ್ಲ” ಎಂದು ಹೇಳಿದ್ದರು.



## ಸಾಮರ್ಥ್ಯವರ್ಧನೆ ಆಯೋಗದ ಪಾತ್ರ

- ವಾರ್ಷಿಕ ಸಾಮರ್ಥ್ಯ ವೃದ್ಧಿ ಯೋಜನೆಗಳನ್ನು ಅನುಮೋದಿಸುವಲ್ಲಿ ಪ್ರಧಾನಮಂತ್ರಿ ಸಾರ್ವಜನಿಕ ಮಾನವ ಸಂಪನ್ಮೂಲ ಮಂಡಳಿಗೆ ಸಹಾಯ ಮಾಡುವುದು
- ನಾಗರಿಕ ಸೇವೆಗಳ ಸಾಮರ್ಥ್ಯವರ್ಧನೆಯ ಎಲ್ಲಾ ಕೇಂದ್ರೀಯ ತರಬೇತಿ ಸಂಸ್ಥೆಗಳ ಮೇಲೆ ಕ್ರಿಯಾತ್ಮಕ ಮೇಲ್ವಿಚಾರಣೆಯನ್ನು ನಡೆಸುವುದು
- ಆಂತರಿಕ ಮತ್ತು ಬಾಹ್ಯ ಬೋಧಕರು ಮತ್ತು ಸಂಪನ್ಮೂಲ ಕೇಂದ್ರಗಳನ್ನು ಒಳಗೊಂಡಂತೆ ಹಂಚಿಕೆಯ ಕಲಿಕಾ ಸಂಪನ್ಮೂಲಗಳನ್ನು ರೂಪಿಸಲಾಗುವುದು
- ಸಾಮರ್ಥ್ಯವರ್ಧನೆ ಯೋಜನೆಗಳ ಅನುಷ್ಠಾನ ಮತ್ತು ಮೇಲ್ವಿಚಾರಣೆಯ ಸಮನ್ವಯ
- ತರಬೇತಿ ಮತ್ತು ಸಾಮರ್ಥ್ಯವರ್ಧನೆ ಕುರಿತಂತೆ ಶಿಫಾರಸುಗಳನ್ನು ಮಾಡಲು
- ವೃತ್ತಿ ಜೀವನದ ಮಧ್ಯೆ ಸಾಮಾನ್ಯ ತರಬೇತಿ ಕಾರ್ಯಕ್ರಮಗಳಿಗೆ ನಿಯಮ ರೂಪಿಸಲು
- ಮಾನವ ಸಂಪನ್ಮೂಲ ನಿರ್ವಹಣೆಯ ಕ್ಷೇತ್ರಗಳಲ್ಲಿ ಅಗತ್ಯವಿರುವ ನೀತಿ ಮಧ್ಯಸ್ಥಿಕೆಗಳನ್ನು ಸೂಚಿಸಲು

### ಆರ್ಥಿಕ ಪರಿಣಾಮ

- ಎನ್.ಪಿ.ಸಿ.ಎಸ್.ಸಿ.ಬಿ. ಗಾಗಿ ಒಂದು ವಿಶೇಷ ಉದ್ದೇಶದ ವಾಹಕ (ಎಸ್.ಪಿ.ವಿ.) ಸ್ಥಾಪಿಸಲಾಗುವುದು. ಇದು ಐಗಾಟ್ - ಕರ್ಮಯೋಗಿ ವೇದಿಕೆ ನಿರ್ವಹಿಸುವುದು.
- 46 ಲಕ್ಷ ಸರ್ಕಾರಿ ನೌಕರರನ್ನು ವ್ಯಾಪ್ತಿಗೆ ಒಳಪಡಿಸಲು, ಐದು ವರ್ಷಗಳಲ್ಲಿ 2020-21 ರಿಂದ 2024-25ರವರೆಗೆ 510.86 ಕೋಟಿ ರೂ. ವೆಚ್ಚಮಾಡಲಾಗುವುದು.
- ಎಸ್.ಪಿ.ವಿ. ಸರ್ಕಾರದ ಪರವಾಗಿ ಎಲ್ಲ ಬೌದ್ಧಿಕ ಆಸ್ತಿಯ ಹಕ್ಕುಗಳನ್ನು ಹೊಂದಿರುತ್ತದೆ.
- ಐ ಗಾಟ್-ಕರ್ಮಯೋಗಿ ವೇದಿಕೆ ಬಳಕೆದಾರರುಗಳ ಸಾಧನೆಯ ಮೌಲ್ಯಮಾಪನಕ್ಕಾಗಿ ಸೂಕ್ತ ನಿಗಾ ಮತ್ತು ಮೌಲ್ಯಮಾಪನ ಚೌಕಟ್ಟನ್ನು ಸ್ಥಾಪಿಸಲಾಗುವುದು.

### ಸಾಮರ್ಥ್ಯವರ್ಧನೆ ಯೋಜನೆ

ಇದೇ ರೀತಿಯ ಆಲೋಚನಾ ಪ್ರಕ್ರಿಯೆಯೊಂದಿಗೆ, ಪ್ರಧಾನ ಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆ ಸಾಂಸ್ಥಿಕ ಚೌಕಟ್ಟಿನೊಂದಿಗೆ ನಾಗರಿಕ ಸೇವೆಗಳ ಸಾಮರ್ಥ್ಯವರ್ಧನೆಗಾಗಿ ರಾಷ್ಟ್ರೀಯ ಕಾರ್ಯಕ್ರಮವನ್ನು (ಎನ್‌ಪಿಸಿಎಸ್‌ಸಿಬಿ) ಪ್ರಾರಂಭಿಸಲು ಅನುಮೋದನೆ ನೀಡಿದೆ.

ಎನ್‌ಪಿಸಿಎಸ್‌ಸಿಬಿಯನ್ನು ನಾಗರಿಕ ಸೇವಕರ ಸಾಮರ್ಥ್ಯವರ್ಧನೆಗೆ ಅಡಿಪಾಯ ಹಾಕಲು ಎಚ್ಚರಿಕೆಯಿಂದ ವಿನ್ಯಾಸಗೊಳಿಸಲಾಗಿದೆ, ಇದರಿಂದ ಅವರು ಭಾರತೀಯ ಸಂಸ್ಕೃತಿ ಮತ್ತು ಸಂವೇದನೆಗಳಲ್ಲಿ ಭದ್ರವಾಗಿರುತ್ತಾರೆ ಮತ್ತು ಅವರ ಬೇರುಗಳೊಂದಿಗೆ ಸಂಪರ್ಕದಲ್ಲಿರುತ್ತಾರೆ. ಸಮಗ್ರ ಸರ್ಕಾರಿ ಆನ್‌ಲೈನ್ ತರಬೇತಿ– ಐಗಾಟ್ ಕರ್ಮಯೋಗಿ ವೇದಿಕೆಯನ್ನು ಸ್ಥಾಪಿಸುವ ಮೂಲಕ ಕಾರ್ಯಕ್ರಮವನ್ನು ತಲುಪಿಸಲಾಗುವುದು. “ಇದು ಸರ್ಕಾರದ ಅತಿದೊಡ್ಡ ಮಾನವ ಸಂಪನ್ಮೂಲ ಅಭಿವೃದ್ಧಿ ಸುಧಾರಣೆಯಾಗಿದೆ” ಎಂದು ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆ ಸಚಿವ ಪ್ರಕಾಶ್ ಜಾವಡೇಕರ್ ಹೇಳಿದ್ದಾರೆ.

ಉದ್ದೇಶಿತ ಐಗಾಟ್–ಕರ್ಮಯೋಗಿ ವೇದಿಕೆಯನ್ನು ಬೆಂಬಲಿಸಲು, ಎರಡು ಕೋಟಿ ಅಧಿಕಾರಿಗಳ ಸಾಮರ್ಥ್ಯವರ್ಧನೆಗಾಗಿ ಅತ್ಯಾಧುನಿಕ ಸುಸಜ್ಜಿತ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸುವ ಪ್ರಯತ್ನಗಳು ನಡೆಯುತ್ತಿವೆ. ವೇದಿಕೆ ವಿಷಯಕ್ಕಾಗಿ ಒಂದು ಚಲನಶೀಲ ಮತ್ತು ವಿಶ್ವ ದರ್ಜೆಯ ಮಾರುಕಟ್ಟೆ ಸ್ಥಳವಾಗಿ ವಿಕಸನಗೊಳ್ಳುವ ನಿರೀಕ್ಷೆಯಿದೆ, ಅಲ್ಲಿ ಎಚ್ಚರಿಕೆಯಿಂದ ಸಂಗ್ರಹಿತ ಮತ್ತು ಪರಾಮರ್ಶಿತ ಡಿಜಿಟಲ್ ಇ–ಕಲಿಕೆ ವಿಷಯಗಳು ಲಭ್ಯವಾಗಲಿವೆ.

### ಇದು ‘ಆರಂಭ’ ದೊಂದಿಗೆ ಪ್ರಾರಂಭ

ಮಾನವ ಸಂಪನ್ಮೂಲ ನಿರ್ವಹಣೆ ಪ್ರಧಾನಿ ಮತ್ತು ಸರ್ಕಾರದ ಪ್ರಮುಖ ಆದ್ಯತೆಗಳಲ್ಲಿ ಒಂದಾಗಿದೆ. ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆ ಮತ್ತು ಪಿಂಚಣಿ ಖಾತೆ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಅವರ ಪ್ರಕಾರ, 2017 ರಲ್ಲಿ ಮಸ್ಸೂರಿಯಲ್ಲಿನ ನಾಗರಿಕ ಸೇವಾ ಅಕಾಡೆಮಿಗೆ ಪ್ರಧಾನಿ ಭೇಟಿಯ ಸಂದರ್ಭದಲ್ಲಿ ಈ ಸುಧಾರಣೆಗಳಿಗೆ ಅಡಿಪಾಯ ಹಾಕಲಾಯಿತು. ತರಬೇತುದಾರರು ಮತ್ತು ಪ್ರಶಿಕ್ಷಣಾರ್ಥಿಗಳೊಂದಿಗೆ ಹಲವು ಸುತ್ತಿನ ಚರ್ಚೆಗಳ ನಂತರ, ಪ್ರಾಯೋಗಿಕ ಯೋಜನೆಯ ‘ಆರಂಭ’ ಗೆ ಅಡಿಪಾಯ ಹಾಕಲಾಯಿತು. ಯೋಜನೆಯ ರೀತ್ಯ, ಭಾರತೀಯ ಸಂಸ್ಕೃತಿ ಮತ್ತು ಸಂಪ್ರದಾಯಕ್ಕೆ ಅನುಗುಣವಾಗಿ ಮತ್ತು ಪ್ರಸ್ತುತ ಅಗತ್ಯಕ್ಕೆ ಅನುಗುಣವಾಗಿ ಅಸ್ತಿತ್ವದಲ್ಲಿರುವ ತರಬೇತಿಯ ಮಾದರಿಯನ್ನು ಬದಲಾಯಿಸಲು ನಿರ್ಧರಿಸಲಾಯಿತು. ■



## ನಿಮ್ಮ ಖಾಕಿ ಸಮವಸ್ತ್ರದ ಗೌರವ ಎಂದಿಗೂ ಕುಂದಿಸಬೇಡಿ: ಪ್ರಧಾನಿ

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ವಿಡಿಯೋ ಕಾನ್ಫರೆನ್ಸ್ ಮೂಲಕ ಭಾರತೀಯ ಪೊಲೀಸ್ ಸೇವೆಯ (ಐಪಿಎಸ್) ಪ್ರೊಬೆಷನರಿಗಳೊಂದಿಗೆ ಸಂವಾದ ನಡೆಸುವ ವೇಳೆ, ಎಂದಿಗೂ ಖಾಕಿ ಸಮವಸ್ತ್ರದ ಗೌರವ ಕುಂದಿಸಬೇಡಿ ಎಂದು ಆಗ್ರಹಿಸಿದರು.

ಸರ್ದಾರ್ ವಲ್ಲಭಭಾಯಿ ಪಟೇಲ್ ರಾಷ್ಟ್ರೀಯ ಪೊಲೀಸ್ ಅಕಾಡಮಿಯಲ್ಲಿ 2020ರ ಸೆಪ್ಟೆಂಬರ್ 4ರಂದು ನಡೆದ “ದೀಕ್ಷಾಂತ್ ಪೆರೇಡ್ ಕಾರ್ಯಕ್ರಮ”ದಲ್ಲಿ ಮಾತನಾಡಿದ ಪ್ರಧಾನಿ, ಪ್ರೊಬೆಷನರಿಗಳು ತಮ್ಮ ಸಮವಸ್ತ್ರದ ಬಗ್ಗೆ ಹೆಮ್ಮೆ ಪಡಬೇಕೇ ಹೊರತು ಅದರ ಅಧಿಕಾರ ಚಲಾಯಿಸುವುದಲ್ಲ ಎಂದರು. “ನಿಮ್ಮ ಖಾಕಿ ಸಮವಸ್ತ್ರದ ಗೌರವ ಎಂದಿಗೂ ಕಳೆಯಬೇಡಿ ಎಂದ ಅವರು, ಕೋವಿಡ್–19ರ ಸಮಯದಲ್ಲಿ ಪೊಲೀಸರು ಮಾಡಿದ ಉತ್ತಮ ಕಾರ್ಯ ಜನರ ಮನದಲ್ಲಿ ಅಚ್ಚಳಿಯದೇ ಉಳಿಯಲಿದ್ದು, ಖಾಕಿಯ ಮತ್ತೊಂದು ಮಾನವೀಯ ಮುಖ ಬೆಳಕಿಗೆ ಬಂದಿತು” ಎಂದರು.

“ಇಲ್ಲಿಯವರೆಗೆ ನೀವು ರಕ್ಷಣಾತ್ಮಕ ವಾತಾವರಣದಲ್ಲಿ ಇಲ್ಲಿ ತರಬೇತಿ ಪಡೆದಿದ್ದೀರಿ. ಆದರೆ ನೀವು ಅಕಾಡಮಿಯಿಂದ ಹೊರಬಂದ ತಕ್ಷಣ ಬೆಳಗಾಗುವುದರಲ್ಲಿ ಪರಿಸ್ಥಿತಿ ಬದಲಾಗುತ್ತದೆ,. ನಿಮ್ಮ ಬಗೆಗಿನ ವರ್ತನೆ ಬದಲಾಗುತ್ತದೆ. ಹೆಚ್ಚು ಜಾಗೃತರಾಗಿರಿ, ಮೊದಲ ಅನಿಸಿಕೆ ಕೊನೆಯ ಅನಿಸಿಕೆಯಾಗುತ್ತದೆ. ನಿಮ್ಮನ್ನು ಎಲ್ಲಿಗೆ ವರ್ಗವಾದರೂ ಅಲ್ಲಿ ನಿಮ್ಮ ಛಾಪು ಹಿಂಬಾಲಿಸುತ್ತದೆ.” ಎಂದು ಪ್ರಧಾನಿ ಹೇಳಿದರು.

**ಕೇಂದ್ರ ಗೃಹ ಸಚಿವ ಅಮಿತ್ ಶಾ ಟ್ವೀಟ್‌ನಲ್ಲಿ:** “ರಾಷ್ಟ್ರದ ಸುರಕ್ಷತೆ ಮತ್ತು ಸಮಗ್ರತೆಯನ್ನು ಖಾತರಿಪಡಿಸುವಾಗ ಅತ್ಯಂತ ಸಮರ್ಪಣೆಯೊಂದಿಗೆ ಅವರು ಸೇವೆ ಸಲ್ಲಿಸಲಿ. ಸೇವೆಯ ಬಗೆಗಿನ ಅವರ ಬದ್ಧತೆಯು ನಮ್ಮ ಯುವಕರಿಗೆ ಭಾರತೀಯ ಪೊಲೀಸ್ ಸೇವೆಗೆ ಸೇರಲು ಪ್ರೇರಣೆ ನೀಡುತ್ತದೆ ಎಂಬ ವಿಶ್ವಾಸ ನನಗಿದೆ’ ಎಂದು ತಿಳಿಸಿದ್ದಾರೆ.

ಪ್ರೊಬೆಷನರ್‌ಗಳೊಂದಿಗೆ ಪ್ರಧಾನಮಂತ್ರಿಯವರ ಸಂವಾದಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

# ಎಚ್‌ಎಸ್‌ಟಿಡಿವಿ ಯಶಸ್ವಿಯಾಗಿ ಉಡಾವಣೆ ಮಾಡಿದ ನಾಲ್ಕನೇ ರಾಷ್ಟ್ರ ಭಾರತ

ಹೈಪರ್ಸಾನಿಕ್ ಕ್ರೂಸ್ ವಾಹನವನ್ನು ಉಡಾವಣೆ ಮಾಡುವುದರೊಂದಿಗೆ, ದೇಶವು ರಕ್ಷಣಾ ಕ್ಷೇತ್ರದಲ್ಲಿ ಪ್ರಗತಿಯ ದಾಪುಗಾಲಿಟ್ಟಿದೆ

ಹೈಪರ್ಸಾನಿಕ್ ತಂತ್ರಜ್ಞಾನ ಪ್ರಾತ್ಯಕ್ಷಿಕೆ ವಾಹಕ (ಎಚ್‌ಎಸ್‌ಟಿಡಿವಿ) ಯ ಪರೀಕ್ಷಾರ್ಥ ಉಡಾವಣೆಯೊಂದಿಗೆ ಹೈಪರ್ಸಾನಿಕ್ ಏರ್-ಬ್ರೀಥಿಂಗ್ ಸ್ಕ್ರ್ಯಾಮ್ ಜೆಟ್ ತಂತ್ರಜ್ಞಾನವನ್ನು ಪ್ರದರ್ಶಿಸುವ ಹೈಪರ್ಸಾನಿಕ್ ಕ್ರೂಸ್ ವಾಹನದ ಪರೀಕ್ಷಾರ್ಥ ಉಡಾವಣೆ ಯಶಸ್ವಿಯಾಗಿದೆ. ಹೈಪರ್ಸಾನಿಕ್ ಕಂಬಸ್ಟನ್ ನಿರಂತರವಾಗಿದ್ದು ಕ್ರೂಸ್ ವಾಹನವು ತನ್ನ ಅಪೇಕ್ಷಿತ ಹಾರಾಟದ ಹಾದಿಯಲ್ಲಿ ಶಬ್ದದ ವೇಗಕ್ಕಿಂತ ಆರು ಪಟ್ಟು ವೇಗದಲ್ಲಿ ಸಾಗಿತು, ಅಂದರೆ ಸೆಕೆಂಡಿಗೆ ಸುಮಾರು 02 ಕಿ.ಮೀ.

ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಓ) ಎಚ್‌ಎಸ್‌ಟಿಡಿವಿ ಹಾರಾಟದ ಪ್ರಾತ್ಯಕ್ಷಿಕೆಯನ್ನು 2020ರ ಸೆಪ್ಟೆಂಬರ್ 7ರಂದು ಒಡಿಶಾ ಕರಾವಳಿಯ ವ್ಹೀಲರ್ ದ್ವೀಪದ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಉಡಾವಣಾ ಕೇಂದ್ರದಿಂದ ಉಡಾವಣೆ ಮಾಡಿತು.

ಸ್ಕ್ರ್ಯಾಮ್ ಜೆಟ್ ಎಂಜಿನ್ ಸೇರಿದಂತೆ ಉಡಾವಣಾ ಮತ್ತು ಕ್ರೂಸ್ ವಾಹನದ ಮಾನದಂಡಗಳನ್ನು ಅನೇಕ ಟ್ರ್ಯಾಕಿಂಗ್ ರಾಡಾರ್‌ಗಳು, ಎಲೆಕ್ಟ್ರೋ-ಆಪ್ಟಿಕಲ್ ಸಿಸ್ಟಂಗಳು ಮತ್ತು ಟೆಲಿಮೆಟ್ರಿ ನಿಲ್ದಾಣಗಳು ನಿಗಾ ವಹಿಸಿದ್ದವು.

ಋಜುವಾತಾದ ಘನ ರಾಕೆಟ್ ಮೋಟರ್ ಬಳಸಿ ಇದನ್ನು ಉಡಾಯಿಸಲಾಯಿತು, ಅದನ್ನು 30 ಕಿಲೋಮೀಟರ್ ಎತ್ತರಕ್ಕೆ ಕೊಂಡೊಯ್ಯಲಾಯಿತು, ಅಲ್ಲಿ ವಾಯುಬಲ ವೈಜ್ಞಾನಿಕ ಶಾಖ ಕವಚಗಳನ್ನು ಹೈಪರ್ಸಾನಿಕ್ ಮ್ಯಾಕ್ ಸಂಖ್ಯೆಯಲ್ಲಿ ಬೇರ್ಪಡಿಸಲಾಯಿತು. ಕ್ರೂಸ್ ವಾಹಕವು ಉಡಾವಣಾ ವಾಹಕದಿಂದ ಬೇರ್ಪಟ್ಟಿತು ಮತ್ತು ಏರ್ ಬ್ರೀಥಿಂಗ್ ಯೋಜಿಸಿದಂತೆ ತೆರೆಯಲ್ಪಟ್ಟಿತು. ಹೈಪರ್ಸೋನಿಕ್ ದಹನವು ಸುಸ್ಥಿರ ಮತ್ತು ಕ್ರೂಸ್ ವಾಹಕವು ಅದರ ಅಪೇಕ್ಷಿತ ಹಾರಾಟದ ಹಾದಿಯಲ್ಲಿ ಶಬ್ದಗಳ ವೇಗಕ್ಕಿಂತ ಆರು ಪಟ್ಟು ವೇಗದಲ್ಲಿ ಸಾಗಿತು. ■




"ಡಿಆರ್‌ಡಿಓ ದೇಶೀಯವಾಗಿ ಅಭಿವೃದ್ಧಿಪಡಿಸಲಾದ ಸ್ಕ್ರ್ಯಾಮ್ ಜೆಟ್ ಸಂಚಾಲನಾ ವ್ಯವಸ್ಥೆ ಬಳಸಿ ಯಶಸ್ವಿಯಾಗಿ ಹೈಪರ್ಸಾನಿಕ್ ತಂತ್ರಜ್ಞಾನ ಪ್ರದರ್ಶಕ ವಾಹಕದ ಪರೀಕ್ಷಾರ್ಥ ಉಡಾವಣೆ ನಡೆಸಿದೆ. ಪ್ರಧಾನಮಂತ್ರಿಯವರ ಆತ್ಮನಿರ್ಭರ ಭಾರತದ ಕಲ್ಪನೆಯನ್ನು ಸಾಕಾರ ಮಾಡುವ ನಿಟ್ಟಿನಲ್ಲಿ ಈ ಹೆಗ್ಗುರುತಿನ ಸಾಧನೆಗೆ ಡಿಆರ್‌ಡಿಓಗೆ ಅಭಿನಂದನೆ ಸಲ್ಲಿಸುತ್ತೇನೆ.

**ರಾಜನಾಥ್ ಸಿಂಗ್**
ರಕ್ಷಣಾ ಸಚಿವರು"

## ಹೈಪರ್ಸಾನಿಕ್ ತಂತ್ರಜ್ಞಾನ ಎಂದರೇನು?

ಹೈಪರ್ಸಾನಿಕ್ ವೇಗದಲ್ಲಿ ಪ್ರಯಾಣಿಸಲು ರಾಕೆಟ್‌ಗಳು ಮತ್ತು ಕ್ಷಿಪಣಿಗಳನ್ನು ಶಕ್ತಗೊಳಿಸುವ ತಂತ್ರಜ್ಞಾನವನ್ನು ಹೈಪರ್ಸಾನಿಕ್ ತಂತ್ರಜ್ಞಾನವೆಂದು ಪರಿಗಣಿಸಲಾಗುತ್ತದೆ. ಶಬ್ದದ ವೇಗಕ್ಕಿಂತ ಐದು ಪಟ್ಟು ಹೆಚ್ಚಿನ ವೇಗವನ್ನು (ಮ್ಯಾಕ್ 5) ಹೆಚ್ಚಾಗಿ ಹೈಪರ್ಸಾನಿಕ್ ಎಂದು ಕರೆಯಲಾಗುತ್ತದೆ. ಹೈಪರ್ಸಾನಿಕ್ ವೇಗವನ್ನು ಸೂಪರ್ಸಾನಿಕ್ ಆನ್ ಸ್ಟೀರಾಯ್ಡ್ ಎಂದೂ ಕರೆಯಲಾಗುತ್ತದೆ ಮತ್ತು ಇದು ಅತ್ಯಂತ ವೇಗವಾದದ್ದು ಎಂದು ಪರಿಗಣಿಸಲಾಗುತ್ತದೆ. ಸೂಪರ್ಸಾನಿಕ್ ಪ್ರಯಾಣವು ಶಬ್ದದ ವೇಗವನ್ನು ಮೀರುವ ಪ್ರಯಾಣದ ದರವಾಗಿದೆ (ಮ್ಯಾಕ್ 1). ಡಿಆರ್‌ಡಿಓದ ಉಡಾವಣೆಯ ಹೈಪರ್ಸಾನಿಕ್ ವಾಹಕ ಮ್ಯಾಕ್ 6 ರ ವೇಗವನ್ನು ಪಡೆಯಿತು.

## ಭಾರತಕ್ಕೆ ಹೇಗೆ ಉಪಯುಕ್ತ?

- ಈ ತಂತ್ರಜ್ಞಾನವನ್ನು ರಾಕೆಟ್‌ಗಳು ಮತ್ತು ಕ್ಷಿಪಣಿಗಳಿಗೆ ಬಳಸಬಹುದು. ಈ ತಂತ್ರಜ್ಞಾನ ಕಡಿಮೆ ಸಮಯದಲ್ಲಿ ಉದ್ದೇಶಿತ ಗುರಿಯ ಮೇಲೆ ದಾಳಿ ಮಾಡಲು ನೆರವಾಗುತ್ತದೆ.
- ವಿಶೇಷವಾಗಿ ರಾಕೆಟ್ ವಾತಾವರಣದಲ್ಲಿ ಇರುವವರೆಗೂ ಇಂಧನವನ್ನು ಉಳಿಸಲು ಇದು ಸಹಾಯ ಮಾಡುತ್ತದೆ. ಆದ್ದರಿಂದ ವಾಹಕ ಹಗುರವಾಗಿರುತ್ತದೆ.

# ಸ್ವಚ್ಛ ಭಾರತದ ಕನಸಿನ ಸಾಕಾರ

**10 ಕೋಟಿಗೂ ಹೆಚ್ಚು ಶೌಚಾಲಯ ಮತ್ತು ಪ್ರತಿಶತ 100ರಷ್ಟು ಬಯಲು ಶೌಚ ಮುಕ್ತ (ಒಡಿಎಫ್) ಗ್ರಾಮಗಳೊಂದಿಗೆ ದೇಶ ಕೊಳಕುಮುಕ್ತ ಭಾರತದ ಸವಾಲಿಗೆ ಸಜ್ಜಾಗಿದೆ.**




**ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ನೈರ್ಮಲ್ಯದ ಮೇಲೆ ಗಮನ ಹರಿಸಿ, ಸಾರ್ವತ್ರಿಕ ನೈರ್ಮಲ್ಯ ಸಾಧನೆಗಾಗಿ 2014ರ ಅಕ್ಟೋಬರ್ 2ರಂದು ಸ್ವಚ್ಛ ಭಾರತ ಅಭಿಯಾನಕ್ಕೆ ಚಾಲನೆ ನೀಡಿದರು. ಬೃಹತ್ ಪ್ರಮಾಣದಲ್ಲಿ ಸಮುದಾಯದ ಸ್ವಭಾವದಲ್ಲಿ ಬದಲಾವಣೆ, ಗೃಹ ಮತ್ತು ಸಮುದಾಯ ಶೌಚಾಲಯಗಳ ನಿರ್ಮಾಣ ಮತ್ತು ಶೌಚಾಲಯ ನಿರ್ಮಾಣ ಮತ್ತು ಬಳಕೆಯ ಕುರಿತಂತೆ ಮೇಲ್ವಿಚಾರಣೆ ಮಾಡುವ ಕಾರ್ಯವಿಧಾನಗಳನ್ನು ಸ್ಥಾಪಿಸುವ ಮೂಲಕ 2019ರ ಹೊತ್ತಿಗೆ ಗ್ರಾಮೀಣ ಪ್ರದೇಶಗಳನ್ನು ಬಯಲು ಶೌಚಮುಕ್ತಗೊಳಿಸುವ ಗುರಿಯೊಂದಿಗೆ ಇದನ್ನು ರಾಷ್ಟ್ರವ್ಯಾಪಿ ಅಭಿಯಾನವಾಗಿ ಜಾರಿ ಮಾಡಲಾಯಿತು. ಮಹತ್ವಾಕಾಂಕ್ಷೆಯ ಈ ಯೋಜನೆ ಗ್ರಾಮೀಣ ಭಾರತದಲ್ಲಿ 100 ದಶಲಕ್ಷ ಶೌಚಾಲಯಗಳ ನಿರ್ಮಾಣದೊಂದಿಗೆ ಈಗ ದೊಡ್ಡ ಯಶಸ್ಸು ಸಾಧಿಸಿದ್ದು, ದೇಶ 2019ರ ಅಕ್ಟೋಬರ್ 2ರಂದು ಬಯಲು ಶೌಚಮುಕ್ತ (ಒಡಿಎಫ್) ಎಂದು ಘೋಷಿಸಿಕೊಂಡಿತು.**

ಈಗ ನಗರ ಪ್ರದೇಶಗಳ ಮನೆಗಳಲ್ಲಿ ಶೌಚಾಲಯ ನಿರ್ಮಾಣವಿರಲಿ ಅಥವಾ ಸಾರ್ವಜನಿಕ ಶೌಚಾಲಯ ನಿರ್ಮಾಣವೇ ಇರಲಿ ಯಶಸ್ಸಿನ ದರ ಗುರಿಗಿಂತ ಹೆಚ್ಚಾಗಿದೆ. ಗೃಹ ಶೌಚಾಲಯಗಳ ನಿರ್ಮಾಣದ ಯಶಸ್ಸಿನ ದರ ಶೇ. 105 ತಲುಪಿದೆ. ಸಮುದಾಯ ಮತ್ತು ಸಾರ್ವಜನಿಕ ಶೌಚಾಲಯಗಳ ನಿರ್ಮಾಣದ ಸಾಧನೆ ಶೇ.117 ಫಲ ನೀಡಿದೆ.

ಮಹಾತ್ಮಾ ಗಾಂಧಿಯವರ 150ನೇ ಜನ್ಮ ದಿನಾಚರಣೆಯನ್ನು 2019ರ ಅಕ್ಟೋಬರ್ 2 ರಂದು ಕೊಳಕು ಮುಕ್ತ ಭಾರತವಾಗಿ ಆಚರಿಸಲು ಮತ್ತು ಹಳ್ಳಿಗಳಲ್ಲಿ ಮನೆಗಳಲ್ಲಿ ಶೌಚಾಲಯಗಳನ್ನು ನಿರ್ಮಿಸುವ ಮೂಲಕ ಹಳ್ಳಿಗಳನ್ನು ಬಯಲು ಶೌಚ ಮುಕ್ತ (ಒಡಿಎಫ್) ಮಾಡುವಂತೆ ಪ್ರಧಾನಮಂತ್ರಿ 2014 ರ ಆಗಸ್ಟ್ 15 ರಂದು ಇಡೀ ರಾಷ್ಟ್ರವನ್ನು ಪ್ರಚೋದಿಸಿದ್ದರು.

ಪ್ರಧಾನಮಂತ್ರಿಯವರ ಈ ಸಂಕಲ್ಪವು ಈಗ ದೇಶಾದ್ಯಂತ ಒಂದು ಜನಾಂದೋಲನವಾಗಿದೆ. ಈಗ, ಒಡಿಎಫ್ ವಿಭಾಗದಲ್ಲಿ ಎಲ್ಲಾ ಗ್ರಾಮಗಳೂ ಬಂದ ನಂತರ, ಸರ್ಕಾರವು ಒಡಿಎಫ್ + ಕಡೆಗೆ ಸಾಗುತ್ತಿದೆ, ಇದು ನಗರಗಳು ಮತ್ತು ಹಳ್ಳಿಗಳಲ್ಲಿ ಉತ್ತಮವಾಗಿ ನಿರ್ವಹಿಸಲ್ಪಟ್ಟ ಮತ್ತು ಸ್ವಚ್ಛವಾದ ಶೌಚಾಲಯಗಳನ್ನು ಖಾಸಗಿಯಾಗಿ ಮತ್ತು ಸಾರ್ವಜನಿಕವಾಗಿ ವರ್ಗೀಕರಿಸುವ ಗುರಿಯನ್ನು ಹೊಂದಿದೆ. ರೈಲ್ವೆ ಮಾರ್ಗಗಳನ್ನು ಸ್ವಚ್ಛಗೊಳಿಸುವುದ ಜೊತೆಗೆ, ರೈಲುಗಳಲ್ಲಿ ಜೈವಿಕ ಶೌಚಾಲಯಗಳನ್ನು ಒದಗಿಸುವ ಅವಕಾಶ ಕಲ್ಪಿಸಲಾಗುತ್ತಿದೆ.

ಈ ಆಂದೋಲನದ ಬಗ್ಗೆ ಜನರಲ್ಲಿ ಉತ್ತೇಜನ ಮೂಡಿಸಲು, ಪ್ರಧಾನಮಂತ್ರಿಯವರು ತಮ್ಮ ಸಕ್ರಿಯ ದೃಷ್ಟಿಕೋನದೊಂದಿಗೆ ಸದಾ ಸ್ವಚ್ಛ ಭಾರತದ ಯಶಸ್ಸಿನ ಬಗ್ಗೆ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಮಾತನಾಡುತ್ತಾರೆ. ಅದು ಕೆಂಪುಕೋಟೆಯ ಮೇಲಿಂದ ಮಾಡುವ ಸ್ವಾತಂತ್ರ್ಯ ದಿನಾಚರಣೆಯ ಭಾಷಣವೇ ಆಗಿರಲಿ ಅಥವಾ ಅಮೆರಿಕದ 'ಹೌಡಿ ಮೋದಿ' ಕಾರ್ಯಕ್ರಮವೇ ಆಗಿರಲಿ, ಪ್ರಧಾನಮಂತ್ರಿಯವರು ಸದಾ ಸ್ವಚ್ಛ ಭಾರತ ಅಭಿಯಾನದ ಯಶಸ್ಸನ್ನು ಮತ್ತು ಇದರ ಯಶಸ್ಸಿಗೆ ದೇಶದ ಜನರ ಪಾತ್ರವನ್ನು ಪ್ರಸ್ತಾಪಿಸುತ್ತಾರೆ.

ಪ್ರಧಾನಮಂತ್ರಿಯವರು ಸ್ವಚ್ಛ ಭಾರತ ಅಭಿಯಾನದಲ್ಲಿ ಜನರು ಪಾಲ್ಗೊಳ್ಳುವಂತೆ ಮಾಡಲು ಉದಾಹರಣೆಗಳನ್ನು ನೀಡುವ ಬಗ್ಗೆ ನಂಬಿಕೆ ಇಟ್ಟಿದ್ದರು. ಅವರು 2014ರ ಅಕ್ಟೋಬರ್ 2ರಂದು ನವದೆಹಲಿಯ ವಾಲ್ಮೀಕಿ ಸದನದಲ್ಲಿ ತಾವೇ ಸ್ವತಃ ಕಸಪೊರಕೆ ಹಿಡಿದು ರಸ್ತೆ ಗುಡಿಸಿ ಸ್ವಚ್ಛ ಮಾಡಿ ಜನರಿಗೆ ಅದನ್ನು ಅನುಸರಿಸುವಂತೆ ಪ್ರೋತ್ಸಾಹಿಸುವ ಮೂಲಕ ಈ ಅಭಿಯಾನಕ್ಕೆ ಚಾಲನೆ ನೀಡಿದರು. ಅದು ಜನಾಂದೋಲನವಾಗಿ ರೂಪುಗೊಂಡು ಜನರು ಮತ್ತು ಗಣ್ಯರು ನಿಯಮಿತವಾಗಿ ಈ ಅಭಿಯಾನದಲ್ಲಿ ಭಾಗಿಯಾದರು.

**ವಿದೇಶಗಳಲ್ಲಿ ಕೂಡ ಸ್ವಚ್ಛ ಭಾರತದ ಬಗ್ಗೆ ಮಾತುಕತೆ**

2019ರ ಸೆಪ್ಟೆಂಬರ್ 22 ರಂದು ನಡೆದ ಹೌಡಿ ಮೋದಿ ಕಾರ್ಯಕ್ರಮದಲ್ಲಿ ಪ್ರಧಾನಮಂತ್ರಿಯವರು ಕಳೆದ 70 ವರ್ಷಗಳಲ್ಲಿ, ದೇಶದ ಗ್ರಾಮೀಣ ಪ್ರದೇಶಗಳ ನೈರ್ಮಲ್ಯ ಪ್ರಮಾಣ ಕಳಪೆ ಅಂದರೆ ಶೇ.38.70



"ಸ್ವಚ್ಛ ಭಾರತ ಅಭಿಯಾನದ ಯಶಸ್ಸು ನನ್ನದಲ್ಲ. ನಾನು ಈ ಯಶಸ್ಸು ನನ್ನದೆಂದು ಹೇಳುವುದಿಲ್ಲ, ಇದು ಜನರಿಗೆ ಸೇರಿದ್ದು. 100 ಮಹಾತ್ಮಾಗಾಂಧಿ ಬಂದರೂ ಅಥವಾ 1000 ನರೇಂದ್ರ ಮೋದಿ ಒಟ್ಟಿಗೆ ಬಂದರೂ ಸ್ವಚ್ಛತೆಯ ಕನಸು ನನಸಾಗುವುದಿಲ್ಲ. ಆದರೆ 125 ಕೋಟಿ ಭಾರತೀಯರು ಒಗ್ಗೂಡಿದರೆ ಈ ಕನಸು ಸುಲಭವಾಗಿ ಸಾಕಾರವಾಗುತ್ತದೆ."

**ಪ್ರಧಾನಮಂತ್ರಿ ನರೇಂದ್ರ ಮೋದಿ**

## ಅಂಕಿ ಅಂಶ ಮಾತನಾಡುತ್ತವೆ

| | ● ಗೃಹ ಶೌಚಾಲಯಗಳು | | ● ಸಾರ್ವಜನಿಕ ಶೌಚಾಲಯಗಳು | |
|---|---|---|---|---|
| | ಗುರಿ | 58,99,637 | ಗುರಿ | 5,07,589 |
| | ಸಾಧನೆ | 62,16,114 | ಸಾಧನೆ | 5,94,658 |
| | **105%** ಗುರಿಗಿಂತ ಅಧಿಕ | | ಗುರಿಯ **117 %** ರಷ್ಟು | |

- ಎನ್.ಎಚ್.ಎ.ಐ.ನ 500 ಶೌಚಾಲಯ ಸಮುಚ್ಚಯ ಸೇರಿದಂತೆ 290 ನಗರಗಳಲ್ಲಿ 60 ಸಾವಿರಕ್ಕೂ ಅಧಿಕ ಶೌಚಾಲಯ ವಿಭಾಗಗಳು ಗೂಗಲ್ ಮ್ಯಾಪ್‌ನಲ್ಲಿ ಕಾಣಿಸುತ್ತವೆ.
- ಸರ್ಕಾರ ಆರಂಭಿಸಿದ ಸ್ವಚ್ಛತಾ ಆಪ್ ಅನ್ನು 1.55 ಕೋಟಿ ನಾಗರಿಕರು ಡೌನ್ ಲೋಡ್ ಮಾಡಿಕೊಂಡಿದ್ದಾರೆ.

### ಸ್ವಚ್ಛ ಭಾರತ ಅಭಿಯಾನ (ಗ್ರಾಮೀಣ)

- 10,65,56,165 ಗೃಹ ಶೌಚಾಲಯಗಳನ್ನು 2014ರ ಅಕ್ಟೋಬರ್ 2ರಿಂದೀಚೆಗೆ ನಿರ್ಮಿಸಲಾಗಿದೆ.
- 6,03,177 ಗ್ರಾಮಗಳು ಬಯಲು ಶೌಚಮುಕ್ತ
- 2,62,736 ಬಯಲು ಶೌಚ ಮುಕ್ತ ಗ್ರಾಮ ಪಂಚಾಯತ್‌ಗಳು
- 706 ಬಯಲು ಶೌಚ ಮುಕ್ತ ಜಿಲ್ಲೆಗಳು
- 36 ಬಯಲು ಶೌಚ ಮುಕ್ತ ರಾಜ್ಯಗಳು/ ಕೇಂದ್ರಾಡಳಿತ ಪ್ರದೇಶಗಳು

| ಮನೆಗಳ ಶೌಚಾಲಯಗಳು ಹೇಗೆ ಹೆಚ್ಚಳವಾದವು – ಐಎಚ್.ಎಚ್.ಎಲ್ (ಶೇಕಡವಾರಲ್ಲಿ) | |
|---|---|
| ಅಕ್ಟೋಬರ್ 2, 2014 | 38.7 |
| 2015-2016 | 50.85 |
| 2016-2017 | 64.92 |
| 2017-2018 | 84.19 |
| 2018-2019 | 98.28 |
| 2019-2020 | 100 |
| 2020-2021 | 100 |

### ಸ್ವಚ್ಛ ಭಾರತ (ನಗರ)

**ಬಯಲು ಶೌಚ ಮುಕ್ತ (ನಗರ)**

| | |
|---|---|
| ಒಟ್ಟು ನಗರಗಳು **43,722** | ಪ್ರಮಾಣಿತ [ಓಡಿಎಫ್+] **1632 (37%)** |
| ಬಯಲು ಶೌಚಮುಕ್ತ ಘೋಷಿತ **4323 (99%)** | ಪ್ರಮಾಣಿತ [ಓಡಿಎಫ್++] **489 (11%)** |
| ಪ್ರಮಾಣಿತ ನಗರಗಳು **4204 (96%)** | |

**5-ಸ್ಟಾರ್ ಶ್ರೇಣಿಕರಣಗಳೊಂದಿಗೆ ಕಸ-ಮುಕ್ತ ನಗರಗಳು**

| ರಾಜ್ಯ | ಜಿಲ್ಲೆ | ನಗರ |
|---|---|---|
| ಛತ್ತೀಸಗಢ್ | ಸುರ್ಗುಜ | ಅಂಬಿಕಾಪುರ |
| ಗುಜರಾತ್ | ರಾಜ್‌ಕೋಟ್ | ರಾಜ್‌ಕೋಟ್ |
| ಗುಜರಾತ್ | ಸೂರತ್ | ಸೂರತ್ |
| ಕರ್ನಾಟಕ | ಮೈಸೂರು | ಮೈಸೂರು |
| ಮಧ್ಯಪ್ರದೇಶ | ಇಂದೋರ್ | ಇಂದೋರ್ |
| ಮಹಾರಾಷ್ಟ್ರ | ಥಾಣೆ | ನವಿ ಮುಂಬೈ |

# ಸ್ವಚ್ಛ ಭಾರತ ಅಭಿಯಾನ ಕುರಿತು ಪ್ರಧಾನ ಮಂತ್ರಿಗಳ ನುಡಿ

**ಸ್ವಚ್ಛ ಭಾರತ ಅಭಿಯಾನದ ಬಗ್ಗೆ ಪ್ರಧಾನಮಂತ್ರಿಯವರು ಮತ್ತು ಸರ್ಕಾರದ ಬದ್ಧತೆಯನ್ನು ಕಳೆದ 6 ವರ್ಷಗಳ ವಾಸ್ತವತೆಯಿಂದ ಅಳೆಯಬಹುದು, ಅವರು ಸ್ವಚ್ಛ ಭಾರತ ಅಭಿಯಾನದ ಬಗ್ಗೆ ಕೆಂಪುಕೋಟೆಯಿಂದ ನಿಯಮಿತವಾಗಿ ಇತ್ತೀಚಿನ ಮಾಹಿತಿ ಒದಗಿಸಿದ್ದಾರೆ. ಇಲ್ಲಿದೆ ಕೆಲವು ತುಣುಕುಗಳು:**

### 2020

ಗಾಂಧೀಜೀ ಅವರ 150ನೇ ಜಯಂತ್ಯುತ್ಸವ ವರ್ಷದಲ್ಲಿ ಭಾರತ ತನ್ನ ಗ್ರಾಮಗಳನ್ನು ಬಯಲು ಶೌಚ ಮುಕ್ತ ಮಾಡಿದೆ.

### 2019

2019ರ ಮುಂದಿನ ಇನ್ನು ಕೆಲವೇ ವಾರಗಳಲ್ಲಿ ಭಾರತ ತನ್ನನ್ನು ಬಯಲು ಶೌಚ ಮುಕ್ತ ಎಂದು ಘೋಷಿಸಿಕೊಳ್ಳಲಿದೆ ಎಂಬ ವಿಶ್ವಾಸ ನನಗಿದೆ. ರಾಜ್ಯಗಳು, ಗ್ರಾಮಗಳು, ಪುರಸಭೆಗಳು, ಮಾಧ್ಯಮ, ಪ್ರತಿಯೊಬ್ಬರೂ ಓಡಿಎಫ್ ಬಗ್ಗೆ ಜನಾಂದೋಲನ ಆರಂಭಿಸಿದ್ದಾರೆ.

### 2018

ನಾನು ಕೆಂಪುಕೋಟೆಯ ವೇದಿಕೆಯಿಂದ 2014ರಲ್ಲಿ ಸ್ವಚ್ಛತೆಯ ಬಗ್ಗೆ ಮಾತನಾಡುವಾಗ ಕೆಲವು ಜನರು ತಮಾಷೆ ಮಾಡಿದರು. ಬಾಪೂರವರು ತಮ್ಮ ಜೀವಿತಾವಧಿಯಲ್ಲಿ ಸ್ವಾತಂತ್ರ್ಯಕ್ಕಿಂತ ಸ್ವಚ್ಛತೆಗೆ ಹೆಚ್ಚಿನ ಮಹತ್ವ ನೀಡಿದ್ದರು.

### 2016

ದೇಶದ ಗ್ರಾಮಗಳಲ್ಲಿ ಮಹಿಳೆಯರ ಗೌರವದ ಅಭಿಯಾನ ಇಂದು ಮಹತ್ವದ ವಿಷಯವಾಗಿದೆ. ಬಯಲು ಶೌಚ ಅಭ್ಯಾಸ ನಿಲ್ಲಬೇಕು.

### 2015

2019ರಲ್ಲಿ, ನಾವು ಮಹಾತ್ಮಾ ಗಾಂಧಿ ಅವರ 150ನೇ ಜಯಂತಿ ಆಚರಿಸಲಿದ್ದೇವೆ. ಗಾಂಧೀ ಅವರ 150ನೇ ಜಯಂತ್ಯುತ್ಸವದ ಸಂದರ್ಭದಲ್ಲಿ ನಾವು ಸ್ವಚ್ಛ ಭಾರತವನ್ನು ಗೌರವದ ಕಾಣಿಕೆಯಾಗಿ ಅವರಿಗೆ ನೀಡಬೇಕು.

### 2014

ದೇಶದ ಎಲ್ಲ ಶಾಲೆಗಳೂ ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯ ಹೊಂದಿರಬೇಕು. ಆಗ ಮಾತ್ರ ನಮ್ಮ ಹೆಣ್ಣುಮಕ್ಕಳು ಶಾಲೆಯನ್ನು ಮಧ್ಯದಲ್ಲಿ ಬಿಡದಂತೆ ಮಾಡಬಹುದು.

### ಘನತ್ಯಾಜ್ಯ ನಿರ್ವಹಣೆ

**ತ್ಯಾಜ್ಯ ಉತ್ಪತ್ತಿ**
ದಿನಕ್ಕೆ **1,42,58** ಮೆ.ಟನ್

**ಸಂಸ್ಕರಣೆ**
ದಿನಕ್ಕೆ **95,066** ಮೆ.ಟನ್

**ಮನೆ ಮನೆ ಕಸ ಸಂಗ್ರಹಣೆ**
**83,213** ವಾರ್ಡ್‌ಗಳು

**ಕಸ ಮುಕ್ತ ನಗರ (ಸ್ಟಾರ್ ಶ್ರೇಣೀಕರಣ)**

| | |
|---|---|
| 1 - ಸ್ಟಾರ್ | 64 |
| 3 - ಸ್ಟಾರ್ | 86 |
| 5 - ಸ್ಟಾರ್ | 6 |

### ಎಸ್‌ಬಿಎಂ ಹೇಗೆ ಹಣ, ಜೀವ ಉಳಿಸುತ್ತದೆ ಮತ್ತು ಉದ್ಯೋಗ ಸೃಷ್ಟಿಸುತ್ತದೆ

- ಯುನಿಸೆಫ್ 2017ರ ವರದಿ ಪ್ರಕಾರ ಗ್ರಾಮಗಳ ಓಡಿಎಫ್ ನೊಂದಿಗೆ ನೈರ್ಮಲ್ಯದ ಹೆಚ್ಚಳ ಪ್ರತಿ ಕುಟುಂಬಕ್ಕೆ ಕಾಯಿಲೆಗಳ ಮೇಲೆ ವೆಚ್ಚ ಮಾಡುತ್ತಿದ್ದ ರೂ. 50 ಸಾವಿರ ಉಳಿದಿದೆ.
- 2018ರ ಡಬ್ಲ್ಯುಎಚ್‌ಓ ವರದಿಯ ಪ್ರಕಾರ ಈ ಅಭಿಯಾನ 3 ಲಕ್ಷ ಜೀವ ಉಳಿಸಿದೆ.
- 2019ರ ಯುನಿಸೆಫ್ ವರದಿಯ ಪ್ರಕಾರ ಸ್ವಚ್ಛ ಭಾರತ ಅಭಿಯಾನ ಗ್ರಾಮೀಣ ಭಾರತದಲ್ಲಿ 75.5 ಲಕ್ಷ ಪೂರ್ಣಕಾಲಿಕ ಉದ್ಯೋಗವನ್ನು 2014ರ ಅಕ್ಟೋಬರ್‌ನಿಂದ 2019ರ ಫೆಬ್ರವರಿ ನಡುವೆ ಸೃಷ್ಟಿಸಿದೆ.

ಆಗಿತ್ತು ಎಂದು ತಿಳಿಸಿದ್ದರು. ಪ್ರಸಕ್ತ ಸರ್ಕಾರ 11 ಕೋಟಿಗೂ ಅಧಿಕ ಶೌಚಾಲಯಗಳನ್ನು ಐದು ವರ್ಷಗಳಲ್ಲಿ ನಿರ್ಮಿಸಿದ್ದು, ಗ್ರಾಮೀಣ ನೈರ್ಮಲ್ಯ ಶೇ.99 ತಲುಪಿದೆ.

**ಜಾಗತಿಕ ಗೋಲ್ ಕೀಪರ್ ಪ್ರಶಸ್ತಿ**

ನ್ಯೂಯಾರ್ಕ್‌ನ ಲಿಂಕನ್ ಪ್ರದರ್ಶನ ಕಲೆಗಳ ಕೇಂದ್ರದಲ್ಲಿ ಬಿಲ್ ಮತ್ತು ಮಿಲಿಂದಾ ಗೇಟ್ಸ್ ಪ್ರತಿಷ್ಠಾನ 2019 ರ ಸೆಪ್ಟೆಂಬರ್‌ನಲ್ಲಿ ಸ್ವಚ್ಛ ಭಾರತ ಅಭಿಯಾನದ ಯಶಸ್ಸಿಗೆ ಪ್ರಧಾನಿ ನರೇಂದ್ರ ಮೋದಿಯವರಿಗೆ ಜಾಗತಿಕ ಗೋಲ್ ಕೀಪರ್ ಪ್ರಶಸ್ತಿಯನ್ನು ಪ್ರದಾನ ಮಾಡಿತು. ಈ ಅಭಿಯಾನದ ಮೂಲಕ 50 ಕೋಟಿ ಜನರಿಗೆ ಆರೋಗ್ಯ ರಕ್ಷಣೆ ದೊರೆತಿದೆ ಎಂದು ಪ್ರತಿಷ್ಠಾನ ಹೇಳಿತು. ■

# ಸಾಂಕ್ರಾಮಿಕದ ತಪಾಸಣೆ

**ಕೋವಿಡ್-19 ಸಾಂಕ್ರಾಮಿಕ ತಡೆಗೆ ಮುನ್ನೆಚ್ಚರಿಕೆ ವಹಿಸುವುದು ರೋಗ ಗುಣಪಡಿಸುವುದಕ್ಕಿಂತ ಉತ್ತಮ ಹಾಗೂ ಭಾರತ ಚೇತರಿಕೆ ದರದಲ್ಲಿ ಏರಿಕೆಯೊಂದಿಗೆ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ.**



ಜಾಗತಿಕ ಕರ ಸ್ವಚ್ಛತೆ ದಿನ ಅಕ್ಟೋಬರ್ 15ರಂದು ಬರುತ್ತದೆ, ಇದು ಕೋವಿಡ್–19 ಸಾಂಕ್ರಾಮಿಕದ ಸಮಯದಲ್ಲಿ ಅತ್ಯಗತ್ಯವಾಗಿದೆ. ಕೈ ತೊಳೆಯುವುದು ಮತ್ತು ನೈರ್ಮಲ್ಯ, ಮಾಸ್ಕ್ ಬಳಕೆ ಮತ್ತು 2 ಗಜ ವ್ಯಕ್ತಿಗತ ಅಂತರ ಕಾಪಾಡಿಕೊಳ್ಳುವುದಕ್ಕೆ ಗಮನ ಹರಿಸಲಾಗಿದ್ದು, ಕೊರೊನಾ ಸೋಂಕಿನ ವಿರುದ್ಧದ ಹೋರಾಟದಲ್ಲಿ ದೇಶ ದೈನಂದಿನ ಚೇತರಿಕೆ ದರದಲ್ಲಿ ಹೊಸ ಎತ್ತರಕ್ಕೆ ತಲುಪಿದೆ. ನಿರಂತರವಾಗಿ ಮೇಲ್ಮುಖವಾಗಿ ಸಾಗಿರುವ ಭಾರತದ ಚೇತರಿಕೆ ದರ 2020ರ ಸೆಪ್ಟೆಂಬರ್ 17ರಂದು ಶೇ.78.64 ತಲುಪಿದೆ.

ಭಾರತದ ಏಕ ದಿನದ ಚೇತರಿಕೆ ದರದಲ್ಲಿ ಅಭೂತಪೂರ್ವ ಹೆಚ್ಚಳ 2020ರ ಸೆಪ್ಟೆಂಬರ್ 21ರಂದು ದಾಖಲಾಗಿದೆ. 1 ಲಕ್ಷಕ್ಕೂ ಅಧಿಕ (1,01,468) ಹೊಸ ಚೇತರಿಕೆ ಒಂದೇ ದಿನದಲ್ಲಿ ದಾಖಲಾಗಿದೆ. ಇದರೊಂದಿಗೆ ಒಟ್ಟು ಗುಣಮುಖರಾದವರ ಸಂಖ್ಯೆ ಸುಮಾರು 45 ಲಕ್ಷ (44,97,867) ತಲುಪಿದೆ. ಇದರೊಂದಿಗೆ ಚೇತರಿಕೆ ದರ ಶೇ. 80.86 ತಲುಪಿದೆ. ಗರಿಷ್ಠ ಗುಣಮುಖ ಸಂಖ್ಯೆಯಲ್ಲಿ ಭಾರತದ ಹೆಗ್ಗುರುತಿನ ಸಾಧನೆ ಮಾಡಿ ವಿಶ್ವದಲ್ಲೇ ಅಗ್ರಸ್ಥಾನದಲ್ಲಿದೆ.

**'ಇ ಸಂಜೀವಿನಿ' ದಾಖಲೆಯ 3 ಲಕ್ಷ ದೂರಸಂಪರ್ಕ ಸಮಾಲೋಚನೆ ನಡೆಸಿದೆ**

ಕೇಂದ್ರ ಆರೋಗ್ಯ ಸಚಿವಾಲಯದ ಇ–ಸಂಜೀವಿನಿ ಟೆಲಿ ಸಮಾಲೋಚನೆಯ ಟೆಲಿಮೆಡಿಸಿನ್ ಸೇವೆ 3 ಲಕ್ಷ ಟೆಲಿ ಸಮಾಲೋಚನೆ ಪೂರ್ಣಗೊಳಿಸಿದೆ. ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ ಡಾ. ಹರ್ಷವರ್ಧನ್ ಅವರು 2020ರ ಆಗಸ್ಟ್ 9ರಂದು 1.5 ಲಕ್ಷ ಟೆಲಿ ಸಮಾಲೋಚನೆ ಪೂರ್ಣಗೊಂಡ ವಿಷಯ ಪ್ರಕಟಿಸುವ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಅಲ್ಲಿಂದೀಚೆಗೆ ವೇದಿಕೆ ಒಂದು ತಿಂಗಳುಗಳೊಳಗೆ ತನ್ನ ಸಮಾಲೋಚನೆ ಸಂಖ್ಯೆಯನ್ನು ದುಪ್ಪಟ್ಟಾಗಿಸಿದೆ. ■

## 44 ಲಕ್ಷ ರೋಗಿಗಳ ಚೇತರಿಕೆ

**ಕೊರೊನಾ ವಿರುದ್ಧ ಭಾರತದ ಹೋರಾಟ**

**ಸೆಪ್ಟೆಂಬರ್ 22, 2020 ರಂತೆ**




**56,46,010 ಪ್ರಕರಣಗಳು ಭಾರತದಲ್ಲಿ ವರದಿಯಾಗಿವೆ**

**ಚೇತರಿಕೆ ದರ 80.86%**

44,97,867 ರೋಗಿಗಳು ಗುಣಮುಖರಾಗಿದ್ದಾರೆ. 100 ರೋಗಿಗಳ ಪೈಕಿ 80 ಮಂದಿ ಚೇತರಿಸಿಕೊಳ್ಳುತ್ತಿದ್ದಾರೆ. ಮರಣ ಪ್ರಮಾಣ ದರ ಶೇ. 1.59 ಆಗಿದೆ.

ಸೆಪ್ಟೆಂಬರ್ 21 ರಂತೆ 1,01,468 ರೋಗಿಗಳು ಗುಣಮುಖರಾಗಿದ್ದಾರೆ.

ಶೇ.79ರಷ್ಟು ಗುಣಮುಖರಾದ ರೋಗಿಗಳು 10 ರಾಜ್ಯಗಳಾದ ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು ಮತ್ತು ಉತ್ತರಪ್ರದೇಶದವರಾಗಿದ್ದಾರೆ.

2020ರ ಮಾರ್ಚ್‌ನಿಂದ 36.3ಪಟ್ಟು ಐಸೋಲೇಷನ್ ಹಾಸಿಗೆಗಳ ಹೆಚ್ಚಳವಾಗಿದ್ದರೆ, ಶೇ.24.6ರಷ್ಟು ಐಸಿಯು ಹಾಸಿಗೆಗಳ ಹೆಚ್ಚಳವಾಗಿದೆ.

2,31,093 ಹಾಸಿಗೆಗಳಿಗೆ ಆಕ್ಸಿಜನ್ ಬೆಂಬಲವಿದ್ದರೆ, 32,575 ಹಾಸಿಗೆಗಳಿಗೆ ವೆಂಟಿಲೇಟರ್ ಸೌಲಭ್ಯವಿದೆ.

(ಆರೋಗ್ಯ ಸಚಿವಾಲಯದ ಮೂಲಗಳು ಸೆಪ್ಟೆಂಬರ್ 17ರಂದು ನೀಡಿದ ಅಂಕಿ–ಅಂಶ)



# ಜನರ ಸಬಲೀಕರಣ

**ಸರ್ಕಾರ ಆರಂಭಿಸಿದ ವಿವಿಧ ಯೋಜನೆಗಳು ದೇಶಾದ್ಯಂತ ಜನರಿಗೆ ಸಾಕಷ್ಟು ಪ್ರಯೋಜನ ತಂದಿವೆ ಮತ್ತು ಈಗ ಅವರು ಈ ಯೋಜನೆಗಳ ಪ್ರಯೋಜನದ ಬಗ್ಗೆ ಧ್ವನಿ ಎತ್ತುತ್ತಿದ್ದಾರೆ.**

## ಪಿಎಂಎವೈ-ಜಿ ಅಡಿಯಲ್ಲಿ ಮನೆ ಪಡೆದ ಮೊಹಮ್ಮದ್ ಶಫಿ



ಪ್ರಧಾನಮಂತ್ರಿ ವಸತಿ ಯೋಜನೆ – ಗ್ರಾಮೀಣ (ಪಿಎಂಎವೈ–ಜಿ) ಹಲವರಿಗೆ ತಮ್ಮ ಕನಸಿನ ಮನೆಯನ್ನು ಹೊಂದಲು ನೆರವಾಗಿದೆ. ಜಮ್ಮು ಮತ್ತು ಕಾಶ್ಮೀರದ ಪೂಂಚ್ ಜಿಲ್ಲೆಯ ಮೊಹಮ್ಮದ್ ಶಫಿ ಇಂಥ ಒಬ್ಬ ಫಲಾನುಭವಿಯಾಗಿದ್ದು ಅವರು "ಪಿಎಂಎವೈ–ಜಿಯಂಥ ಯೋಜನೆಗಾಗಿ ನಾನು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ಆಭಾರಿಯಾಗಿದ್ದೇನೆ' ಎಂದಿದ್ದಾರೆ. ಪೂಂಚ್ ಜಿಲ್ಲೆಯ ಮಾನ್ಕೋಟ್ ತಹಶೀಲ್‌ನಲ್ಲಿ ಅರ್ಧ ಡಜನ್‌ಗೂ ಹೆಚ್ಚು ಮನೆಗಳನ್ನು ಫಲಾನುಭವಿಗಳಿಗೆ ಹಸ್ತಾಂತರ ಮಾಡಲಾಗಿದೆ ಎಂದು ಹೇಳುತ್ತಾರೆ.

ಮತ್ತೊಬ್ಬ ಫಲಾನುಭವಿ, ರುಕ್ಸಾನಾ ಕೌಸರ್ "ನಾವು ಶೋಚನೀಯ ಜೀವನವನ್ನು ನಡೆಸುವಂತಾಗಿತ್ತು ಆದರೆ ಈಗ ನಾವು ಆರಾಮವಾಗಿ ಬದುಕುತ್ತಿದ್ದೇವೆ." ಎಂದು ತಿಳಿಸುತ್ತಾರೆ. ಸ್ವಂತ ಮನೆ ಹೊಂದುವ ಕನಸು ಕಂಡ ಫಲಾನುಭವಿಗಳಿಗಾಗಿ ಪಿಎಂಎವೈ ಅಡಿಯಲ್ಲಿ 2.25 ಕೋಟಿ ಮನೆಗಳನ್ನು ನಿರ್ಮಿಸಲಾಗಿದೆ.

## ಐಐಟಿ ಬಾಂಬೆಯ ನಾವಿನ್ಯಪೂರ್ಣ ವರ್ಚುವಲ್ ಸಮಾವೇಶ

ಪ್ರಧಾನಮಂತ್ರಿ ನರೇಂದ್ರ ಮೋದಿ 2018ರಲ್ಲಿ ಐಐಟಿ ಬಾಂಬೆಯ ಘಟಿಕೋತ್ಸವ ಸಮಾರಂಭದಲ್ಲಿ ಭಾಗಿಯಾದಾಗ, ಅವರು ಮಾನವತೆಯ ಸೇವೆ ಮಾಡಲು ನಾವಿನ್ಯಕ್ಕೆ ಮನವಿ ಮಾಡಿದ್ದರು. ಅವರ ಮನವಿ ಕೆಲಸ ಮಾಡಿದ್ದು, ಅದರ ಖ್ಯಾತಿಗೆ ತಕ್ಕಂತೆ ಸಂಸ್ಥೆ ಕರೋನಾ ವೈರಾಣು ಸಾಂಕ್ರಾಮಿಕ ಸಮಯದಲ್ಲಿ ವರ್ಚುವಲ್ ಘಟಿಕೋತ್ಸವ ಆಯೋಜಿಸಿತು. ವೇದಿಕೆಯಲ್ಲಿನ ಗಣ್ಯರಿಂದ ಹಿಡಿದು ಅತಿಥಿಗಳ ಸಂದೇಶದವರೆಗೆ ವಿದ್ಯಾರ್ಥಿಗಳಿಗೆ ಪದವಿಗಳನ್ನು ಹಸ್ತಾಂತರಿಸುವವರೆಗೆ ಎಲ್ಲವನ್ನೂ ಸಾಮಾನ್ಯ ರೀತಿಯಲ್ಲಿಯೇ ಆದರೆ ವರ್ಚುವಲ್ ಮೂಲಕ ನೆರವೇರಿಸಲಾಯಿತು. ಸಮಾರಂಭದಲ್ಲಿ ಭಾಗವಹಿಸಿದ ಬ್ಲಾಕ್ ಸ್ಟೋನ್ ಸಿಇಒ ಸ್ಟೀಫನ್ ವಾಚ್‌ಮ್ಯಾನ್ ಮತ್ತು ನೊಬೆಲ್ ಪ್ರಶಸ್ತಿ ವಿಜೇತ ಡಂಕನ್ ಎಂ ಹಾಲ್ಡೇನ್ ಮಾತನಾಡಿ "ಇಡೀ ಪ್ರಪಂಚವು ಈ ಕಾರ್ಯಕ್ರಮದಿಂದ ಕಲಿಯಬೇಕಾಗಿದೆ ಏಕೆಂದರೆ ಬದಲಾಗುತ್ತಿರುವ ಸಮಯದಲ್ಲಿ, ಭಾರತವು ನವೀನತೆ ಕ್ಷೇತ್ರದಲ್ಲಿ ತನ್ನನ್ನು ತಾನು ಬಲವಾಗಿ ಪ್ರಸ್ತುತಪಡಿಸುತ್ತಿದೆ" ಎಂದು ಹೇಳಿದರು.



## ಸಾಂಕ್ರಾಮಿಕದ ಸಂದರ್ಭದಲ್ಲಿ ಸರ್ಕಾರಿ ಯೋಜನೆಗಳು ನೆರವು ನೀಡಿವೆ




ಸಾಂಕ್ರಾಮಿಕದ ಬಗ್ಗೆ ಅರಿವಿಲ್ಲದ ರಾಂಚಿಯ ಪುಷ್ಪಾ ಚೌಧರಿ ತಮ್ಮ ಜನ್ ಧನ್ ಖಾತೆಯನ್ನು ಲಾಕ್ ಡೌನ್‌ಗೂ ಸ್ವಲ್ಪ ಮೊದಲು ತೆರೆದಿದ್ದರು, ಅದು ಅವರಿಗೆ ದೊಡ್ಡ ನೆರವಾಗಿ ಸಾಬೀತಾಯಿತು. "ನಾನು ಮೂರು ತಿಂಗಳುಗಳ ಕಾಲ ಮಾಸಿಕ 500 ರೂ. ಪಡೆದಾಗ ಅದು ನನಗೆ ತೃಪ್ತಿದಾಯಕವಾಗಿತ್ತು" ಎನ್ನುತ್ತಾರೆ. ಕೊರೊನಾ ವೈರಾಣು ದೇಶಕ್ಕೆ ಅಪ್ಪಳಿಸಿದಾಗ, ಜೈಪುರದ ಮಹೇಂದ್ರ ಸಿಂಗ್ ಪ್ರಜಾಪತಿ ಪಿಎಂ ಸ್ವನಿಧಿ ಯೋಜನೆ ಅಡಿ ಸಾಲ ಪಡೆದಿದರು, ರೈತರು ಕಿಸಾನ್ ಸಮ್ಮಾನ್ ನಿಧಿ ಅಡಿ ಪ್ರಯೋಜನ ಪಡೆದರು. ಮಹಾರಾಷ್ಟ್ರದ ಅಕೋಲದ ಹರಿದಾಸ್ ಪೇಗಮ್ ಎಂಬ ರೈತರು, ಕೊರೊನಾ ಕಾಲದಲ್ಲಿ ಪಿಎಂ ಕಿಸಾನ್ ಸಮ್ಮಾನ್ ನಿಧಿ ಅಡಿ ವರ್ಗಾವಣೆಯಾದ ಹಣ, ಕೀಟನಾಶಕ ಮತ್ತು ರಸಗೊಬ್ಬರ ಖರೀದಿಸಲು ನೆರವಾಯಿತು ಎನ್ನುತ್ತಾರೆ. ಪ್ರಧಾನಮಂತ್ರಿಯವರಿಗೆ ಫಲಾನುಭವಿಗಳು ಕೃತಜ್ಞತೆ ಸಲ್ಲಿಸುತ್ತಿದ್ದಾರೆ. ■



**Narendra Modi** @narendramodi ·
Pradhan Mantri Matsya Sampada Yojana will transform the fisheries sector. This scheme brings with it investments worth Rs. 20,050 crores, which is the highest ever in the history of the fisheries sector. PMMSY will add strength to the efforts of building an Aatmanirbhar Bharat.



**Rajnath Singh** @rajnathsingh ·
The induction of Rafale is a strong message for the world and especially for those who challenge India's sovereignty. The induction is a very important step in light of the prevailing security conditions that prevail, or I would say, that have been created along India's borders.



**Amit Shah** @AmitShah ·
To bring a transformational change in civil services, cabinet today approved #MissionKarmayogi. I thank PM @NarendraModi ji for this visionary reform. This holistic & comprehensive scheme will focus on individual aswell as institutional capacity building.



**Nitin Gadkari** @nitin_gad...
Under the leadership of PM Shri @narendramodi ji, Ministry of Road Transport and Highways has surpassed its target for construction of National Highways in the country During April to August this year. #PragatiKaHighway



**Narendra Singh Tomar** @nst...
Dear farmers, beware of lies being spread by the opposition parties related to farm bills.

Indian farmers of 21st centaury will cultivate and sell their produce freely without any restrictions.



**Dr Harsh Vardhan** @drharshv...
In India, a major focus has been on facilitating the development of #COVID19 vaccine. More than 30 vaccine candidates have been supported which are in different stages of development, 3 candidates are in advanced stage of Phase I/II/III trials.



PM: NEP nation's policy, not govt's

Modi says NEP needs to be implemented collectively as it lays emphasis on passion, practicality and performance

PM: E-delivery platform for street vendors in the works

Govt urges citizens to come forward for Covid-testing

World listening to India more, says PM

Modi says the media industry of the country needs to go global like other sectors

PM-Kisan norms eased for Covid, TN probes Rs 110 cr fraud, 18 held

India tests scramjet tech for hypersonic missiles, is 4th in club

Tech holds key to scale up use of solar energy: PM

PM launches Matsya Sampada Yojana, says scheme will double fish exports in 3-4 years

MODI LAUNCHES PROJECTS TO BOOST FISHERIES SECTOR, HAILS BIHAR CM NITISH

Modi, Abe may discuss future of bullet train project

India-Japan Summit likely later this week; date yet to be announced

RNI No. :
DELKAN/2020/78828
October: 1-15, 2020

ನ್ಯೂ ಇಂಡಿಯಾ
**ಸಮಾಚಾರ**
ಪಾಕ್ಷಿಕ

RNI Registered No. DELKAN/2020/7882, Delhi Postal License No DL(S)-1/3543/2020-22, WPP NO U (S)-91, posting at BPC, MEGHDOOT BHAWAN, NEW DELHI-110001 On 26-30 advance Fortnightly, (Publishing Date September 23, 2020, Pages 44)



ಸ್ವದೇಶಿ ಚಳವಳಿಯ ಸ್ವಾವಲಂಬನೆ ಮತ್ತು ವಿದೇಶೀ ವಸ್ತುಗಳನ್ನು ಬಹಿಷ್ಕರಿಸುವ ಕಲ್ಪನೆ ನಮ್ಮ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಬಲ ಆಯುಧಗಳಾಗಿ ಮಾರ್ಪಟ್ಟವು. ಚರಕವನ್ನು ವ್ಯಾಪಕ ಪ್ರಮಾಣದಲ್ಲಿ ಜನಪ್ರಿಯಗೊಳಿಸಲಾಯಿತು ಮತ್ತು ಖಾದಿ ರಾಷ್ಟ್ರೀಯ ಚಳವಳಿಯ ವಸ್ತ್ರವಾಯಿತು. ಗಾಂಧೀಜಿ ಖಾದಿಯನ್ನು ಸ್ವಾತಂತ್ರ್ಯದ ಮತ್ತು ಸ್ವಾವಲಂಬನೆಯ ಸಂಕೇತವಾಗಿ ಪರಿಗಣಿಸಿದ್ದರು. ಭಾರತ ಸರ್ಕಾರ ಮೇಕ್ ಇನ್ ಇಂಡಿಯಾ ಮತ್ತು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಸ್ವಾವಲಂಬಿ ಭಾರತದ ಕರೆಯ ಮೂಲಕ ಈ ಸ್ವದೇಶಿ ಸ್ಫೂರ್ತಿಯನ್ನು ಮುಂದುವರಿಸಿದೆ.

**“ಖಾದಿ ನನಗೆ ಭಾರತೀಯ ಮಾನವತೆಯ ಏಕತೆ, ಅದರ ಆರ್ಥಿಕ ಸ್ವಾತಂತ್ರ್ಯ ಹಾಗೂ ಸಮಾನತೆಯ ಸಂಕೇತವಾಗಿದೆ.”**

**ಮಹಾತ್ಮಾ ಗಾಂಧಿ**

**Published & Printed by: Satyendra Prakash**, DG, BOC on behalf of Bureau of Outreach and Communication

**Editor: Kuldeep Singh Dhatwalia** , PDG, PIB, New Delhi

Published from Bureau of Outreach and Communication, 2nd Floor, Soochna Bhawan, New Delhi -110003

**Printed at** Infinity Advertising services Pvt Ltd. FBD-One Corporate Park, 10th floor, New Delhi-Faridabad border, NH-1, Faridabad-121003

kannada Issue 7